

ಕಲ್ಯಾಣ ಕಿರಣ



ಜೂನ್-2008, ಬೆಲೆ-10.00

He Came, He Saw, He Conquered



ಪ್ರವಚನ ಪಿತಾಮಹ ಪೂಜ್ಯ ಶ್ರೀ ಮಹಾಜಗದ್ಗುರು
ಲಿಂಗಾನಂದ ಸ್ವಾಮೀಜಿಯವರು

Digitalized by e-Sahithya Documentation Forum
Sponsored by Sarayu Foundation Trust



ಬಸವ ಜಯಂತಿಯಂದು ರಾ.ಬ.ದಳದ ವತಿಯಿಂದ ಸಾರ್ವಜನಿಕರಿಗೆ ಏರ್ಪಡಿಸಿದ್ದ ಪ್ರಸಾದ ದಾಸೋಹ









ಕೊಪ್ಪಳದಲ್ಲಿ ನಡೆದ ವಿಶ್ವಧರ್ಮ ಪ್ರವಚನ ಮುಕ್ತಾಯ ಸಮಾರಂಭದ ಉದ್ಘಾಟನೆ ಪೂಜ್ಯ ಮಾತಾಜಿಯವರಿಂದ.

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಸಂಪುಟ-38	ಬಸವ ಶಕೆ-875	ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-6	ಜೂನ್ 2008	ವಾರ್ಷಿಕ ಚಂದಾ 100/- ರೂ.

ಗುರು ಸ್ಮರಣೆ

ಈ ಬಗೆಯ ನಿಲುವ ಇಸ್ನಾಪ ಜಂಗಮದೊಳು ಕಾಣೆ
ಬಸವ ಕರುಣೆಯ ಕಿರಣ ಗುರು ಲಿಂಗಾನಂದರಲಲ್ಲದೆ ||ಪ||



ಹರಿವ ಗಂಗೆಯ ತೆರದಿ ಜಗದ ಬಯಲಲಿ ಚರಿಸಿ
ವರ ಭಕ್ತಿ-ಜ್ಞಾನಗಳ ಬೆಳೆ ತೆಗೆದ ಗುರುವೆ।
ಬಸವ ಧರ್ಮದ ಪ್ರಭೆಯ ಪುನಃ ಬೆಳಗಿದ ಯೋಗಿ
ಬಸವ ಸಾಮ್ರಾಜ್ಯವನ್ನು ಕಟ್ಟಿದ ಮಹತ್ಯಾಗಿ ||1||

ಮನುಗೂಳಿಯಲಿ ಜನಿಸಿ ವಿಜಯಪುರದೊಳು ಓದಿ
ಬೆಳಗಾಂವಿಯ ನೆಲದಿ ಪದವಿಯಂ ಪಡೆದು।
ಧಾರವಾಡದಿ ಜ್ಞಾನ ಸಂಪದವ ಸಂಚಯಿಸಿ
ಚರಿಪ ಮಾರುತವಾಗಿ ಸುಳಿದ ಜ್ಞಾನದಾಸೋಹಿ ||2||

ಮಲ್ಲಪ್ಪ ಕಲ್ಲಮ್ಮ ದಂಪತಿಯ ಶಿಶುವಾಗಿ
ಚೆಲುವಿನಾ ಕಾಯವನು ಧರಿಸಿದ ಶಿವದೇಹಿ।
ಸಂಗಮೇಶನೆಂಬ ದಿವ್ಯ ನಾಮದಿ ಬೆಳೆದು
ಆದೆ ಲಿಂಗಾನಂದ ಬಸವ ಕರುಣೆಯ ಪಡೆದು ||3||



ಮಹಿಳಾಗುರು ಪೀಠವಂ ಸ್ಥಾಪಿಸಿದ ಮಹಾಗುರು
ಮಹಮನೆಯ ಆಸರೆಯ ನೀಡಿದ ಕಲ್ಪತರು।
ಕೂಡಲ ಸಂಗಮದ ಬಸವ ಧರ್ಮದ ಪೀಠ
ಏರಿ ಜಗದ್ಗುರುವಾಗಿ ಬೆಳಗಿದ ಸುವಿರಾಗಿ ||4||

ರಾಷ್ಟ್ರ ಪ್ರೇಮದ ಕಣಿಯೆ ಸತ್ಯನಿಷ್ಠೆಯ ಕಲಿಯೆ
ರಾಷ್ಟ್ರೀಯ ಬಸವ ದಳ ಸ್ಥಾಪಿಸಿದ ತತ್ತ್ವವಾದಿ।
ಪ್ರವಚನದ ಪಟುವಾಗಿ ಜ್ಞಾನ ನೀಡಿದ ಮೂರ್ತಿ
ವಚನ ವಾಙ್ಮಯ ಕೀರ್ತಿ ಪಸರಿಸಿದ ಗುರು ಜ್ಯೋತಿ ||5||



ಚೈತನ್ಯ ಚಿಲುಮೆಯೆ ಸತ್ಯ ಚಿಂತನ ನಿಧಿಯೆ
ಜಾತಿವಾದವ ಜರಿದ ವಿಶ್ವಪ್ರೇಮದ ಸುಧೆಯೆ।
ಶರಣ ಧರ್ಮದ ದಿವ್ಯ ವರರತ್ನ ತಾವು
ಎಂದು ಬಸವಾತ್ಮಜೆಯು ನಿತ್ಯ ನೆನೆಯುವೆ ನಾನು ||6||

-ಮಾತಾಜಿ

ಜನನ - 15-9-1931
ಕ್ರಿಯಾ ವಿಶ್ರಾಂತಿ - 30-6-1995

Digitalized by e-Sahithya Documentation Forum
Sponsored by Sarayu Foundation Trust

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಲೇಖನಗಳು	ಲೇಖಕರು	ಪುಟ
1. ಗುರು ಸ್ಮರಣೆ	ಮಾತಾಜಿ	-1
2. ಸಂಪಾದಕೀಯ :		
ವಯಸ್ಸಾದ ಮೇಲೆ ಚಿಂತನೆ ವಿಕೃತಗೊಳ್ಳುವುದೇ	ಮಾತಾಜಿ	-3
3. ದಶಹರ ಹಬ್ಬದಲ್ಲಿ ಶರಣರ ಚರಿತ್ರೆ ಪತಣ	-	-5
4. ಬಸವ ವಚನಾಮೃತ	ಮಾತಾಜಿ	-27
5. ವಚನ ದುಂದುಭಿ	ಸಚ್ಚಿದಾನಂದ	-37
6. ಬಸವ ಜಯಂತಿ - ಬಸವ ಪಂಚಮಿ		
ಅತ್ಯಂತ ಮಹತ್ವಪೂರ್ಣ ಹಬ್ಬಗಳು	ಮಾತಾಜಿ	-38
7. ಹಿಂದೂ ಧರ್ಮ ವಿಮರ್ಶೆ - ಭಾಗ - 2	-	-39

ಯೋಗಾಂಗ ತ್ರಿವಿಧಿ

ಮೊರೆವ ನಾದವ ಕೇಳಿ ಉರಿವ ಜ್ಯೋತಿಯ ನೋಡಿ
ಸುರಿವ ಅಮೃತವ ದಣಿದುಂಡ । ಕಾರಣವು
ತೊರೆದನು ಜನನ ಮರಣಗಳ ॥



ದಿ. 30-6-2008ರಂದು ಪೂಜ್ಯ ಶ್ರೀ ಲಿಂಗಾನಂದ
ಅಪ್ಪಾಜಿಯವರ ಲಿಂಗೈಕ್ಯ ಸಂಸ್ಮರಣೆ

ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿ ಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ।
ಗುರುದೇವ ಲಿಂಗಾನಂದ ಹೆಸರು ಅಮರವಾಗಿದೆ
ಸತ್ ಚಿತ್ ಆನಂದನ ಶುಭ ರಕ್ಷೆಯು ತಮಗಿದೆ॥

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ : 22923736/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಸಂಪಾದಕೀಯ :

ವಯಸ್ಸಾದ ಮೇಲೆ ಚಿಂತನೆ ವಿಕೃತಗೊಳ್ಳುವುದೆ?

- ಮಾತಾಜಿ

ಅರವತ್ತು ವರ್ಷಕ್ಕೆ ಅರುಳು ಮರುಳು ಎಂಬುದೊಂದು ಕನ್ನಡ ಗಾದೆ. ಇದು ಸಾಮಾನ್ಯರ ಜೀವನಕ್ಕೆ ಅನ್ವಯವಾಗುವುದೇ ವಿನಾ ಸಾಹಿತಿಗಳ ಚಿಂತನೆಗಲ್ಲ. ಶಿವೈಕ್ಯ ಡಾ॥ ಜಚನಿ, ಡಾ॥ ಚಿದಾನಂದ ಮೂರ್ತಿಯವರ ಬಗ್ಗೆ ಚಿಂತಿಸಿದಾಗ ಈ ಗಾದೆ ಇವರ ಚಿಂತನೆಗೂ ಅನ್ವಯವಾಗುವುದೇ ಎನ್ನಿಸದಿರದು.

ಪೂಜ್ಯ ಡಾ॥ ಜಚನಿ ಬರೆದ ಸಾಹಿತ್ಯ ಹೆಚ್ಚಾಗಿ ಶರಣ ಸಾಹಿತ್ಯಕ್ಕೆ ಸಂಬಂಧಿಸಿದ್ದು ನಮಗೆಲ್ಲ ಬಹಳಷ್ಟು ಪ್ರೇರಣೆ ನೀಡಿತು. ಆದರೆ ನಂತರ ಅವರಿಗೆ ಪಂಚಾಚಾರ್ಯ ವಾದದ ಭೂತ ಬಡಿಯಿತು. ಅಲ್ಲಿಂದ ಶುರುವಾಯಿತು ಅಪ್ರಾಮಾಣಿಕತನ. ಆಮೇಲೆ ಏನೇನೋ ಸತ್ಯಕ್ಕೆ ವಿರುದ್ಧವಾಗಿ ಬರೆಯ ತೊಡಗಿದರು. ಮೊದಲು ಮೆಚ್ಚಿಕೊಂಡ ನಾವೇ ಅವರನ್ನು ವಿಮರ್ಶಿಸಿ, ಟೀಕಿಸಬೇಕಾಯಿತು. ಡಾ॥ ಚಿದಾನಂದ ಮೂರ್ತಿಯವರ ಮೊದಲಿನ ಸಾಹಿತ್ಯ ಪ್ರಾಮಾಣಿಕವಾಗಿತ್ತು. ಬರುಬರುತ್ತ ಬದಲಾಯಿತು. ಈಗಲೂ ಅವರು (ಕಾಲ್ಪನಿಕ) ರೇಣುಕಾಚಾರ್ಯರನ್ನೊಪ್ಪದೆ ಐತಿಹಾಸಿಕ ರೇವಣಸಿದ್ಧರನ್ನು ಮಾತ್ರ ಒಪ್ಪುವರಾದರೂ ಲಿಂಗಾಯತ ಧರ್ಮದ ಸ್ಥಾಪಕರು ಬಸವಣ್ಣನವರೆಂದು ಹೇಳದೆ ಸಂದಿಗ್ಧವಾಗಿ ನುಡಿದು ಲಿಂಗಾಯತ - ವೀರಶೈವ ಒಂದೇ ಎಂದು ಸಾಧಿಸಲು ಕಷ್ಟಪಟ್ಟು ಹೆಣಗುವುದಲ್ಲದೆ ಕೃತ್ರಿಮ ವಚನಗಳನ್ನು ಪುನಃ ಪುನಃ ಉದಾಹರಿಸುತ್ತಾರೆ.

ಈಗ ಡಾ॥ ಎಲ್.ಬಸವರಾಜು ಅವರ ಸರದಿ. ಕರ್ನಾಟಕ ಸರ್ಕಾರವು ಪ್ರೊ.ಡಾ॥ ಎಲ್.ಬಸವರಾಜು ಅವರನ್ನು ಬಸವ ಪುರಸ್ಕಾರ ಪ್ರಶಸ್ತಿಗೆ ಆಯ್ಕೆ ಮಾಡಿತು. ದಿ. 30-4-2006ರಂದು ಅವರಿಗೆ ಆಗಿನ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು 873ನೆಯ ಬಸವ ಜಯಂತಿಯಂದು ಬಸವ ಪುರಸ್ಕಾರವನ್ನು ಎಲ್.ಬಸವರಾಜು ಅವರಿಗೆ ಪ್ರದಾನ ಮಾಡಿದರು. 2006ರ ಮೇ - ಜೂನ್ ಕಲ್ಯಾಣ ಕಿರಣದಲ್ಲಿ ನಾವೂ ಡಾ॥ ಎಲ್. ಬಸವರಾಜು ಅವರನ್ನು ಅಭಿನಂದಿಸಿದೆವು. ಅವರು ಸಂಪಾದಿಸಿರುವ ಕೃತಿಗಳು ಮಹತ್ವ ಪೂರ್ಣವಾದವು. ವಚನಗಳ ಸಂಗ್ರಹ, ಶಿವದಾಸ ಗೀತಾಂಜಲಿ ಮುಂತಾದುವು ಅನುಪಮ ಕೊಡುಗೆಗಳು.

ಪ್ರಜಾವಾಣಿಯ ಸಾಪ್ತಾಹಿಕ ಪುರವಣಿ ದಿ.20-4-2008ರ ಸಂಚಿಕೆಯಲ್ಲಿ ಒಂದು ಪುಸ್ತಕದ ವಿಮರ್ಶೆ ಬಂದಿದೆ. ''ಸೊನ್ನಲಾಪುರದ ಸಂತ ಸಿದ್ಧರಾಮನ ನಿಜ ವಚನಗಳು'' ಎಂಬುದು ಆ ಪುಸ್ತಕದ ಹೆಸರು. ಬೆಲೆ 250/-, ಪ್ರಕಾಶಕರು ಸಾರಾ ಎಂಟರ್‌ಪ್ರೈಸಸ್, ಮೈಸೂರು. ದಿ.13-5-2008ರಂದು ಶರಣ. ಕಲ್ಯಾಣಪ್ಪ ಪರಮಾದಿ ವಿಮರ್ಶೆಯ ಪೇಪರ್ ಭಾಗವನ್ನು ನನಗೆ ಕೊಟ್ಟರು. ಡಾ॥ ನೀಲಗಿರಿ ತಳವಾರ ಎಂಬುವವರು ವಿಮರ್ಶಿಸಿದ್ದಾರೆ. ಇದರ ಸಾರ ಹೀಗಿದೆ:

1. ಸಿದ್ಧರಾಮೇಶ್ವರರು ಕ್ರಿ.ಶ.1265ರವರೆಗೂ ಬದುಕಿದ್ದರು.
2. ಬಸವಣ್ಣನವರ ಲಿಂಗೈಕ್ಯ 1169. ಉಭಯತರಿಗೆ ಸುಮಾರು 100 ವರ್ಷಗಳ ಅಂತರ.
3. ಸಿದ್ಧರಾಮೇಶ್ವರರು ಚನ್ನಬಸವಣ್ಣನವರಿಂದ ಲಿಂಗದೀಕ್ಷೆ ಪಡೆದರೆಂಬುದು ಈ ದೃಷ್ಟಿಯಿಂದ ಅಸಂಗತ.
4. ಸಿದ್ಧರಾಮೇಶ್ವರರು ಯೋಗಿಯಾಗಿ ಸಿದ್ಧಿಪಡೆದ ನಂತರದ ಕಾಲದಲ್ಲೂ ಲಿಂಗಧಾರಿ - ಯಾಗದೆ ಒಬ್ಬ ಸಾಮಾನ್ಯ ಶೈವರಾಗಿದ್ದರು.
5. ಬಸವಣ್ಣ, ಚನ್ನಬಸವಣ್ಣನವರ ಕಡೆಯಿಂದ ಲಿಂಗದೀಕ್ಷೆಯಾಗಿ ಅವರು ಅವರ ಶಿಷ್ಯವರ್ಗಕ್ಕೆ ಸೇರಿದನೆಂಬುದು ಪ್ರಚಾರವಾದರೆ ವೀರಶೈವ ಪಂಥಕ್ಕೆ ಒಂದು ಪುನಶ್ಚೇತನ ಮತ್ತು ಪ್ರತಿಷ್ಠೆ ದೊರೆತೀತು ಎಂದು ವೀರಶೈವ ಮತೀಯರ ತಂತ್ರ.
6. ಈ ಹಿನ್ನೆಲೆಯಲ್ಲಿ 12ನೇ ಶತಮಾನದಿಂದಲೇ ರೇಣುಕಾಚಾರ್ಯ ಪಂಥದವರು ಮತ್ತು ಬಸವಣ್ಣನವರ ಪಂಥದವರು ಎಂದು ಎರಡು ಪಂಥಗಳು ವೀರಶೈವದಲ್ಲಿ ತಲೆಯೆತ್ತಲು ಆರಂಭಿಸಿದವು.

ಒಂದಕ್ಕಿಂತ ಒಂದು ಆಘಾತಕಾರಿ ಸುಳ್ಳನ್ನು ಸಂಶೋಧನೆಯ ಸೋಗಿನಲ್ಲಿ ಡಾ॥ ಎಲ್.ಬಸವರಾಜು ಪ್ರತಿಪಾದಿಸಿ ಅವರಿಗೆ ಅರುಳು ಮರುಳಾಗಿರಬಹುದು ಎಂಬ ಸಂದೇಹವನ್ನು

Digitalized by e-Sahithya Documentation Forum
Sponsored by Sarayu Foundation Trust

ಹುಟ್ಟಿಸುತ್ತಾರೆ.

ಗುರು ಬಸವಣ್ಣನವರ ಜೀವನದಲ್ಲಿ ಅತ್ಯಂತ ಮಹತ್ವಪೂರ್ಣ ವರ್ಷಗಳೆಂದರೆ ಕಲ್ಯಾಣವನ್ನು ಪ್ರವೇಶಿಸಿದ ವಿಕ್ರಮನಾಮ ಸಂವತ್ಸರ; ಮತ್ತು ಕಲ್ಯಾಣದಿಂದ ಅವರು ನಿರ್ಗಮಿಸಿದ ರಾಕ್ಷಸನಾಮ ಸಂವತ್ಸರ. ಈ ಪದಗಳ ಉಲ್ಲೇಖವು ಕಾಲಜ್ಞಾನ ವಚನಗಳಲ್ಲಿ ಪದೇ ಪದೇ ಬಂದಿವೆ. ಇವನ್ನು ಇಂಗ್ಲೀಷ್ ವರ್ಷ (ಕ್ರಿ.ಶ)ಕ್ಕೆ ಪರಿವರ್ತಿಸಿದರೆ ವಿಕ್ರಮನಾಮ ಸಂವತ್ಸರ 1160ರಲ್ಲಿ, ರಾಕ್ಷಸನಾಮ ಸಂವತ್ಸರ 1196ರಲ್ಲಿ ಬರುತ್ತವೆ. ಗುರು ಬಸವಣ್ಣನವರು ಲಿಂಗೈಕ್ಯರಾದುದು 1196ರಲ್ಲಿ.

ವಚನ ಸಾಹಿತ್ಯದ ಆಧಾರ ಸಿಗದೆ ಇದ್ದರೆ ಇನ್ನೂ ಯಾರ್‍ಯಾರು, ಏನೇನು ಚಿತ್ರ ವಿಚಿತ್ರ ಬರಹಗಳನ್ನು ಸಂಶೋಧನೆಯ ಸೋಗಿನಲ್ಲಿ ಹೊರಹಾಕುತ್ತಿದ್ದರೋ! ಸಿದ್ಧರಾಮೇಶ್ವರರ ನೂರಾರು ವಚನಗಳಲ್ಲಿ ಅವರು ಕಲ್ಯಾಣಕ್ಕೆ ಬಂದುದು, ಅನುಭವ ಮಂಟಪದ ಚರ್ಚೆಯಲ್ಲಿ ಭಾಗಿಯಾದುದು, ದೀಕ್ಷೆಯನ್ನು ಚನ್ನಬಸವಣ್ಣನವರಿಂದ ಪಡೆದು ಸಹಜವಾಗಿ ಅಕೃತ್ರಿಮವಾಗಿ ದಾಖಲಾಗಿವೆ. ಪಂಡಿತರ ಸಾಹಿತ್ಯ (ಉದಾ: ಡಾ|| ಚಿ.ಮೂ., ಡಾ|| ಎಲ್.ಬಸವರಾಜು) ಏನು ಬೇಕಾದರೂ ಸುಳ್ಳನ್ನು ಸೃಷ್ಟಿಸಬಹುದು. ಅನುಭಾವಿಗಳ ಸಾಹಿತ್ಯ ಹೃದಯಾಂತರಾಳದಿಂದ ಹೊರಹೊಮ್ಮುವ ಅನುಭಾವದ ಸೆಲೆ. ಅಂಥ ರಚನೆ ಪಂಡಿತರಿಂದ ಸಾಧ್ಯವಿಲ್ಲ. ಕಾಲಜ್ಞಾನ ವಚನಗಳಲ್ಲಿ, ಕಲ್ಯಾಣ ಕ್ರಾಂತಿಯಾದ ನಂತರ ಶರಣರು ಎರಡು ತಂಡಗಳಲ್ಲಿ ಹೊರಡುತ್ತಾರೆ. ಅದರಲ್ಲಿ ಮಾಚಿದೇವರ ನೇತೃತ್ವದಲ್ಲಿ ಸಾಹಿತ್ಯ ಒಯ್ಯುತ್ತಾರೆ. ಅಕ್ಕನಾಗಮ್ಮ, ಚನ್ನಬಸವಣ್ಣ ಸೊನ್ನಲಾಪುರಕ್ಕೆ ಹೋಗಿ ಶೂನ್ಯ ಪೀಠದ ಮೂರನೆಯ ಅಧಿಕಾರಿಯನ್ನಾಗಿ ಸಿದ್ಧರಾಮೇಶ್ವರರನ್ನು ಘೋಷಿಸಿ, ಸಮಾಜ -ಧರ್ಮಗಳ ಸಂರಕ್ಷಣೆಯ ಹೊಣೆಗಾರಿಕೆ ವಹಿಸಿ ಹೊರಟು ಶರಣರ ತಂಡವನ್ನು ಕೂಡಿಸಿಕೊಳ್ಳುತ್ತಾರೆ. ವಚನಗಳಿಗೆ ಪೂರಕವಾದ ಮಾಹಿತಿ ಕಾಲಜ್ಞಾನ ವಚನಗಳಲ್ಲಿ ಸಿಗುತ್ತದೆ. ಕೃತ್ರಿಮ ಸಾಹಿತ್ಯ ರಚಿಸುವ ಕಳ್ಳರು ಎಷ್ಟು ಜಾಣರಾಗಿದ್ದರೂ ಎಲ್ಲಾದರೂ ಸಿಕ್ಕಿ ಕೊಳ್ಳುತ್ತಾರೆ.

ಸಿದ್ಧರಾಮೇಶ್ವರರು ಲಿಂಗಧಾರಿಯಾಗದೆ ಕೇವಲ ಶೈವ ಸಾಧುವಾಗಿಯೇ ಇದ್ದರು ಎಂಬ ವಿಕೃತ ಸಂಶೋಧನೆಯನ್ನು ಎಲ್.ಬಸವರಾಜು ಮಾಡಿರುವುದಾಗಿ ವಿಮರ್ಶೆಯಿಂದ ತಿಳಿಯುತ್ತದೆ.

ಒಬ್ಬ ಪುರುಷನನ್ನು ಷಂಡ ಎಂದು ಆರೋಪಿಸುತ್ತಾರೆ ಎಂದುಕೊಳ್ಳೋಣ.ಆದರೆ ಆತನ ಜೊತೆ ಅವನನ್ನೇ ಹೋಲುವ ಮಗ ಎದೆಮಟ್ಟ ಬೆಳೆದು ನಿಂತಾಗ, ಅವನು "ಈತನು ನನ್ನ ಅಪ್ಪ" ಎಂದು, ಆತ, ಈತನು ನನ್ನ ಮಗ" ಎಂದು ಹೇಳುವಾಗ ಆ ವ್ಯಕ್ತಿಯನ್ನು ಷಂಡ ಎನ್ನಬಹುದೆ? ಒಬ್ಬ ಮಹಿಳೆಯನ್ನು ಬಂಜೆ ಎಂದು ಮೂದಲಿಸುತ್ತಾರೆ ಎಂದುಕೊಳ್ಳೋಣ. ಆಕೆಯನ್ನು ಹೋಲುವ ಮಗ/ ಮಗಳು ಜೊತೆಗಿದ್ದು" "ಈಕೆ ನನ್ನ ತಾಯಿ" ಅನ್ನುತ್ತಾರೆ. ಆಕೆ, ಇವನು/ ಇವಳು ನನ್ನ ಮಗಳು ಅನ್ನುತ್ತಾರೆ. ಆಗ ಆಕೆಯನ್ನು ಬಂಜೆ ಎನ್ನುವದಕ್ಕೆ ಬರುವುದೆ?

ಹಾಗೆ, ಶ್ರೀ ಸಿದ್ಧರಾಮೇಶ್ವರರನ್ನು ತಮ್ಮ ಕುಲಗುರುವೆಂದು ದೃಢವಾಗಿ ನಂಬಿರುವ ನೊಳಂಬ ಲಿಂಗಾಯತ ಸಮಾಜ ಎಂಬ ಸಂತಾನ ಸ್ಪಷ್ಟವಾಗಿ ಕಣ್ಣೆದುರಿಗೆ ಇರುವಾಗ ಸಿದ್ಧರಾಮೇಶ್ವರರು ಲಿಂಗಧಾರಿಗಳಾಗದ ಶೈವ ಸನ್ಯಾಸಿ ಎಂದು ಹೇಳಲು ಬರುವುದೆ ? ಒಂದು ವೇಳೆ ಅವರು ಅಲಿಂಗಿಗಳೇ ಆಗಿದ್ದಿದ್ದರೆ ಅವರ ಶಿಷ್ಯ ಸಮೂಹವೂ ಹಾಗೆಯೇ ಇರುತ್ತಿತ್ತು. ಲಿಂಗಾಯತ ಸಮಾಜ ಹೆಚ್ಚಿನ ಸಂಖ್ಯೆಯಲ್ಲಿ ಇರುವ ಊರು ಹುಬ್ಬಳ್ಳಿಯಲ್ಲ,ಸೊಲ್ಲಾಪುರ. ಇದು ಯಾರ ಕೊಡುಗೆ? ಶ್ರೀ ಸಿದ್ಧರಾಮೇಶ್ವರರದು. ಸೊನ್ನಲಾಪುರದ ಸಿದ್ಧರಾಮೇಶ್ವರ, ಗುಡ್ಡಾಪುರದ ದಾನಮ್ಮ, ಬೀಡ್ ಜಿಲ್ಲೆಯಲ್ಲಿ ಮನ್ಮಥಸ್ವಾಮಿ, ಕೊಲ್ಹಾಪುರದ ಕಡೆ ಅಲ್ಲಮಪ್ರಭು, ಸಿದ್ಧರಾಮೇಶ್ವರರ ಜೋಡಿ ಕಾರ್ಯ ಮಾಡಿತೆಂದೇ ಅಲ್ಲೆಲ್ಲ ಲಿಂಗಾಯತ ಸಮಾಜವು ದಟ್ಟವಾಗಿ ಹಬ್ಬಿರುವುದು.

ವೀರಶೈವ ವಾದವು 15-16ನೆಯ ಶತಮಾನದಲ್ಲಿ ವಚನಗಳ ಸಂಗ್ರಹ, ಸಂಪಾದನೆ ನಡೆದಾಗ ವಚನ ಸಾಹಿತ್ಯದಲ್ಲಿ ನುಸುಳಿದೆ. ರೇಣುಕಾಚಾರ್ಯರ ಕಲ್ಪನೆ 20ನೆಯ ಶತಮಾನದ ಆದಿಯಲ್ಲಿ ಆರಂಭವಾಗಿದೆ. ಹೇಗೆ ಎಲ್.ಬಸವರಾಜು ಸಿದ್ಧರಾಮೇಶ್ವರರನ್ನು ಇಷ್ಟಲಿಂಗ ವಿಹೀನರನ್ನಾಗಿ ಶೈವ ಸಾಧುವನ್ನಾಗಿ ಮಾಡಿದ ವಾದವನ್ನು ಮೈಸೂರಲ್ಲಿ ಹುಟ್ಟುಹಾಕಿದ್ದಾರೋ ಅದೇ ರೀತಿ ಕಾಶೀನಾಥ ಶಾಸ್ತ್ರಿ (ಮುದುಕಯ್ಯ ಹಿರೇಮಠ) ಎಂಬ ವ್ಯಕ್ತಿ ರೇಣುಕಾದಿ ಪಂಚಾಚಾರ್ಯರ ಕಲ್ಪನೆಯನ್ನು ಮೈಸೂರಿನಲ್ಲೇ ಹುಟ್ಟುಹಾಕಿದ್ದು ಬಹುಶಃ ಲಿಂಗಾಯತ

ಸಮಾಜ ದುರ್ದೈವೀ ಸಮಾಜವಿರಬೇಕು. ಇದಕ್ಕೆ ಶತ್ರುಗಳು ಹೊರಗಿನವರಲ್ಲ ಡಾ|| ಎಲ್.ಬಸವರಾಜುರಂತಹ ವಚನ ಸಾಹಿತ್ಯಕ್ಕಾಗಿ ದುಡಿದವರೂ ಆಂತರಿಕ ಶತ್ರುಗಳಾಗುತ್ತಿರುವಾಗ ಇನ್ನು ಬಂಜಗೆರೆ ಜಯಪ್ರಕಾಶರಂಥವರನ್ನು ದೂಷಿಸಲು ಹೇಗೆ ಸಾಧ್ಯ?

ಲಿಂಗಾಯತ ಸಮಾಜದ ಅವಿಭಾಜ್ಯ ಅಂಗವಾಗಿರುವ ಶರಣ ಪರಂಪರೆಯ ಪ್ರಮುಖ ವ್ಯಕ್ತಿಯಾಗಿರುವ ಸಿದ್ಧರಾಮೇಶ್ವರರ ಇಷ್ಟಲಿಂಗವನ್ನು ಕಿತ್ತುಕೊಳ್ಳುವ ಎಲ್.ಬಸವರಾಜು ಅವರ ಸಾಧನೆ, ಡಾ|| ನೀಲಗಿರಿ ತಳವಾರರ ವಿಮರ್ಶೆ ಪ್ರಾಮಾಣಿಕವಾಗಿ ಇದ್ದರೆ, ಎಲ್ಲ ಬಣ್ಣಗಳನ್ನು ಮಸಿ ನುಂಗಿತು ಎಂಬಂತೆ ಈವರೆಗಿನ ಎಲ್ಲ ಸಂಶೋಧನೆ -ಸಾಧನೆಯ ಮೇಲೆ ಕಪ್ಪು ಮಸಿ ಚೆಲ್ಲಿದಂತೆ; ಖಂಡನಾರ್ಹ!

ದಶಹರ ಹಬ್ಬದಲ್ಲಿ ಶರಣರ ಚರಿತ್ರೆ ಪಠಣ

ಶರಣ ಬಂಧುಗಳೇ,

ಸತ್ತವರ ಕಥೆ, ಕೊಂದವರ ಕಥೆಗಳನ್ನು ಓದದೆ ಲೋಕವನ್ನು ಉಳಿಸಿದ ಶರಣರ ಕಥೆ ಓದುವ ಪರಿಪಾಠ ಬೆಳೆಸಿಕೊಂಡು, ನವರಾತ್ರಿಯಲ್ಲಿ 9 ಶರಣರ ಚರಿತ್ರೆ ಓದಬೇಕೆಂದು ತಮ್ಮಲ್ಲಿ ಬಿನ್ನೈಸಲಾಗಿತ್ತು. ಅನೇಕರು ನಮಗೆ ಸಂಕ್ಷಿಪ್ತವಾಗಿ ಕಥೆಗಳನ್ನು ಕೊಡಿರಿ ಎಂದು ಕೋರಿ ಕೊಂಡಿದ್ದರು. ಅದಕ್ಕಾಗಿ 2008ರ ಸೆಪ್ಟಂಬರ್ 30ರಿಂದ ಆರಂಭವಾಗುವ ದಸರಾ (ನವರಾತ್ರಿ) ಕಾರ್ಯಕ್ರಮದಲ್ಲಿ ಕೆಳಕಂಡಂತೆ ಶರಣರ ಚರಿತ್ರೆ ಪಾರಾಯಣ ಮಾಡಬೇಕು.

1.	ದಿ. 30 -09-2008	-	ವಿಶ್ವಗುರು ಬಸವಣ್ಣನವರು (ಪ್ರತಿಪದೆ)
2.	ದಿ. 01-10-2008	-	ಚಿನ್ಮಯಜ್ಞಾನಿ ಚನ್ನಬಸವಣ್ಣ
3.	ದಿ. 02-10-2008	-	ಶೂನ್ಯಪೀಠಾಧೀಶ ಅಲ್ಲಮಪ್ರಭುದೇವರು
4.	ದಿ. 03-10-2008	-	ಲಿಂಗಾಂಗಯೋಗಿ ಸಿದ್ಧರಾಮೇಶ್ವರ
5.	ದಿ. 04-10-2008	-	ವೀರ ವಿರಾಗಿಣಿ ಅಕ್ಕಮಹಾದೇವಿ
6.	ದಿ. 05-10-2008	-	ವೀರ ಮಾತೆ ಅಕ್ಕನಾಗಲಾಂಬಿಕೆ
7.	ದಿ. 06-10-2008	-	ವೀರ ಗಣಾಚಾರಿ ಮಡಿವಾಳ ಮಾಚಿದೇವರು
8.	ದಿ. 07-10-2008	-	ಹುತಾತ್ಮರಾದ ಹರಳಯ್ಯ -ಮಧುವಯ್ಯ
9.	ದಿ. 08-10-2008	-	ಕಲ್ಯಾಣ ಕ್ರಾಂತಿ
10.	ದಿ. 09-10-2008	-	ಬಸವ ಧರ್ಮ ವಿಜಯೋತ್ಸವ

ದಿ.9-10-2008ರಂದು ವಿಶೇಷ ಕಾರ್ಯಕ್ರಮ, ಗಣ ದಾಸೋಹ ಮಾಡಬೇಕು. ಶರಣರ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಜೂನ್, ಜುಲೈ, ಆಗಸ್ಟ್, ಸೆಪ್ಟಂಬರ್ -ಕಲ್ಯಾಣ ಕಿರಣಗಳಲ್ಲಿ ಕೊಡಲಾಗುವುದು. ತನ್ನಿಮಿತ್ತ ಈ ಸಲ ವಿಶ್ವಗುರು ಬಸವಣ್ಣ ಮತ್ತು ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ಚರಿತ್ರೆ ಕೊಡಲಾಗುವುದು.

ಪಾರಾಯಣಕ್ಕೆ ಮೊದಲು ಗುರು ಬಸವ ಪೂಜೆ

ಮುಕ್ತಿದಾಯಕ ಶರಣ ರಕ್ಷಕ ನಿತ್ಯ ಮೂರುತಿ ಬಸವನೆ
ಭಕ್ತಿಯಿಂದಲಿ ಚರಣ ಕಮಲಕೆ ನಿತ್ಯವಂದಿಪೆ ತಂದೆಯೆ ||ಪ||

ಅರಿವು ಇಲ್ಲದ ಮನುಜ ಜನ್ಮವು ಶಾಪವೆನ್ನುತ ನೊಂದೆನು
ಮರೆವ ಹರಿಯುವ ಗುರುವೆ ಎನುತಲಿ ನಿನ್ನ ಚರಣವ ಪಿಡಿದೆನು।
ನಿನ್ನ ಕರುಣೆಯು ಎನ್ನ ಬಾಳಿನ ರಕ್ಷೆ ಎನುತಲಿ ನಂಬಿಹೆ
ಬನ್ನ ತೊಡೆಯುವ ಬೆಳಗ ಬೀರುವ ಶಕ್ತಿ ಎನ್ನುತ ಕಾದಿಹೆ ||1||

ಮೋಹರಹಿತನೆ ಜ್ಞಾನ ಭರಿತನೆ ಪರಮಶಾಂತಿಯ ಧಾಮವೆ
ಕಾಹುದೆಮ್ಮನು ಕೈಯಬಿಡದೆ ಹರನ ಕರುಣೆಯ ಕಂದನೆ।
ಕಾಮಕ್ರೋಧದ ಕೊಳೆಯ ಕಳೆದು ಭಕ್ತಿ ಜಲದಲಿ ಮೀಯಿಸು
ಜ್ಞಾನದುಡುಗೆಯ ಮನಕೆ ಉಡಿಸಿ ಮೃಡನ ಪಾದಕೆ ಏರಿಸು ||2||

Digitalized by e-Sahithya Documentation Forum
Sponsored by Sarayu Foundation Trust

ನಿನ್ನ ಚಿನ್ಮಯ ಜ್ಞಾನವೆನಗೆ ಮಾರ್ಗದರ್ಶಕ ದೀಪ್ತಿಯು
ನಿನ್ನ ಮಮತೆಯ ಹೃದಯ ಮಂದಿರ ನನಗೆ ಶಾಂತಿಯ ಹಂದರ
ನಿನ್ನ ಪಾವನ ಚರಣಯುಗ್ಮವು ಭವವ ದಾಂಟಿಪ ದೋಣಿಯು
ಸನ್ನುತಾಂಗನೆ ನಿನ್ನ ನೆನಹಿದು ಬಾಳಿಗಮೃತ ಸೋನೆಯು ॥3॥

ನೀನು ಆಡಿಪ ಬೊಂಬೆ ನಾನು, ಮಿಡಿಸೆ ನುಡಿಯುವ ವೀಣೆಯು
ನೀನು ಊಡಿಸಿ, ಉಣಿಸಿ ಸಲಹಲು ಎನ್ನ ಬಾಳೊಳು ಝೇಂಕೃತಿ।
ಮಂತ್ರ ಪುರುಷನೆ ಶಾಂತಿಚಂದ್ರನೆ ದುರಿತ ತಿಮಿರಕೆ ಭಾನುವೆ
ಕೀರ್ತಿಸುವೆನನವರತ ನಿನ್ನನು ಸಚ್ಚಿದಾನಂದ ಕಂದನೆ ॥4॥

ವಿಶ್ವಗುರು ಬಸವಣ್ಣನವರ ಜೀವನ ಚರಿತ್ರೆ

ಜಂಬೂದ್ವೀಪವೆಂದು ಹೆಸರಾದ ಭಾರತ ಭೂಮಿಯ, ಕರ್ನಾಟಕದ ಉತ್ತರ ಭಾಗದಲ್ಲಿ ಇಂಗಳೇಶ್ವರದ ಸನಿಹದಲ್ಲಿವುದು ಬಾಗೇವಾಡಿಯೆಂಬ ಊರು. ಅದು ಶಿವಭಕ್ತಿಯ ತೌರೂರು; ಅಲ್ಲಿಯ ಅಗ್ರಹಾರದ ಗ್ರಾಮಣೀಮಣಿ ಮಂಡಿಗೆಯ ಮಾದಿರಾಜ; ಈ ಕಮ್ಮೆಕುಲದ ಬ್ರಾಹ್ಮಣನ ಧರ್ಮಪತ್ನಿ ವಿಮಳಾಚಾರ ವಿಖ್ಯಾತೆಯಾದ, ಉತ್ತಮ ಸತಿ ಮಾದಲಾಂಬಿಕೆ. ಆ ದಂಪತಿಗಳಿಗೆ ನಾಗಲಾಂಬಿಕೆ ಒಬ್ಬಳೇ ಮಗಳು. ಗಂಡು ಸಂತಾನವಿರಲಿಲ್ಲ. ಹೀಗಾಗಿ ತಮ್ಮ ವಂಶಪಾರಂಪರ್ಯದ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗುವ ಮಗ ಬೇಕೆಂಬುದು ಅವರ ಅದಮ್ಯ ಆಸೆ.

ಹಲವಾರು ವರ್ಷಗಳ ಜಪತಪಗಳ ನಂತರ ಮಾದಲಾಂಬಿಕೆ ಗರ್ಭವತಿಯಾದಳು. ಪುಳಕಿತವಾದ ಅನುಭವಗಳು ಆಗುತ್ತಿದ್ದರೂ ಗರ್ಭವು ಬಲು ಭಾರವೆನಿಸುತ್ತಿತ್ತು. ಈ ಗರ್ಭ ಭರಭಾರದಿಂದ ಏನವಸ್ಥೆಯಾಗುವುದೋ? ಎಂದು ಆತಂಕಗೊಂಡು ವೇದನೆಯನ್ನು ಸಹಿಸಲಾರದೆ ದೇವನನ್ನು ಸ್ಮರಿಸುತ್ತಾ ನಿದ್ರಾವಶಳಾದಾಗ, ಕನಸಿನಲ್ಲಿ ತೇಜಸ್ವಿಯಾದ ಯೋಗಿಯೊಬ್ಬನು ದರ್ಶನ ಕೊಡುವನು, **"ತಾಯಿ, ನೀನೇನೂ ಕಳವಳ ಪಡುವ ಕಾರಣವಿಲ್ಲ, ನಿನ್ನ ಚಿದ್‌ಗರ್ಭದಲ್ಲಿ ಬೆಳೆಯುತ್ತಿರುವ ಶಿಶು ಧರ್ಮ ವೃಷಭನ ಅವತಾರ. ಹುಟ್ಟುವ ಮಗುವಿಗೆ 'ಬಸವ' ಎಂದು ಹೆಸರನ್ನಿಡು"** ಎಂದು ಸೂಚಿಸುತ್ತಾನೆ. ಈ ಮಧುರ ಸ್ವಪ್ನದಿಂದ ಮಾದಲಾಂಬಿಕೆ ಪುಳಕಿತಳಾಗುತ್ತಾಳೆ. ಆನಂದ ನಾಮ ಸಂವತ್ಸರದ ವೈಶಾಖ ಮಾಸದ ರೋಹಿಣಿ ನಕ್ಷತ್ರದಲ್ಲಿ (30-04-1134) ಅಕ್ಷಯ ತೃತೀಯಾದಂದು ಮಾದಲಾಂಬಿಕೆ ಸುಂದರವಾದ ಗಂಡು ಮಗುವಿಗೆ ಜನ್ಮವನ್ನು ಕೊಡುತ್ತಾಳೆ.

ಮಗು ನೋಡಲು ಸುಲಕ್ಷಣವಾಗಿ, ತೇಜಸ್ವಿಯಾಗಿ ಇದ್ದರೂ ಕಣ್ದೆರೆಯದೆ, ಬಾಯ್ದೆರೆಯದೆ, ಅಳದೆ, ಜಡವಾದ ಗೊಂಬೆಯಂತೆ ಇದ್ದುದು, ತಾಯಿ ತಂದೆಯರಿಗೆ ಕಳವಳವನ್ನುಂಟು ಮಾಡಿತ್ತು. ಅವರು ಕಳವಳದಿಂದ ಹಲವಾರು ಮಂತ್ರ-ತಂತ್ರಗಳನ್ನು ಮಾಡಿಸುತ್ತಾರೆ. ಅಷ್ಟರಲ್ಲಿ ಓರ್ವ ಮುನಿಯು ಈಶಾನ್ಯ ದಿಕ್ಕಿನಿಂದ ನಡೆದು ಬರುತ್ತಿದ್ದಾನೆ. ಅವನು ಜಟಾಧಾರಿಯಾಗಿದ್ದಾನೆ ; ಕಿವಿಯಲ್ಲಿ ತಾಮ್ರಕುಂಡಲ ಧರಿಸಿ ಮೈಮೇಲೆ ರತ್ನಗಂಬಳಿ ಹೊದ್ದಿದ್ದಾನೆ ; ರುದ್ರಾಕ್ಷಿಗಳ ತೊಡುಗೆ ಧರಿಸಿದ್ದಾನೆ. ಒಂದು ಕೈಯಲ್ಲಿ ಬೆಳುಗೊಡೆ ಇನ್ನೊಂದು ಕೈಯಲ್ಲಿ ದಂಡವನ್ನು ಹಿಡಿದಿದ್ದಾನೆ. ಮೈಯ ಮೇಲೆ ಭಸ್ಮಲೇಪನ ಮಾಡಿಕೊಂಡಿರುವುದೇ ಅಲ್ಲದೆ ಹಣೆಯ ಮೇಲೆ ತ್ರಿಪುಂಡ್ರದ ರೇಖೆಗಳನ್ನು ಧರಿಸಿದ್ದಾನೆ.

ಸಂಭ್ರಮದಿಂದ ಮಾದರಸ ಸ್ವಾಗತಿಸಿ ಒಳಗೆ ಬರಮಾಡಿಕೊಳ್ಳುತ್ತಾನೆ. ನೀಳ ಜಡೆ, ಗಂಭೀರ ಮುಖಮುದ್ರೆಯ ಆ ಯೋಗಿಯು ಮಗುವಿನ ಹಣೆಗೆ

ತ್ರಿಪುಂಡ್ರವನ್ನು ಧರಿಸಿ **"ಓಂ ನಮಃ ಶಿವಾಯ"** ಮಂತ್ರವನ್ನು ಉಚ್ಚರಿಸುತ್ತಾನೆ. "ದೇಹಕ್ಕೆ ಜನ್ಮವಿತ್ತ ತಾಯಿತಂದೆಗಳು ನಿಮಿತ್ತ ಮಾತ್ರರು. ಅವರ ದರ್ಶನವನ್ನು ಜಗತ್ತಿಗೆ ಬಂದ ತಕ್ಷಣ ಪಡೆಯುವುದು ಬೇಡ" ಎಂದು ಯೋಗ ಧ್ಯಾನದಲ್ಲಿದ್ದನೋ ಎಂಬಂತೆ ಆ ನಿರ್ಮಲಾತ್ಮಕ ಶಿಶುವು ಕಣ್ತೆರೆದು ಗುರು ದರ್ಶನ ಪಡೆದು ಎಲ್ಲರಿಗೂ ಹರ್ಷವನಿತ್ತನು. ಯೋಗಿಗಳು ನುಡಿದರು. "ಮಾದರಸಾ, ಶಿವನ ಚಿತ್ಕಳೆಯೊಂದು ಇಳೆಗೆ ಇಳಿದ ಸೂಚನೆಯಾಯಿತು. ಆ ಬೆಳಕು ಇಳಿದ ದಿಕ್ಕನ್ನು ಅರಸಿ ನಾನು ಬಂದಿದ್ದೇನೆ. ನನ್ನ-ನಿನ್ನ ಮಾತ್ರವಲ್ಲ ಲೋಕದ ಆಶೋತ್ತರವನ್ನು ಪೂರೈಸಲು ಬಂದ ಕಾರಣಿಕನಾದ ಶಿವನ ಶಿಶು ಇವನು. ಮಾದಲಾಂಬಿಕಾ ತಾಯಿ, ನೀವು ನಿಮಿತ್ತ ಮಾತ್ರರಾದ ಜನ್ಮದಾತರು. ಬಸವನೆಂದು ಮಗುವಿಗೆ ಹೆಸರನ್ನಿಡಿ, ಪ್ರತಿನಿತ್ಯ ಪೂಜಾ ನಂತರ ತೀರ್ಥ-ಪ್ರಸಾದಗಳನ್ನು ಕೊಟ್ಟು ಸಲಹಿರಿ, ಶಿವಾರ್ಪಿತವಲ್ಲದುದನ್ನು ಕೊಡದಿರಿ" ಎಂದು ಆಜ್ಞಾಪಿಸಿ ಅಲ್ಲಿಂದ ನಿರ್ಗಮಿಸಿದರು.

ಬಸವರಸರು ಬಿದಿಗೆಯ ಚಂದ್ರನಂತೆ ಬೆಳೆದರು ; ದಿನ ದಿನಕ್ಕೂ ವೃದ್ಧಿಯಾದ ಅವರು ಅಸಾಮಾನ್ಯ ಬುದ್ಧಿಶಾಲಿ, ತೀಕ್ಷ್ಣ ಮತಿ. ಬರಹ, ಗಣಿತ ಶಬ್ದಾರ್ಥ ರಸಭಾವೋಕ್ತಿ ಪ್ರವೀಣತೆ ಭರತ ಛಂದೋ ವ್ಯಾಕರಣ ಸಂಗೀತ ಸಾಹಿತ್ಯ ಆಗಮ ಪುರಾಣ ಎಲ್ಲವನ್ನೂ ಬಲು ಬೇಗನೆ ಗ್ರಹಿಸುವರು. ವಿದ್ಯೆಯಲ್ಲಿ ಪ್ರತಿಭಾವಂತರಾದಂತೆ, ಸಾಹಸದಲ್ಲಿಯೂ ಮುಂದು. ತಮ್ಮ ಸಹಪಾಠಿಯಾದ ಬೆನಕನು ಕಾಲು ಜಾರಿ ಕೊಳದಲ್ಲಿ ಬಿದ್ದಿದ್ದಾಗ ಉಳಿದವರೆಲ್ಲಾ ಗಾಬರಿಗೊಂಡು ಓಡಿಹೋದರೆ ಇವರು ಧೈರ್ಯದಿಂದ ಈಜಿ ಅವನನ್ನು ಮೇಲಕ್ಕೆತ್ತಿ ಉಳಿಸಿದರು; ಎಲ್ಲರ ಪ್ರಶಂಸೆಗೂ ಪಾತ್ರರಾದರು.

ಜನ್ಮತಃ ತೀಕ್ಷ್ಣಮತಿಯಾದ ಬಸವರಸರು ಪ್ರಚಲಿತವಿದ್ದ ಅನೇಕ ಸಂಪ್ರದಾಯ, ಆಚಾರ - ವಿಚಾರಗಳನ್ನು ದಿಟ್ಟತನದಿಂದ ಪ್ರಶ್ನಿಸುತ್ತಿದ್ದರು. ಅವರ ಚಿಕಿತ್ಸಕ ಬುದ್ಧಿಯ ಪ್ರಶ್ನೆಗೆ ಉತ್ತರಿಸಲಾರದೆ ತಾಯಿತಂದೆಗಳು ತತ್ತರಿಸುತ್ತಿದ್ದರು. ಯಜ್ಞ-ಯಾಗಾದಿಗಳ ನೆಪದಲ್ಲಿ ತುಪ್ಪ-ಪೀತಾಂಬರಗಳನ್ನು ಸುಡುವುದು, ಆಡು-ಅಶ್ವಗಳನ್ನು ಬಲಿಕೊಡುವುದು ಕಂಡು ಮಮ್ಮಲ ಮರುಗಿದರು. ಒಮ್ಮೆ ಹೋತವನ್ನು ಬಲಿ ಕೊಡುವ ಪ್ರಸಂಗ ಕಂಡು ಕಂಬನಿಗರೆದರು. ಅಗ್ನಿಯ ಮೂಲಕ ದೇವರಿಗೆ ಅರ್ಪಿಸುತ್ತೇವೆ ಎಂದು ಮೇಲು ವರ್ಗದವರು, ಮಾರಿ ಮಸಣಿಗೆ ಬಲಿಕೊಟ್ಟು ದೇವಿಯನ್ನು ತೃಪ್ತಿಪಡಿಸುತ್ತೇವೆ ಎಂದು ತಾಮಸರು, ದೇವರು-ಧರ್ಮಗಳ ಹೆಸರಿನಲ್ಲಿ ಕ್ರೌರ್ಯವನ್ನು ಪ್ರದರ್ಶಿಸುವುದನ್ನು ಕಂಡು ಬಲು ನೊಂದರು.

1.ನಾನು ಹುಟ್ಟಿನಿಂದಲೂ ಶಿವಭಕ್ತಿಯ ಪಥದಲ್ಲಿರುವವನು. ಇದರ ಹೊರತು ಬೇರೆ ಮಾರ್ಗ ಬೇಡ.

2.ನೀವು ಶೈವ ಬ್ರಾಹ್ಮಣರಿದ್ದರೂ ಶಿವನೊಬ್ಬನನ್ನೇ ಆರಾಧಿಸದೆ ಸೂರ್ಯ, ಅಗ್ನಿ, ಅಜನನ್ನು ಹರಿಯನ್ನು ಇಂದ್ರಾದಿಗಳನ್ನು ಹೀಗೆ ಹಲವಾರು ದೇವತೆಗಳನ್ನು ಪೂಜಿಸುವಿರಿ.

3.ಒಂದು ಮಂತ್ರವನ್ನು ಅನುಸಂಧಾನಿಸದೆ ಹಲವಾರು ಮಂತ್ರಗಳನ್ನು ಜಪಿಸುವಿರಿ.

4.ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವರ್ಣಭೇದ, ಸನ್ಯಾಸಿ ಸಂಸಾರಿ ಎಂಬ ಆಶ್ರಮಭೇದ, ಹೆಣ್ಣು-ಗಂಡು ಎಂಬ ಲಿಂಗಭೇದ ಎಲ್ಲವನ್ನೂ ಪಾಲಿಸಿ ಸಮಾನತೆಯ ತತ್ತ್ವವನ್ನು ವಿರೋಧಿಸುವಿರಿ.

Digitalized by e-Sahithya Documentation Forum
Sponsored by Sarayu Foundation Trust

ಆದ್ದರಿಂದ ನಾನು ಇವೆಲ್ಲವನ್ನೂ ಒಪ್ಪಿ ಆಚರಿಸಲಾರೆ.

"ಸಂಪ್ರದಾಯದಂತೆ ನಡೆಯದ ಮೇಲೆ ನನ್ನ ಮಗ ನೀನಲ್ಲ, ನಿನಗಿನ್ನು ಇಲ್ಲಿ ತಾವಿಲ್ಲ" ಎಂದು ಮಾದರಸ ಕನಲಿ ನುಡಿದಾಗ ಬಾಲಕ ಬಸವರಸರು 'ಶಿವನೇ ನನ್ನ ತಾಯಿ ತಂದೆ, ಶಿವಭಕ್ತರೇ ನನ್ನ ಬಂಧುಗಳು' ಎಂದು ಮನೆಯಿಂದ ನಿರ್ಗಮಿಸುವರು. ಸ್ವಗೃಹವನ್ನು ತೊರೆದು ಸತ್ಯಾನ್ವೇಷಕರಾಗಿ ಹೊರಟು, ಜ್ಞಾನಾಕಾಂಕ್ಷಿಯಾಗಿ ಸುಪ್ರಸಿದ್ಧ ಪಾಶುಪತ ಶೈವರ ಗುರುಕುಲವಿದ್ದ ಕೂಡಲ ಸಂಗಮಕ್ಷೇತ್ರಕ್ಕೆ ಆಗಮಿಸುವರು. ಕೃಷ್ಣಾ ಮಲಾಪಹಾರಿಯರ ಸಂಗಮದಲ್ಲಿದ್ದ ದೇವಾಲಯವನ್ನು ಕಂಡು ಹರ್ಷಾತಿರೇಕಗೊಂಡು, ದೇವಾಲಯವನ್ನು ಪ್ರವೇಶಿಸಿ, ಭಾವಾತಿರೇಕದಿಂದ ಹಾಡಲು ತೊಡಗುವರು. ಅನಿಮಿತ್ತ ಬಂಧುವನ್ನು, ತಾಯಿ ತಂದೆಯನ್ನು ಬಹುಕಾಲ ಕಳೆದುಕೊಂಡು ಅನಾಥವಾಗಿ ಅಲೆದಾಡಿ ಪುನಃ ಅವರನ್ನು ಪಡೆದಷ್ಟು ಸಂತೋಷವಾಯಿತು. ತಾಯಿಯ ಮಡಿಲಲ್ಲಿ ಹುದುಗಿಕೊಂಡು ಆನಂದ ಬಾಷ್ಪಗಳನ್ನು ಸುರಿಸುವ ದಾರಿ ತಪ್ಪಿ ದಾರಿ ಸೇರಿದ ಮಗುವಿನಂತೆ ಸಂಗಮೇಶ್ವರನನ್ನು ಕಂಡು ಹಾಡತೊಡಗಿದರು :

ಅಕಟಕಟಾ ಶಿವಾ ನಿನಗಿನಿತು ಕರುಣೆ ಇಲ್ಲವಯ್ಯಾ ;
ಅಕಟಕಟಾ ಶಿವ ನಿನಗಿನಿತು ಕೃಪೆಯು ಇಲ್ಲವಯ್ಯಾ ;
ಏಕೆ ಹುಟ್ಟಿಸಿದೆ ತಂದೆ ಇಹಲೋಕ ದುಃಖಿಯ
ಪರಲೋಕದೂರನ ? ಕೂಡಲ ಸಂಗಮದೇವಾ
ಎನಗಾಗಿ ಒಂದು ತರು ಮರಾದಿಗಳಿದ್ದಿಲ್ಲವೇ ?

ಸಂಗಮನಾಥ ಲಿಂಗದ ಮುಂದೆ ಭಾವೋನ್ಮಾದದಲ್ಲಿ ಹಾಡುತ್ತ ಕುಳಿತ ಬಾಲಕನ ಧ್ವನಿ ಕುಲಪತಿಗಳಾದ ಜಾತವೇದ ಮುನಿಗಳನ್ನು ಸೆಳೆಯಿತು. ಮೌನವಾಗಿ ನಿಂತು ಗಮನಿಸಿದರು. "ಈತಂ ಕಾರಣಿಕನಾಗಲೇ ವೇಳ್ಕುಂ" ಎಂದು ಮನಸು ನುಡಿಯಿತು. ಆಗ ಬಾಲಕನ ಬಳಿಸಾರಿ, "ಎಲೆ ಭಕ್ತ, ನೀನೆಲ್ಲಿಗೂ ಹೋಗಬೇಡ" ಯಾವುದಕ್ಕೂ ಚಿಂತಿಸಬೇಡ, ತಿಳಿಯ ನೀರನ್ನು ಪತ್ರೆ-ಪುಷ್ಪಗಳನ್ನು ತಂದು ದಿನನಿತ್ಯ ಸಂಗಮೇಶ್ವರನನ್ನು ಅರ್ಚಿಸಿ, ಆಶ್ರಮವಾಸಿಯಾಗಿದ್ದು ವಿದ್ಯಾಭ್ಯಾಸ ಮಾಡು." ಈ ಆಶ್ವಾಸನೆಯಿಂದ ಪುಳಕಿತರಾದ ಬಸವರಸರು ಅರ್ಚಕರಾಗಿ ವೃತ್ತಿಯನ್ನು ಮಾಡುತ್ತ ವಿದ್ಯಾರ್ಜನೆಗೆ ತೊಡಗಿದರು. ಜಾತವೇದ ಮುನಿಗಳು ಜ್ಞಾನವಾತ್ಸಲ್ಯಗಳ ಧಾರೆಯನ್ನೆರೆದು ಅವರನ್ನು ಪೋಷಿಸಿದರು.

ಅತ್ಯಂತ ಭಯ-ಭಕ್ತಿ -ಶ್ರದ್ಧೆಗಳಿಂದ ಸಂಗಮನಾಥನ ಪೂಜೆ ಮಾಡುತ್ತ ಭಕ್ತಿಯೋಗಿಯಾಗಿ, ಜ್ಞಾನಯೋಗ - ಅಷ್ಟಾಂಗ ಯೋಗಗಳೆಲ್ಲವನ್ನೂ ಸಾದನೆ ಮಾಡುತ್ತ ತಾರುಣ್ಯಕ್ಕೆ ಕಾಲಿರಿಸುತ್ತಾರೆ. ವೇದ - ಶಾಸ-ಆಗಮ ಪುರಾಣೋಪನಿ-ಷತ್ತುಗಳೆಲ್ಲವನ್ನೂ ಅಧ್ಯಯನಿಸಿ ಪಾಂಡಿತ್ಯ ಪೂರ್ಣ ವ್ಯಕ್ತಿತ್ವವನ್ನು ಸಂಪಾದಿಸಿಕೊಂಡಿದ್ದಾರೆ. ಈ ಹೊತ್ತಿಗೆ ಅವರ ಹೃದಯದಲ್ಲಿ ಸ್ವತಂತ್ರವಾದೊಂದು ಧರ್ಮದ ರೂಪುರೇಷೆ ಮೂಡಿ ನಿಂತಿದೆ. ಆವರೆಗೆ ಇದ್ದ ಹಲವಾರು ಮತಪಂಥ ಧರ್ಮಗಳಲ್ಲಿ ಒಂದೊಂದು ತತ್ತ್ವ ಹಿಡಿಸಿದ್ದರೂ ಯಾವುದೂ ಸಂಪೂರ್ಣ ತೃಪಿಯನ್ನು ಕೊಟ್ಟಿಲ್ಲ. ಇಂಥ ತನ್ನದೊಂದು ಅನಿಸಿಕೆಯನ್ನು ಸಂಗಮ ಗುರುಕುಲದ ಘಟಿಕೋತ್ಸವ ಸಮಾರಂಭದಲ್ಲಿ ಬಸವರಸರು ಗುರುಗಳ ಮುಂದಿಡುತಾರೆ. ಮನೆದೇವರೆಂದು ಸಂಗಮೇಶ್ವರನ ದರ್ಶನಕ್ಕೆ ಆಗಮಿಸಿದ್ದ ಬಲದೇವ ಮಂತ್ರಿಗಳು 21 ವರ್ಷ ವಯಸ್ಸಿನ ತರುಣ ಬಸವರಸರ ಪ್ರೌಢಿಮೆ, ವಿಚಾರಧಾರೆ ಕಂಡು ಬೆರಗಾಗುತ್ತಾರೆ. ವಿದ್ಯಾರ್ಜನೆಯ ಪ್ರಮುಖ ಘಟ್ಟ ಪೂರೈಸಿದ್ದ ಆತ ತಮ್ಮ ಸಹೋದರಿ ಮಾದಲಾಂಬಿಕೆಯ ಮಗನಾದ

ಬಸವರಸ ಎಂಬುದನ್ನು ಅರಿತಾಗ ಇನ್ನೂ ಹರ್ಷಗೊಂಡರು. ಬಾಲ್ಯದಲ್ಲೇ ನಿಶ್ಚಯವಾಗಿದ್ದಂತೆ ತಮ್ಮ ಒಬ್ಬಳೇ ಮಗಳು ನೀಲಗಂಗಳನ್ನು ಕೊಟ್ಟು ಮದುವೆ ಮಾಡಲು ಇಚ್ಛಿಸುತ್ತಾರೆ. ಜಾತವೇದ ಮುನಿಗಳ ಮುಂದೆ ಈ ವಿಚಾರವನ್ನಿಟ್ಟಾಗ ಅವರೂ ಸಂತೋಷಿಸಿ ಬಸವರಸರ ಬಳಿ ಮದುವೆಯ ವಿಷಯ ಪ್ರಸ್ತಾಪಿಸಿದಾಗ ಅವರು ಆಘಾತಕ್ಕೊಳಗಾಗುತ್ತಾರೆ.

ಸಂಗಮದ ಸನಿಹದ ಬ್ರಹ್ಮಪುರಿಗೆ ಮದುವೆ ಮಾಡಿಕೊಡಲಾಗಿದ್ದ ಅಕ್ಕನಾಗಮ್ಮನು ಪತಿ ಶಿವಸ್ವಾಮಿಯ ಜೊತೆಗೆ ಸಂಗಮಕ್ಕೆ ಬಂದವಳು ಸೋದರ ಮಾವನ ಈ ಆಕಾಂಕ್ಷೆಯನ್ನು ಅನುಮೋದಿಸುವಳು. ಹೀಗೆ ಎಲ್ಲರ ಅಭಿಪ್ರಾಯವೂ ಒಂದಾದಾಗ ಸಂಸಾರದ ಕೆಸರಿನ ಮಡುವಿನಲ್ಲಿ ಇಳಿಯ ಬಯಸದ ಬಸವರಸರು ಸಂತಾಪಪಡುತ್ತ ಶಿವಾಲಯದೊಳಕ್ಕೆ ಬಂದು ಪ್ರಾರ್ಥಿಸಲು ತೊಡಗುತ್ತಾರೆ :

ಕಾಲಲ್ಲಿ ಕಟ್ಟಿದ ಗುಂಡು ಕೊರಳಲ್ಲಿ ಕಟ್ಟಿದ ಬೆಂಡು
ತೇಲಲೀಯದು ಗುಂಡು ಮುಳುಗಲೀಯದು ಬೆಂಡು
ಇಂತಪ್ಪ ಸಂಸಾರ ಶರಧಿಯ ದಾಂಟಿಸಿ
ಕಾಲಾಂತಕನೆ ಕಾಯೋ ಕೂಡಲ ಸಂಗಮದೇವಾ ।

ಬಲೆಗೆ ಸಿಲ್ಕಿದ ಮೃಗದಂತೆ ನಾನಯ್ಯ ;
ಗುರಿದಪ್ಪಿದ ಹುಲ್ಲೆಯಂತೆ ದೆಸೆದೆಸೆಗೆ ಬಾಯಿ ಬಿಡುತ್ತಿದ್ದೇನೆ.
ನಾನಾರ ಸಾರುವೆನಯ್ಯಾ, ತಾಯಾಗಿ ತಂದೆಯಾಗಿ ನೀನೇ
ಸಕಲ ಬಂಧು ಬಳಗ ನೀನೆ, ಕೂಡಲ ಸಂಗಮದೇವಾ ।

ಆಗ ಬಸವರಸರಿಗೆ ಫಕ್ಕನೆ ಸಗುಣ ಸಾಕ್ಷಾತ್ಕಾರವಾಗುವುದಲ್ಲದೆ ಸಂಗಮನಾಥನ ವಾಣಿ ಹೇಳುತದೆ. "ಎಲೆ ಮಗನೆ, ಬಸವಣ್ಣ ಬಸವಿದೇವ ನಿನ್ನಂ ಮಹೀತಳದೊಳು ಮೆರೆದಪೆವು. ನೀನು ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಹೋಗು" ಎಂದು. ಬಸವಣ್ಣನವರು ಇನ್ನಷ್ಟು ದುಃಖಿತರಾಗಿ "ತಂದೆ, ನೀನೂ ಕ್ರೂರಿಯಾಗಬೇಡ. ಹಾಲನ್ನು ಕೇಳುವ ಮಗುವಿಗೆ ಯಾರಾದರೂ ವಿಷವನ್ನು ಕೊಡುವರೆ ? ನಿನ್ನ ಕಾರುಣ್ಯದ ಹಾಲನ್ನು ಕೇಳುವ ನನಗೆ ಸಂಸಾರ ಸುಖದ ವಿಷವನ್ನು ಕುಡಿಸುವೆಯಾ ? ಬೇಡ." ಎನ್ನುತಾರೆ. ಸಂಗಮನಾಥನು ಆಶ್ವಾಸನೆ ನೀಡುತ್ತ' ಸದಾ ನಾನು ನಿನ್ನ ಬೆನ್ನಿಗೆ ಇರುತ್ತೇನೆ. ವೃಷಭನ ಮುಂದೆ ಕುಳ್ಳಿರು. ನಾಳೆ ನಿನಗೆ ದೇವಾನುಗ್ರಹವಾಗಲಿದೆ." ಎನ್ನುವನು.

ಅಂದು (14-01-1155) ಬಸವಣ್ಣನವರು ಮಿಂದು ಮಡಿಯುಟ್ಟು ಶುದ್ಧಾಂಗರಾಗಿ ಬಂದು ಕುಳಿತುಕೊಳ್ಳುತಾರೆ. ಬಹಳ ವರುಷಗಳಿಂದ ಒಂದು ವಿಚಾರ ಬಸವಣ್ಣನವರ ಮನಸ್ಸನ್ನು ಕೊರೆಯುತ್ತಿತ್ತು. ಜನರಲ್ಲಿ ಬಳಕೆಯಲ್ಲಿರುವ ಉಪಾಸ್ಯ ವಸ್ತುಗಳು ವಿಚಿತ್ರ, ವಿಲಕ್ಷಣ ಆಕಾರದವು ಇದ್ದು ಅವುಗಳಿಗೆ ಸರಿಯಾದ ತಾತ್ವಿಕ ಹಿನ್ನೆಲೆಯಿರಲಿಲ್ಲ, ಯೋಗಾಭ್ಯಾಸಕ್ಕೆ ಅವು ಉಪಯುಕವಾಗಿರಲಿಲ್ಲ. ದೇವರ ಸ್ವರೂಪವನ್ನು ಸಂಕೇತಿಸುತ್ತಿರಲಿಲ್ಲ. ಹೀಗಿರುವಾಗ ಒಂದಾನೊಂದು ದಿನ ಫಕ್ಕನೆ ಒಂದು ವಿಚಾರವು ಹೊಳೆದಿತ್ತು. ಅದೆಂದರೆ, "ವಿಶ್ವದಾಕಾರದಲ್ಲಿ ಲಿಂಗದೇವನನ್ನು, ದೇಹದಾಕಾರದಲ್ಲಿ ಜೀವನನ್ನು ರೂಪಿಸಿ; ಬ್ರಹ್ಮಾಂಡದಲ್ಲಿ ಪಿಂಡಾಂಡವಿದೆ. ದೇವನ ಗರ್ಭದಲ್ಲಿ ಜೀವನು ಇದ್ದಾನೆ ಎಂಬರ್ಥದಲ್ಲಿ ಗೋಲಾಕಾರದ ಬ್ರಹ್ಮಾಂಡ ಸಂಕೇತದ ಕವಚದಲ್ಲಿ ದೇಹದಾಕಾರದ ಆತ್ಮ ಸಂಕೇತದ ಕುರುಹನ್ನು ಇಟ್ಟು ಒಂದುಗೂಡಿಸಬೇಕು." ಎಂಬುದು. ಹೊರಗಿನ ಕವಚವು ದೃಷ್ಟಿಯೋಗಕ್ಕೆ ಏಕಾಗ್ರತೆಗೆ ಎಂದು ಆಲೋಚಿಸಿ, ಕಾಂತಿಯುಕವಾಗಿರುವ ಒಂದು ಆವರಣವನ್ನೂ ಕಂಡು ಹಿಡಿದಿದ್ದರು. ಈ ಕಲ್ಪನೆ ಕೃತಿಗಿಳಿದು ಗೋಲಾಕಾರದ ವಸ್ತುವಾದಾಗ (ರೂಪು

Digitalized by e-Sahithya Documentation Forum
Sponsored by Sarayu Foundation Trust

ತಳೆದಾಗ) ಆನಂದದ ಉನ್ಮಾದವಾಗಿತ್ತು. ಸೃಷ್ಟಿಕರ್ತ ಲಿಂಗದೇವನ ಕುರುಹಾದ ಆ ವಸ್ತುವನ್ನು ಇಷ್ಟಲಿಂಗ ಎಂದು ಕರೆದಿದ್ದರು.

ಇಂಥ ಇಷ್ಟಲಿಂಗವನ್ನು ಚಿತ್ಕಳಾಭರಿತವಾಗಿ ಮಾಡಿಕೊಳ್ಳಬೇಕು; ಲಿಂಗದೇವನ ಅನುಗ್ರಹವನ್ನು ಅದರಲ್ಲಿ ಅವತರಣ ಮಾಡಿಕೊಳ್ಳಬೇಕು ಎಂಬ ಆಸೆ ಅದಮ್ಯವಾಗಿದ್ದು, ಇಂತಹ ಅವತರಣ ಮಾಡಿಕೊಳ್ಳಲಿಕ್ಕೆ ಸಿದ್ಧರಾಗಿ ಕುಳಿತುಕೊಳ್ಳುತ್ತಿದ್ದಾರೆ. ಅವರ ಮನಸ್ಥಿತಿ ಹೀಗಿದೆ:

ಎನ್ನಯ್ಯಾ ನಿಮ್ಮ ಅರಸುತ್ತಿದ್ದೇನೆ, ಎನ್ನಯ್ಯಾ ನಿಮ್ಮ ಅರಸುತ್ತಿದ್ದೇನೆ ;
ಎನ್ನಯ್ಯಾ, ಕೀಟಧ್ಯಾನದಲ್ಲಿ ನಿಮ್ಮನ್ನರಸುತ್ತಿದ್ದೇನೆ ;
ಎನ್ನಯ್ಯಾ, ಲಿಂಗದೇವಾ
ಭ್ರಮರದ ಲೇಸಿನಂತೆ ಕಾರುಣ್ಯವ ಮಾಡು
ತಪ್ಪೆನ್ನದು, ತಪ್ಪೆನ್ನದು ಶಿವಧೋ ಶಿವಧೋ ।

ಅರಿವಿಂದ ಅರಿದು ಏನುವ ತಟ್ಟದೆ ಮುಟ್ಟದೆ ಇದ್ದೇನಯ್ಯಾ
ಅಂತರಂಗ ಸನ್ನಿಹಿತ ಬಹಿರಂಗ ನಿಶ್ಚಿಂತನಾಗಿ ಇದ್ದೇನಯ್ಯಾ
ಸ್ವಾತಿಯ ಬಿಂದುವ ಬಯಸುವ ಚಿಪ್ಪಿನಂತೆ
ಗುರುಕಾರುಣ್ಯವ ಬಯಸುತ್ತಿಪ್ಪೆ ಲಿಂಗದೇವಾ.

ಎಂದು ಉತ್ಕಟವಾದ ಧ್ಯಾನದಲ್ಲಿರುವರು. ತಮ್ಮ ಹೃತ್ಕಮಲದೊಳು ಬೆಳೆದ ಲಿಂಗಕ್ಕೆ ಕರಕಮಳವನಾಂತು, ಅದನ್ನು ಸ್ನೇಹರಸಭರಿತ ಸಾತ್ವಿಕ ದೃಷ್ಟಿಯಿಂದ ಆಲಿಂಗಿಸುವಂತೆ ನೋಡುತ್ತಾ ಕುಳಿತಾಗ, ಒಂದು ಅದ್ಭುತವಾದ ಬೆಳಕಿನ ಪ್ರವಾಹವು ಧಾರೈಸುವುದು. ಆಗ ಸೃಷ್ಟಿಕರ್ತ ಪರಮಪ್ರಭುಲಿಂಗದೇವನು "ಕಾರುಣ್ಯಮಂ ನೀಡಿ ಸಾಮರ್ಥ್ಯಮಂ ಹೇರುವನು." ಈವರೆಗೆ ಭೂತಿಯಾಗಿದ್ದ ಬಸವರಸರು ಈಗ ವಿಭೂತಿ ಪುರುಷ ಬಸವಲಿಂಗರಾಗುತ್ತಾರೆ. ದೇವನ ಕೃಪೆಯನ್ನು ಹೀಗೆ ಕೊಂಡಾಡುತ್ತಾರೆ.

ಎನ್ನ ಗುರು ಪರಮಗುರು ನೀನೆ ಕಂಡಯ್ಯ ;
ಎನ್ನ ಗತಿಮತಿ ನೀನೆ ಕಂಡಯ್ಯ
ಎನ್ನ ಅಂತರಂಗದ ಜ್ಯೋತಿ ನೀನೆ ಕಂಡಯ್ಯ
ಲಿಂಗದೇವಾ, ನೀನೆ ಎನಗೆ ಗುರು, ನಾನೇ ನಿಮ್ಮ ಶಿಷ್ಯ !

ಎಂಬಂತೆ ಲಿಂಗದೇವನ ಕರುಣೆಯ ಕಂದ, ಪ್ರತಿನಿಧಿಯಾಗುತಾರೆ.

ಹೀಗೆ ಲಿಂಗದೇವನು ಕಾರುಣ್ಯವನ್ನು ನೀಡಿ, ಸಾಮರ್ಥ್ಯಮಂ ಹೇರಿ ಲೋಕದ ಸೇವೆಗೆ ತನ್ನ ಮಗನನ್ನು ಸನ್ನದ್ಧರನ್ನಾಗಿ ಮಾಡುತ್ತಾನೆ. ಇಷ್ಟಲಿಂಗದ ಈ ಕಲ್ಪನೆ ಮತ್ತು ತಾವು ದೇವ ಕಾರುಣ್ಯವನ್ನು ಅವತರಣ ಮಾಡಿಕೊಳ್ಳಲು ಸಾಧ್ಯವಾದುದು ಅಪೂರ್ವ ಆನಂದವನ್ನು ತಂದಿದ್ದು, ಹೃದಯ ತುಂಬಿ ಬಸವಣ್ಣನವರು ಹಾಡುತ್ತಾರೆ, ದೇವನ ಲೀಲೆಯನ್ನು ಕೊಂಡಾಡುತ್ತಾರೆ.

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ,
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ !
ಅಪ್ರಮಾಣ ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ,
ಲಿಂಗದೇವಯ್ಯಾ, ನೀವೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ !

ಹೀಗೆ ಬಸವಣ್ಣನವರ ಮತಿಯಲ್ಲಿ ಅರಿವಾಗಿ ಮೂಡಿ, ಸ್ವತಃ ತಾನೇ ಜ್ಞಾನಗುರುವಾಗಿ ಮಾರ್ಗದರ್ಶನ ಮಾಡಿ, ಸದ್ಗುರುವಾಗಿ ಕಾರುಣ್ಯ ನೀಡಿ ತಮ್ಮನ್ನು

ತನ್ನ ಸಂದೇಶ ವಾಹಕರನ್ನಾಗಿ, ಪ್ರತಿನಿಧಿಯನ್ನಾಗಿ ಮಾಡಿದ ಪರಮಾತ್ಮನ ಮಹಾನ್ ಲೀಲೆಗೆ ವಿಸ್ಮಿತರಾಗಿದ್ದಾರೆ. "ನೀವು ಅರಿವಾಗಿ ಮುಂದುದೋರಿದ ಕಾರಣ ನಿಮ್ಮಿಂದಲೇ ನಿಮ್ಮನರಿದೆ." ಎಂದು ಕೃತಜ್ಞತೆಯಿಂದ ಬಾಗುತ್ತಾರೆ.

ಗುರು ಕರುಣಿಸಿ ಹಸ್ತಮಸ್ತಕ ಸಂಯೋಗದಿಂದ
ಪ್ರಾಣಲಿಂಗವನ್ನು ಕರತಳಾಮಳಕವಾಗಿ ಕರಸ್ಥಲಕ್ಕೆ ತಂದು ಕೊಟ್ಟನಾಗಿ,
ಒಳಗೆನ್ನದೆ ಹೊರಗೆನ್ನದೆ ಆ ಲಿಂಗದಲ್ಲಿ
ನಚ್ಚಿ ಮೆಚ್ಚಿ ಹರುಷದೊಳೋಲಾಡಿದೆ
ಆ ಲಿಂಗವ ಪಡೆದು ಆನಂದಿಸುವೆ ಲಿಂಗದೇವಾ.

ಎಂದು ಹಾಡುತಾರೆ. ಈ ಇಷ್ಟಲಿಂಗವು ಯಾವುದೇ ದೇವತೆಯ, ವ್ಯಕ್ತಿಯ ಪ್ರಾಣಿಯ ಕುರುಹಾಗದೆ ಪೆರವಸ್ತುವಿನ ಕುರುಹು ಎಂಬುದನ್ನು ಸ್ಪಷ್ಟೀಕರಿಸುತ್ತಾರೆ.

ವೇದ ವೇದಾಂತಗಳಿಗೆ ಅಸಾಧ್ಯವಾದ
ಅನುಪಮ ಲಿಂಗವ ತಂದುಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ
ನಾದ ಬಿಂದು ಕಳೆಗಳಿಗೆ ಅಭೇದ್ಯವಾದ
ಅಚಲಿತಲಿಂಗವ ತಂದು ಕೊಟ್ಟನಯ್ಯಾ ಸದ್ಗುರು ಎನ್ನ ಕರಸ್ಥಲಕ್ಕೆ
ವಾಙ್ಮನಗೋಚರವಾದ ಅಖಂಡಿತ ಲಿಂಗವ ತಂದುಕೊಟ್ಟನಯ್ಯಾ
ಸದ್ಗುರು ಎನ್ನ ಕರಸ್ಥಲಕ್ಕೆ ; ಇನ್ನು ನಾನು ಬದುಕಿದೆನು
ನಾ ಬಯಸುವ ಬಯಕೆ ಕೈಸಾರಿತ್ತೆಂದು ಲಿಂಗದೇವಾ.

ಕಾರಣಿಕ ಪುರುಷ ಬಸವಣ್ಣನವರ ಅಪೂರ್ವ ಕನಸು ನನಸಾಗಿದೆ.

ಕಾಣಬಾರದ ವಸ್ತು ಕೈಗೆ ಸಾರಿತ್ತಯ್ಯಾ
ಆನಂದದಿಂದ ಆಡುವೆ ಹಾಡುವೆನಯ್ಯಾ
ಎನ್ನ ಕಣ್ಣ ತುಂಬಿ ನೋಡುವೆ
ಎನ್ನ ಮನವೊಲಿದು ಭಕ್ತಿಯ ಮಾಡುವೆ ಲಿಂಗದೇವಯ್ಯ ನಿನಗೆ.

ಚಿನ್ಮಯ ಚಿತ್ಪ್ರಕಾಶ ಚಿದಾನಂದ ಲಿಂಗವೆ,
ಎನ್ನ ಹೃದಯ ಕಮಲದಲ್ಲಿ ಬೆಳಗಿ ತೋರುವ ಪರಂಜ್ಯೋತಿ
ಎನ್ನ ಕರಸ್ಥಲಕ್ಕೆ ಅನುವಾದ ಧರ್ಮಿ
ಎನ್ನ ಕಂಗಳ ಕೊನೆಯಲ್ಲಿ ಮೂರ್ತಿಗೊಂಡಿಪ್ಪೆಯಯ್ಯಾ,
ಲಿಂಗದೇವಯ್ಯಾ,

ಎಂದು ಅಂಗೈಯಲ್ಲಿರಿಸಿ ದಿಟ್ಟಿಸಿ ನೋಡಿ ಆನಂದಿಸುತಾರೆ. ಬಸವಣ್ಣನವರ ಆಸೆ ಇಂದು ನಿನ್ನೆಯದಲ್ಲ; ಬಾಲ್ಯದಿಂದಲೂ ರೂಪುಗೊಂಡಿದ್ದು. ಹನ್ನೆರಡು ವರುಷಗಳ ಹಿಂದೆಯೇ ಮೂಡಿನಿಂತದ್ದು, ಬೆಳೆದು ಸರ್ವಾಂಗವನ್ನೂ ವ್ಯಾಪಿಸಿದ್ದು; ಅದೀಗ ತೃಪ್ತಿಗೊಂಡಿದೆ.

ಎನ್ನ ಗಂಡ ಬರಬೇಕೆಂದು.............
ಎನ್ನಂತರಂಗದ ಮನೆಯ ತೆರಹು ಮಾಡಿ
ಅಷ್ಟದಳವೆಂಬ ಓವರಿಯೊಳಗೆ ನಿಜ ನಿವಾಸವೆಂಬ ಹಾಸುಗೆಯ ಹಾಸಿ,
ಧ್ಯಾನವೆಂಬ ಮೇಲುಕಟ್ಟಂ ಕಟ್ಟಿ ಜ್ಞಾನವೆಂಬ ದೀಪದ ಬೆಳಗಿ
ನಿಷ್ಕ್ರಿಯವೆಂಬ ಉಪಚಾರಂಗಳ ಹರಹಿಕೊಂಡು,
ಪಶ್ಚಿಮದ್ವಾರವೆಂಬ ಬಾಗಿಲ ತೆರೆದು, ಕಂಗಳೇ ಪ್ರಾಣವಾಗಿ ಬರವ
ಹಾರುತ್ತಿರ್ದೆನಯ್ಯಾ.
ತಾನು ಬಂದು ಎನ್ನ ಹೃದಯ ಸಿಂಹಾಸನದ ಮೇಲೆ ಮೂರ್ತಗೊಂಡಡೆ

Digitalized by e-Sahithya Documentation Forum
Sponsored by Sarayu Foundation Trust

ಎನ್ನ ಬಯಕೆ ಸಯವಾಗಿತ್ತು;
ಹಿಂದೆ ಹನ್ನೆರಡು ವರುಷದೆಲ್ಲಿದ್ದ ಚಿಂತೆಯಿಂದು ನಿಶ್ಚಿಂತೆಯಾಯಿತ್ತು
ಲಿಂಗದೇವರು ಕೃಪಾಮೂರ್ತಿಯಾದ ಕಾರಣ ನಾನು ಬದುಕಿದೆನು.

ಈ ಪ್ರಸಂಗ ಬಹು ಮಹತ್ವದ್ದು, ಬಸವಣ್ಣನವರಿಗೆ ಸಾಕ್ಷಾತ್ಕಾರದ ಅನುಭವ ತಂದು ಕೊಟ್ಟಿತು; ಇಷ್ಟಲಿಂಗದ ಕಲ್ಪನೆಯನ್ನು ಗಟ್ಟಿಗೊಳಿಸಿತು. ಬಸವರಸರನ್ನು ಸಂಗನ ಬಸವಣ್ಣರನ್ನಾಗಿ, ಮಂತ್ರಪುರುಷ ಬಸವಲಿಂಗರನ್ನಾಗಿ ಲಿಂಗಾಯತ ಧರ್ಮ ಸಂಸ್ಥಾಪಕರನ್ನಾಗಿ ಮಾಡಿತು. ಜೊತೆಗೆ ಇದು ಬಸವಣ್ಣನವರ ಜೀವನದ ಮಹತ್ವದ ಘಟ್ಟ; ಏಕೆಂದರೆ ಇದೀಗ ದೇವನ ಕರುಣೆಯೇ ತಮಗೆ ಬೆಂಬಲವಾಗಿ, ಲಿಂಗದೇವನ ಧ್ಯಾನವೇ ತಮಗೆ ಸಂಗಡವಾಗಿ, ಕ್ರಾಂತಿಯ ಕ್ಷೇತ್ರದಲ್ಲಿ ಕಾಲಿಡಲು ಬಸವಣ್ಣನವರು ಹೊರಡುತ್ತಾರೆ. ಇದು ಮಾನಸಿಕ ಪರಿವರ್ತನೆಯ ಘಟ್ಟವೂ ಅಹುದು ; ಬಹು ದೇವತೋಪಾಸನೆಯಿಂದ ಏಕದೇವತಾ ಉಪಾಸನೆಗೆ ಮೊದಲು ನಿಂತಿದ್ದು, "ಮನಕ್ಕೆ ಮನೋಹರವಲ್ಲದ ಗಂಡರು ಇನ್ನೆನಗಾಗದ ಮೊರೆ ನೋಡವ್ವಾ ; ಕನ್ನೆಯಂದಿನ ಕೂಟ ಚಿಕ್ಕಂದಿನ ಬಾಳುವೆ, ನಿಮ್ಮಾಣೆಯಯ್ಯಾ ಕೂಡಲ ಸಂಗಮದೇವಾ," ಎಂದು ಶಿವನಲ್ಲದೆ ಅನ್ಯದೈವವನ್ನು ತಿರಸ್ಕರಿಸಿದ್ದರು. ಇದೀಗ ಏಕದೇವತಾ ಉಪಾಸನೆಯಿಂದ ವಿಶಾಲ ವ್ಯಾಪ್ತಿಯುಳ್ಳ ವೈಚಾರಿಕ ಏಕದೇವೋಪಾಸನೆಯತ್ತ, ನಿರ್ಗುಣೋಪಾಸನೆಯತ್ತ ಸಾಗುತ್ತಿದ್ದಾರೆ. ದೇವನು ಕೂಡಲ ಸಂಗಮ ಕ್ಷೇತ್ರದಲ್ಲಿ ಗುಡಿಯ ನಾಲ್ಕು ಗೋಡೆಗಳಲ್ಲೇ ಸೀಮಿತನಾಗಿ ಇಲ್ಲ. ಅವನು ಸರ್ವವ್ಯಾಪಿ, ಸರ್ವಶಕ್ತ !

ಅಮೂಲ್ಯನು ಅಪ್ರಮಾಣನು ಅಗೋಚರ ಲಿಂಗವು
ಆದಿ ಮಧ್ಯವಸಾನಗಳಿಲ್ಲದ ಸ್ವತಂತ್ರ ಲಿಂಗವು
ನಿತ್ಯ ನಿರ್ಮಳ ಲಿಂಗವು;
ಅಯೋನಿ ಸಂಭವನಯ್ಯಾ ಲಿಂಗದೇವರು.

ಎಂಬುದನ್ನು ಅರಿಯುತ್ತಾರೆ. ಭುವನದ ಬೆಳಕಾಗುವಂತೆ ಕಾರ್ಯಗೈಯಲು ಕೂಡಲ ಸಂಗಮದಿಂದ ಹೊರಡುತ್ತಾರೆ.

ತಮ್ಮ ಸ್ವತಂತ್ರ ಕೊಡುಗೆಯಾದ ಇಷ್ಟಲಿಂಗದ ಸೂತ್ರವನ್ನು ಹಿಡಿದೇ ಸ್ವತಂತ್ರ ಸಂವಿಧಾನದ ಲಿಂಗಾಯತ ಧರ್ಮ ರೂಪುಗೊಳ್ಳುತ್ತದೆ. ಬಸವಣ್ಣನವರ ಸೈದ್ಧಾಂತಿಕ ಆಲೋಚನೆಗಳೆಲ್ಲ ಕಲ್ಯಾಣದ ಕಾರ್ಯಕ್ಷೇತ್ರವನ್ನು ಅವರು ಪ್ರವೇಶಿಸಿದಾಗ ಪ್ರಾಯೋಗಿಕ ರೂಪ ತಳೆಯತೊಡಗುತ್ತವೆ. ಮಂಗಳವೇಡೆಗೆ ಮೊದಲು ಬಂದ ಬಸವಣ್ಣನವರು ಬಲದೇವರಸರ ಪುತ್ರಿಯಾದ ನೀಲಗಂಗಳನ್ನು ಮದುವೆಯಾಗಿ ದಾಂಪತ್ಯ ಜೀವನವನ್ನು ಸ್ವೀಕರಿಸುತ್ತಾರೆ. ಕಾಯಕದಿಂದ ಆರ್ಜಿಸಿದುದನ್ನು ಮಾತ್ರ ಭುಂಜಿಸಬೇಕು ಎಂದು ಸಾರಿ ಕರಣಿಕ ಕಾಯಕವನ್ನು ಸ್ವೀಕರಿಸುತ್ತಾರೆ. ತಮ್ಮ ಅಸಾಮಾನ್ಯ ಪ್ರತಿಭೆ - ಪಾಂಡಿತ್ಯಗಳಿಂದ ದಿನದಿನಕ್ಕೂ ಮೇಲೇರುತ್ತಾರೆ. ಯಾರೂ ಓದಲಿಕ್ಕೆ ಸಾಧ್ಯವಾಗದಿದ್ದ ಪುರಾತನ ಸ್ವರ್ಣ ಪತ್ರವನ್ನು ಓದಿ, ಸಿಂಹಾಸನದ ಅಡಿಯಲ್ಲಿದ್ದ ಅಪಾರ ನಿಧಿಯನ್ನು ತೆಗೆಸಿಕೊಟ್ಟು ಸಿದ್ಧರಸ ಮಂತ್ರಿಯ ತೆರವಾಗಿದ್ದ ಅರ್ಥ ಮಂತ್ರಿಯ (ಭಂಡಾರಿ) ಸ್ಥಾನವನ್ನು ತುಂಬುತ್ತಾರೆ. ಬಿಜ್ಜಳನ ಆತ್ಮೀಯ ಸ್ನೇಹಿತರು, ಮಾರ್ಗದರ್ಶಕರೂ ಆಗುವ ಮಟ್ಟಕ್ಕೆ ಬಂದ ಬಸವಣ್ಣನವರು ನೀಲಗಂಗಳಲ್ಲಿ ಬಾಲಸಂಗಯ್ಯ ಎಂಬ ಮಗನನ್ನು ಪಡೆಯುತ್ತಾರೆ. ಆದರೆ ಕೆಲ ಕಾಲದಲ್ಲಿಯೇ ಅವರು ವಿರಕ್ತ ಜೀವನದಲ್ಲಿ ಕಾಲಿಟ್ಟು, ತಮ್ಮ ಪತ್ನಿಯನ್ನೂ ಆ ಸರಕ್ಕೆ ಏರಿಸುತ್ತಾರೆ. ಅದನ್ನು ಪೃಥ್ವಿಗಗ್ಗಳೆ ಚೆಲುವೆಯಾದ ನೀಲಮ್ಮ ತಾಯಿಯವರು ಹೀಗೆ ಹೇಳುತ್ತಾರೆ:

ಮಡದಿ ಎನ್ನಲಾಗದು ಬಸವಂಗೆ ಎನ್ನನು ;
ಪುರುಷನೆನ್ನಲಾಗದು ಬಸವನ ಎನಗೆ ;

ಉಭಯ ಕುಳವ ಹರಿದು ಬಸವಂಗೆ ಶಿಶುವಾನಾದೆನು ;
ಬಸವನೆನ್ನ ಶಿಶುವಾದನು ;
ಪ್ರಮಥರು ಪುರಾತರು ಸಾಕ್ಷಿಯಾಗಿ
ಸಂಗಯ್ಯನಿಕ್ಕಿದ ದಿವ್ಯವ ಮೀರಿ ಬಸವನೊಳಗಾನಡಗಿದೆ.

ಹೀಗೆ ಪತಿ-ಪತ್ನಿಯರೆಂಬ ಬಾಂಧವ್ಯ ಹರಿದು ತಂದೆ-ಮಗಳು, ತಾಯಿ-ಮಗ ಎಂಬ ಸಂಬಂಧವಳವಟ್ಟಿತ್ತು. ಅದನ್ನರಿತೇ ಅಲ್ಲಮ ಪ್ರಭುಗಳು ಬಸವಣ್ಣನವರನ್ನು ಪರಮ ವಿರಕ್ತರು ಎಂಬುದಾಗಿ ಸ್ತುತಿ ಮಾಡುತ್ತಾರೆ;

ಸತಿಯ ಕಂಡು ವ್ರತಿಯಾದ ಬಸವಣ್ಣ
ವ್ರತಿಯಾಗಿ ಬ್ರಹ್ಮಚಾರಿಯಾದ ಬಸವಣ್ಣ ;
ಬ್ರಹ್ಮಚಾರಿಯಾಗಿ ಭವಗೆಟ್ಟ ಬಸವಣ್ಣ ;
ಗುಹೇಶ್ವರ ಲಿಂಗದಲ್ಲಿ ಅಖಂಡ ಬ್ರಹ್ಮಚಾರಿ ಬಸವಣ್ಣನೊಬ್ಬನೆ !

ವಿಷಯಾಸಕ್ತನಾದ ಚಾಲುಕ್ಯ ತೈಲಪನು ರಾಜ್ಯ ನಿರ್ವಹಣೆಯಲ್ಲಿ ನಿರಾಸಕ್ತನಾದಾಗ ರಾಜ್ಯಭಾರವನ್ನು ವಹಿಸಿಕೊಳ್ಳಲು ರಾಜಧಾನಿ ಕಲ್ಯಾಣಕ್ಕೆ ಬಿಜ್ಜಳ ಬರುವಾಗ ಬಸವಣ್ಣನವರೂ ಮಂಗಳವೇಡೆಯಿಂದ ಕಲ್ಯಾಣಕ್ಕೆ ಬರುತ್ತಾರೆ. ಅವರ ಕಾರ್ಯ ಕ್ಷೇತ್ರ ವಿಸ್ತಾರವಾಗುತ್ತದೆ. ಸಮಾಜದಲ್ಲಿ ಧಾರ್ಮಿಕ, ನೈತಿಕ, ಸಾಂಸ್ಕೃತಿಕ ಸಾಹಿತ್ಯಿಕ ಮೌಲ್ಯಗಳನ್ನೊಳಗೊಂಡ ಸಂವಿಧಾನವಾಗಿ ವಚನ ಸಾಹಿತ್ಯ ಆವಿರ್ಭವಿಸಿತು. ಈ ತತ್ವಗಳನ್ನು ಅನುಷ್ಠಾನಿಸಲು ಮತ್ತು ಧರ್ಮ ಪ್ರಸಾರದ ಮಹತ್ತರ ಕಾರ್ಯ ಮಾಡಲು ಅನುಭವ ಮಂಟಪವನ್ನು ನಿರ್ಮಿಸುತ್ತಾರೆ. ಜ್ಞಾನಶಕ್ತಿಯಾಗಿ ನೀಲಾಂಬಿಕೆ, ಕ್ರಿಯಾಶಕ್ತಿಯಾಗಿ ಅಕ್ಕನಾಗಲಾಂಬಿಕೆ ಬಸವಣ್ಣನವರ ಸಹಾಯಕ ಶಕ್ತಿಗಳಾಗಿ ನಿಲ್ಲುತ್ತಾರೆ. ಧರ್ಮದ ಕಡೆಗೆ ಜನ ಬರದಾಗ ಧರ್ಮವನ್ನೇ ಜನರ ಕಡೆಗೆ ಒಯ್ಯಬೇಕೆಂಬ ಆಸೆ ಹೊತ್ತು, ಬಸವಣ್ಣನವರು ಧರ್ಮಗಂಗೆಯನ್ನು ಜನ ಸಾಮಾನ್ಯರ ಮನೆ-ಮನಗಳ ಬಾಗಿಲಿಗೆ ಒಯ್ಯುತ್ತಾರೆ. ಎಲ್ಲರಿಗೂ ಧರ್ಮಸಂಸ್ಕಾರ ನೀಡುತ್ತಾರೆ. ಈ ಪರಿವರ್ತನ ಶೀಲ ಕ್ರಾಂತಿಗೆ ಆಕರ್ಷಿತರಾಗಿ ಜನರು ತಂಡೋಪತಂಡವಾಗಿ ಬರುತ್ತಾರೆ. ಜಂಬೂದ್ವೀಪದ ಶಿರೋಭಾಗದಿಂದ ಹಿಡಿದು ಪಾದದವರೆಗಿನ ಭೂಭಾಗದಲ್ಲೆಲ್ಲ ಧರ್ಮಗುರು ಬಸವಣ್ಣನವರ ಖ್ಯಾತಿ ಹರಡಿ ಸತ್ಯದ ಸಾಧಕರು, ಶೋಧಕರು ಕಲ್ಯಾಣದತ್ತ ಧಾವಿಸುತ್ತಾರೆ.

ಕಲ್ಯಾಣದ ಈ ಮಹಾನ್ ಕ್ರಾಂತಿಯಲ್ಲಿ ಹೆಗಲೆಣೆಯಾಗಿ ನಿಂತ ಮತ್ತೋರ್ವ ವ್ಯಕ್ತಿ ಅಕ್ಕನಾಗಮ್ಮನ ಮಗ ಚಿನ್ಮಯಜ್ಞಾನಿ ಚನ್ನಬಸವಣ್ಣನವರು. ವಯಸ್ಸಿಗೆ ಮೀರಿ ಜ್ಞಾನ-ಅನುಭವಗಳನ್ನು ಪಡೆದ, ಬಸವಧರ್ಮವನ್ನೇ ಮೈಗೂಡಿಸಿಕೊಂಡು ಬೆಳೆದ ಚೇತನ, ಧರ್ಮಗುರುವಿನ ಕರಕಮಲದಲ್ಲಿ ಜನ್ಮಿಸಿದ ಕಾರುಣ್ಯಶಿಶು. "ಇಂದೇ ಹುಟ್ಟಿದ ಕೂಸಿಗೆ ಇಂದೇ ಜವ್ವನವಾಯಿತು" ಎಂಬ ತೀವ್ರಗತಿಯ ಸಾಧನೆ ಅವರದು.

ಅನುಭವ ಮಂಟಪದ ಪ್ರಗತಿ, ಜನರ ಪರಿವರ್ತನೆ, ಬಸವಣ್ಣನವರ ಕೀರ್ತಿ ಮುಂತಾದುವನ್ನು ಸಹಿಸದೆ ಕೊಂಡಿ ಮಂಚಣ್ಣ, ನಾರಾಯಣ ಕ್ರಮಿತ ಮುಂತಾದವರು ಬಸವಣ್ಣನವರು ತಮ್ಮ ಭಕ್ತರಿಗೆ ಭಂಡಾರವನ್ನು ಸೂರೆ ಮಾಡುತ್ತಿದ್ದಾರೆಂಬ ಆರೋಪ ಹೊರಿಸಿ, ಬಿಜ್ಜಳನ ಮನಸ್ಸನ್ನು ಕಲಕಿದರು. ಆದರೆ ಧರ್ಮಪಿತರು ಲೆಕ್ಕ-ಪತ್ರಗಳನ್ನು ಆಗಿಂದಾಗಲೇ ಮಂಡಿಸಿ, ಭಂಡಾರವೂ ದುರುಪಯೋಗವಾಗಲಿಲ್ಲ ; ಮಾತ್ರವಲ್ಲ ಹಿಂದಿನ ಎಲ್ಲ ಸಚಿವರ ಕಾಲಕ್ಕಿಂತಲೂ ಇಮ್ಮಡಿ ಮುಮ್ಮಡಿ ಆದಾಯವು ಬೊಕ್ಕಸಕ್ಕೆ ಬರುತ್ತಿದೆ. ಎಂಬುದನ್ನು ಮನಗಾಣಿಸಿದರು. ಬಿಜ್ಜಳನು ತನ್ನ ಸಂಶಯಕ್ಕೆ ಪಶ್ಚಾತ್ತಾಪ ಪಟ್ಟ ; ಬಸವಣ್ಣನವರ

Digitalized by e-Sahithya Documentation Forum
Sponsored by Sarayu Foundation Trust

ಕಾರ್ಯದಕ್ಷತೆ, ಯೋಜನಾ ಚತುರತೆ, ಮುತ್ಸದ್ದಿತನಕ್ಕೆ ಬೆರಗಾದ. ಇಂತಹ ನಿಸ್ವಾರ್ಥಿಯ ಕೈಯಲ್ಲಿ ರಾಜ್ಯಲಕ್ಷ್ಮಿ ಸುರಕ್ಷಿತವೆಂದು ಬಗೆದು ಬಲದೇವ ಮಂತ್ರಿಗಳ ನಿಧನದಿಂದ ತೆರವಾಗಿದ್ದ ಪ್ರಧಾನಿಯ ಸ್ಥಾನವನ್ನು ಬಸವಣ್ಣನವರಿಗೆ ವಹಿಸಿಕೊಟ್ಟನು. ಹೀಗೆ ಕೊಂಡಿಮಂಚಣ್ಣ ಮುಂತಾದವರು ಹೊರಿಸಿದ ಆರೋಪದ ಹಾವು, ಲಿಂಗದೇವನ ಕರುಣೆಯಿಂದ ಧರ್ಮಪಿತ ಬಸವಣ್ಣನವರಿಗೆ ಕೀರ್ತಿಯ ಹೂವಾಯಿತು.

"ಹೊನ್ನಿನೊಳಗೊಂದೊರೆಯು, ವಸ್ತ್ರದೊಳಗೊಂದೆಳೆಯು, ಅನ್ನದೊಳಗೊಂದಗುಳ ನಾಳೆಗಿರಲಿ ಎಂದು ಸಂಗ್ರಹಿಸೆವುದಿಲ್ಲ. ಹೊತ್ತಾರೆ ಎದ್ದು ಎನ್ನ ಸುಖಕ್ಕೆ ಮಡದಿ ಮಕ್ಕಳ ಸುಖಕ್ಕೆ ಕುದಿಯದೆ, ಪ್ರಜೆಗಳ ಹಿತಚಿಂತನೆ ಮಾಡುವೆ" ಎಂಬ ಪ್ರತಿಜ್ಞೆ ಹೊತ್ತು, 'ಬಯಸದೆ ತಾನಾಗಿ ಬಂದುದು ಪರಮಾತ್ಮನ ಪ್ರಸಾದವೆಂದು' ಸೇವಾಕೈಂಕರ್ಯ ಭಾವದಿಂದ ಸ್ವೀಕರಿಸಿ ಮಹಾಮಂತ್ರಿಯಾದರು. ಬಿಜ್ಜಳನು ಸಂಭ್ರಮದಿಂದ ಮೆರವಣಿಗೆ ಮಾಡಿ ಸಮಸ್ತ ಪರಿವಾರ ಸಿಬ್ಬಂದಿಯೊಡನೆ ಬಸವಣ್ಣನವರನ್ನು ಮಹಾಮನೆಗೆ ಬೀಳ್ಕೊಟ್ಟಾಗ, ಜನರು ಆ ಮಹಾಪುರುಷನ ದರ್ಶನದಿಂದ ಆನಂದ ತುಂದಿಲರಾದರು. ಮಹಾಮನೆಯೊಳಕ್ಕೆ ಆರತಿ ಬೆಳಗಿ ಸ್ವಾಗತಿಸಿ ಅಕ್ಕ ನಾಗಮ್ಮ ಆನಂದದಿಂದ ಧರ್ಮಗುರುವಿನ ಪ್ರತಿಭೆ ಕೊಂಡಾಡುವಳು. ಆಗ ಗುರು ಬಸವಣ್ಣನವರು ವಿನಯದಿಂದ ಹೇಳುವರು; "ಇದೆಲ್ಲ ದೇವನೊಲಿದು ಇತ್ತುದು; ಅವನ ಒಲುಮೆಯಿಂದ ಕೊರಡೂ ಕೊನರುವುದು, ಬರಡೂ ಹಯನಾಗುವುದು. ಮಾಡಿದೆ – ಪಡೆದೆ ಎನ್ನಲು ನಾನಾರು?" ಬಸವಣ್ಣನವರು ಒಬ್ಬ ಆದರ್ಶ ಮುತ್ಸದ್ದಿಯಾಗಿ ಬಾಳಿದರು. ಉತ್ತಮ ಸ್ಥಿತಿಗೇರಿ ಉನ್ನತ ಅಧಿಕಾರದಲ್ಲಿದ್ದಾಗ ಬಂಧು – ಬಳಗದವರು ಏನಾದರೂ ಸ್ವಾರ್ಥ ಸಾಧಿಸಲು ಬಂದರೆ, 'ನೆಂಟರಿಷ್ಟರು ಬಂದರೆ ಸಮಯವಿಲ್ಲ ಎನ್ನಿ; ಒಡೆಯರಾದ ಪ್ರಜೆಗಳು ಬಂದರೆ ಗುಡಿ ತೋರಣವ ಕಟ್ಟಿ ಸ್ವಾಗತಿಸಿ" ಎನ್ನುತ್ತಿದ್ದರು. **"ಜಾತಿಯಿಂದ ಯಾರೂ ನನ್ನವರಲ್ಲ, ರಕ್ತ ಸಂಬಂಧದಿಂದಲೂ ನನ್ನವರಲ್ಲ, ಲಿಂಗಪಥದಲ್ಲಿ ನಡೆವವರಷ್ಟೇ ನನ್ನವರು"** ಎನ್ನುತ್ತಿದ್ದರು. ಅನುಭಾವಿಗಳು, ಯೋಗಿಗಳು, ಪ್ರಜೆಗಳು ಅವರ ಪ್ರಾಣವಾಗಿ **"ಜಂಗಮವೆ ಪ್ರಾಣ"** ಎನ್ನಿಸಿಕೊಂಡರು. ಶ್ರೇಷ್ಠ ಅರ್ಥ ಶಾಸ್ತ್ರಜ್ಞರಾಗಿ ಕಾಯಕದ ಹಾಲಿನ ಹೊಳೆಯಲ್ಲಿ, ದಾಸೋಹದ ತೆಪ್ಪ ತೇಲುವಂತಹ ಸಮೃದ್ಧಿ ಸಾಧಿಸಿದರು. ಜಾತಿವರ್ಣ ವರ್ಗರಹಿತ ಧರ್ಮಸಹಿತ ಕಲ್ಯಾಣ ರಾಜ್ಯವನ್ನು ಕಟ್ಟುವುದರಲ್ಲಿ ಯಶಸ್ವಿಯಾದರು. ಬೇಡುವವರೇ ಇಲ್ಲದ, ಎಲ್ಲರೂ ನೀಡಲು ಉತ್ಸುಕರೂ ಸಮರ್ಥರೂ ಆದ ಶರಣ ಸಮಾಜವನ್ನು ಕಟ್ಟಿದರು.

ಧಾರ್ಮಿಕ ಸಂಸ್ಕಾರವು ಎಲ್ಲ ವರ್ಗದವರಿಗೂ, ಪಂಚಮ ವರ್ಣದವರೆನ್ನಿಸಿಕೊಂಡ ಅಸ್ಪೃಶ್ಯರಿಗೂ, ಪತಿತರೆನ್ನಿಸಿಕೊಂಡ ವೇಶ್ಯೆಯರಿಗೂ ಲಭ್ಯವಾಗುವಂತೆ ಮಾಡಿ, "ಅವರೆಲ್ಲರನ್ನು ಇಂಬಿಟ್ಟುಕೊಂಡು" ಅರಿವಿನ ಮಹಾಂತರನ್ನಾಗಿ ಮಾಡಿದರು. ಹೀಗಾಗಿ ಬಸವ ನಾಮವು ಮಂತ್ರವಾಯಿತು. ಬಸವನ ದಿವ್ಯಮೂರ್ತಿ ಎಲ್ಲರ ಹೃದಯ ಸಿಂಹಾಸನದಲ್ಲಿ ಪ್ರತಿಷ್ಠಾಪನೆಗೊಂಡಿತು. ಬಸವಣ್ಣನವರು ನುಡಿದುದು ಶಾಸ್ತ್ರವಾಯಿತು. ನಡೆದುದು ಸತ್ಪಥವಾಯಿತು. **ಕಲ್ಯಾಣವೆಂಬುದು ಪ್ರಣತೆಯಾಗಿ, ಭಕ್ತಿರಸವು ತೈಲವಾಗಿ, ಸದಾಚಾರವು ಬತ್ತಿಯಾಗಿ ಬಸವಣ್ಣ ಎಂಬ ಜ್ಯೋತಿ ಮುಟ್ಟಲು ದೈವೀ ಪ್ರಕಾಶವು ತೊಳಗಿ ಬೆಳಗತೊಡಗಿತು. ಆ ಪ್ರಕಾಶದಲ್ಲಿ ತಮ್ಮ ಬಾಳಿನ ಹಣತೆಗಳನ್ನು ಹೊತ್ತಿಸಿಕೊಂಡು ಬೆಳಗಲು ಅನೇಕರು** ಧಾವಿಸಿದರು.

'ಜಾತಿಯಿಂದ ಗುರುತ್ವ ಬರದು, ಆತ್ಮ ಜ್ಯೋತಿಯಿಂದ ಮಾತ್ರ' ಎಂಬುದನ್ನು ಘೋಷಿಸಿ ಬಸವಣ್ಣನವರು ಶೂನ್ಯ ಪೀಠವನ್ನು ಸ್ಥಾಪಿಸಿದರು. ವೀರ ವೈರಾಗ್ಯನಿಧಿ

ಅಲ್ಲಮಪ್ರಭುಗಳು ಪ್ರಥಮ ಶೂನ್ಯಪೀಠಾಧಿಕಾರಿಯಾಗಿ ಅನುಭವ ಮಂಟಪದ ಸಚೇತಕ ಶಕ್ತಿಯಾದರು. ಲೋಹ ಚುಂಬಕದತ್ತ ಕಬ್ಬಿಣವು ಆಕರ್ಷಿಸಲ್ಪಡುವಂತೆ ವೀರ ವಿರಾಗಿಣಿ ಅಕ್ಕಮಹಾದೇವಿ, ಲಿಂಗಾಂಗಯೋಗಿ ಸಿದ್ಧರಾಮೇಶ್ವರ, ಕಾಶ್ಮೀರದ ಮಹಾರಾಜ ಮೋಳಿಗೆ ಮಾರಯ್ಯ, ತತ್ವ ನಿಷ್ಠುರಿ ಮಡಿವಾಳ ಮಾಚಯ್ಯ ಆಕರ್ಷಿಸಲ್ಪಟ್ಟರು. ಅನುಭವ ಮಂಟಪವು ಜ್ಞಾನನಿಧಿ ಚನ್ನಬಸವಣ್ಣ, ಕ್ರಿಯಾಶಕ್ತಿ ಅಕ್ಕನಾಗಲಾಂಬಿಕೆ, ಹಡಪದ ಅಪ್ಪಣ್ಣ, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಬ್ರಾಹ್ಮಣ ಮಧುವರಸ, ಸಮಗಾರ ಹರಳಯ್ಯ, ಅಂಬಿಗರ ಚೌಡಯ್ಯ, ಒಕ್ಕಲಿಗ ಮುದ್ದಣ್ಣ, ತುರುಗಾಹಿ ರಾಮಣ್ಣ ಮುಂತಾದ ಅಸಂಖ್ಯಾತ ಜಂಗಮ ಪುಂಗವರಿಂದ ವಿಜೃಂಭಿಸಿತು.

"ಜಾತಿಗಳು ಮಾನವ ಕಲ್ಪಿತವೇ ವಿನಾ ದೇವ ನಿರ್ಮಿತವಲ್ಲ" ಎಂಬುದಾಗಿ ಘೋಷಿಸಿ, ಬಸವ ಧರ್ಮವನ್ನು ಸ್ವೀಕಾರ ಮಾಡಿದ ಬ್ರಾಹ್ಮಣ ಮಂತ್ರಿ ಮಧುವರಸರ ಮಗಳ ಮತ್ತು ಸಮಗಾರ ಹರಳಯ್ಯನ ಮಗನ ಮದುವೆಗೆ ಬಸವಣ್ಣನವರು ಪ್ರೋತ್ಸಾಹ ನೀಡಿದರು. ಬಸವಣ್ಣನವರ ಅಗಾಧ ಯೋಜನೆ, ಸಮಾಜದಲ್ಲಿ ತರುತ್ತಿದ್ದ ಅಪೂರ್ವ ಪರಿವರ್ತನೆಗಳನ್ನು ಕಂಡು ಒಳಗೇ ತಳಮಳಿಸುತ್ತಿದ್ದ ಸಂಪ್ರದಾಯವಾದಿಗಳು ಅಂತರ್ವರ್ಣೀಯ ವಿವಾಹದ ನೆಪದಲ್ಲಿ ಸಿಡಿದೆದ್ದರು. ಶಾಸ್ತ್ರ ವಿರುದ್ಧವಾದ ವರ್ಣ ಸಂಕರವಿದೆಂದು ಆರೋಪಿಸಿದರು. ಸ್ವತಂತ್ರ ವಿಚಾರವಾದಿಯಲ್ಲದ ಬಿಜ್ಜಳನನ್ನು ಪ್ರಚೋದಿಸಿ ಬಸವಣ್ಣನವರಿಗೆ ಗಡಿಪಾರು ಶಿಕ್ಷೆ ವಿಧಿಸುವಂತೆ ಮಾಡಿದರು. ರಾಜಾಜ್ಞೆಯನ್ನು ಹೊತ್ತ ಬಸವಣ್ಣನವರು ಕಲ್ಯಾಣವ ಗಡಿ ತೊರೆದು ಕೂಡಲ ಸಂಗಮಕ್ಕೆ ಬಂದು, ಅಂತರ್ಮುಖಿಗಳಾಗಿ ತಪೋಮಗ್ನರಾದರು.

ಅತ್ತ ಕಲ್ಯಾಣದಲ್ಲಿ ಅಂತರ್ವರ್ಣೀಯ ವಿವಾಹದಲ್ಲಿ ಭಾಗವಹಿಸಿದ್ದಕ್ಕಾಗಿ ಮಧುವರಸ, ಶೀಲವಂತ ಮತ್ತು ಹರಳಯ್ಯನವರಿಗೆ ಕಣ್ಣು ಕೀಳಿಸುವ ಶಿಕ್ಷೆ ಮತ್ತು ಎಳೆಹೂಟೆ ಶಿಕ್ಷೆಯಾಯಿತು. ಈ ಕ್ರಾಂತಿಗೆ ಬೆಂಬಲ ನೀಡಿದ ಸಾವಿರಾರು ಶರಣರ ವಧೆಯಾಯಿತು. ಬಿಜ್ಜಳನ ಅನ್ಯಾಯದ ವಿರುದ್ಧ ಸಿಡಿದೆದ್ದ ಚಾಲುಕ್ಯ ಸಾಮಂತರಾದ ಜಗದೇವ ಮಲ್ಲಣ್ಣ ಬೊಮ್ಮಣ್ಣರಿಂದ ಬಿಜ್ಜಳನ ವಧೆಯಾಯಿತು.

ಅಂದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ (30–07–1196) ; ಕೂಡಲ ಸಂಗಮ ಕ್ಷೇತ್ರದಲ್ಲಿ ತಮ್ಮ ಕಲ್ಲಿನ ಗವಿಯಲ್ಲಿ ಬಸವಣ್ಣನವರು ಇಷ್ಟಲಿಂಗ ಪೂಜೆ–ತ್ರಾಟಕಯೋಗದಲ್ಲಿ ತಲ್ಲೀನರಾಗಿದ್ದಾರೆ. ಆಗ ಅವರಿಗೊಂದು ದಿವ್ಯವಾಣಿ ಕೇಳಿ ಬರುತ್ತದೆ. "ಬಸವಣ್ಣಾ, ನೀನು ಮರ್ತ್ಯಕ್ಕೆ ಬಂದ ಮಣಿಹ ಪೂರೈಸಿತು. ಇನ್ನು ನೀನು ನನ್ನಲ್ಲಿ ಒಂದಾಗು." ಈ ವಾಣಿಯನ್ನು ಕೇಳಿ ಅತ್ಯಂತ ಹರ್ಷಿತರಾಗುವರು. ತಮ್ಮ ಬದುಕಿನ ಸಿಂಹಾವಲೋಕನವನ್ನು ಮಾಡಿಕೊಂಡಾಗ ಸಂತೃಪ್ತಿಯ ಅಲೆ ಮುಖದ ಮೇಲೆ ಹಾಯುತ್ತವೆ. ಆಗ ಅವರು ತಮ್ಮ ಬಾಳೀಗ ನಿಷ್ಪತ್ತಿಯ ಹಣ್ಣು, ಲಿಂಗದೇವನಿಗೆ ಸಲ್ಲಬೇಕಾದುದು ಎಂದು ಅರಿಯುವರು.

ಭಕ್ತಿ ಎಂಬ ಪೃಥ್ವಿಯ ಮೇಲೆ ; ಗುರುವೆಂಬ ಬೀಜವಂಕುರಿಸಿ ;
ಲಿಂಗವೆಂಬ ಎಲೆಯಾಯಿತ್ತು ; ವಿಚಾರವೆಂಬ ಹೂವಾಯಿತ್ತು ;
ಆಚಾರವೆಂಬ ಕಾಯಾಯಿತ್ತು ; ನಿಷ್ಪತ್ತಿಯೆಂಬ ಹಣ್ಣಾಯಿತ್ತು.
ನಿಷ್ಪತ್ತಿಯೆಂಬ ಹಣ್ಣು ತಾನು ತೊಟ್ಟು ಕಳಚಿ ಬೀಳುವಲ್ಲಿ,
ಲಿಂಗದೇವ ತನಗೆ ಬೇಕೆಂದು ಎತ್ತಿಕೊಂಡ.

ಎಂದು ಪ್ರಸನ್ನ ಭಾವದಿಂದ ಹಾಡುವರು.

"ಅಯ್ಯಾ ಹಿಂದೆಯಾನು ಮಾಡಿದ ಮೆರಹಿಂದ ಬಂದೆನು ಈ ಭವದಲ್ಲಿ
ನಿಮ್ಮ ಲೀಲೆ ನಿಮ್ಮ ವಿನೋದ ಸೂತ್ರದಿಂದ,

Digitalized by e-Sahithya Documentation Forum
Sponsored by Sarayu Foundation Trust

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗೀತಂಗಳ ಆಡಿ ಹಾಡಿ
ಆ ದಾಸೋಹವೆಂಬ ಮಹಾಗಣ ಸಂಕುಳದೊಳೆನ್ನನಿರಿಸಿ
ನಿಮ್ಮ ಭಕ್ತಿಯ ಘನವ ನೀವೇ ಮೆರೆಯಲೆಂದು
ಪರವಾದಿ ಬಿಜ್ಜಳನ ತಂದೊಡ್ಡಿ, ಎನ್ನನು ಅವನೊಡನೆ ಹೋರಿ
ಮುನ್ನೂರ ಅರವತ್ತು ಸತ್ತ ಪ್ರಾಣವನೆತ್ತಿಸಿ,
ಮೂವತ್ತಾರು ಕೊಂಡೆಯವ ಗೆಲಿಸಿ,
ಎಂಬತ್ತೆಂಟು ಪವಾಡಂಗಳ ಕೊಂಡಾಡಿ,
ಮರ್ತ್ಯಲೋಕದ ಮಹಾಗಣಂಗಳ ಒಕ್ಕುದನಿಕ್ಕಿ ಎನ್ನ ಸಲಹಿದಿರಿ
ನಿಮ್ಮ ಮಹಾಗಣಂಗಳು ಮೆಚ್ಚಿ ಎನ್ನ ಸೂತಕದ ತೊಡೆದ ಕಾರಣ
ಪ್ರಭುದೇವರ ಕರುಣದಿಂದ ಪ್ರಾಣಲಿಂಗ ಸಂಬಂಧ ಸಯವಾಯಿತ್ತು
ನೀವು ಕಳಿಸಿದ ಬೆಸನು ಸಂದಿತ್ತು
ಉಘೇ ! ಇನ್ನು ಕೂಡಿಕೊಳ್ಳಾ ಲಿಂಗದೇವಾ".

ತಮ್ಮ ಕಾರಣಿಕ ಹುಟ್ಟು, ವೈಚಾರಿಕ ಬಾಲ್ಯ, ಮನೆಯಿಂದ ನಿರ್ಗಮನ, ಕೂಡಲ ಸಂಗಮಕ್ಕೆ ಆಗಮನ, ಗುರುಕುಲ ವಾಸ, ದೇವಾನುಗ್ರಹ, ಕಲ್ಯಾಣಕ್ಕೆ ಆಗಮನ, ರಾಜಕೀಯ ಕ್ಷೇತ್ರದಲ್ಲಿ ತ್ವರಿತ ಪ್ರಗತಿ, ಧಾರ್ಮಿಕ ಆಂದೋಲನ, ದೀನದಲಿತರ ಸುಧಾರಣೆ, ಅನುಭವ ಮಂಟಪ ನಿರ್ಮಾಣ, ಶರಣ ಸಮೂಹದಲ್ಲಿ ಸಂಗಮ, ಜಾತ್ಯತೀತ ಸಮಾಜ ರಚನೆ – ಈ ಎಲ್ಲ ಚಿತ್ರಪಟಲದ ಮೇಲೆ ಹಾಯ್ದು ಸಂತೃಪ್ತಿ ಎನಿಸುವುದು. ಒಂದು ವಿಶೇಷ ಮಣಿಹ ಹೊತ್ತು, ದೈವೀ ಕಾರುಣ್ಯ ಧರಿಸಿ, ದೇವನ ಮನಸ್ಸು ಸಂತೋಷಗೊಳ್ಳುವಂತೆ, ತಮ್ಮ ಅಂತರಾತ್ಮ ಮೆಚ್ಚುವಂತೆ ಬಾಳಿಯಾಗಿದೆ. ಇನ್ನು ಲಿಂಗದೇವನ ಕರೆಯಂತೆ ಅವನಲ್ಲಿ ಲೀನವಾಗುವುದು ಎಂದು ಸಂಕಲ್ಪಿಸುವರು. ತಮ್ಮ ಕುಂಡಲಿನೀ ಶಕ್ತಿಯನ್ನು ಆಧಾರ ಚಕ್ರದಿಂದ ಮೇಲೆತುವರು. ಆತ್ಮ ಚೇತನದ ವಿಶೇಷ ಬೆಳಕು ನಾಭಿ ಚಕ್ರದಿಂದ ಮೇಲೇರುತ್ತದೆ. ಹೃದಯದ ಭಾಗದಲ್ಲಿ ಕಣಕಾಲ ನಿಲ್ಲುತದೆ. ಪುನಃ ಆರೋಹಣವಾಗುತದೆ. ಆಗ ಬಸವಣ್ಣನವರ ಮುಖವು ದೇದೀಪ್ಯಮಾನವಾಗಿ ಬೆಳಗುವುದು. ಕಾಯ-ಜೀವಗಳ ಹೊಲಿಗೆಯನ್ನು ಬಿಚ್ಚಿ ಇಚ್ಛಾಮರಣಿಗಳಾಗಿದ್ದ ಅವರು ತಮ್ಮ ದೇಹದಿಂದ ಆತ್ಮವನ್ನು ಬೇರ್ಪಡಿಸಿ ಪರಮಾತ್ಮ ಚೈತನ್ಯದಲ್ಲಿ ಲಯಗೊಳಿಸಿದರು. ಆಗ ಮೇಲಿನಿಂದ ಒಂದು ಬೃಹತ್ ಬೆಳಕು ಇಳಿದು ಈ ಚಿಕ್ಕ ಜ್ಯೋತಿಯನ್ನು ಅಡಗಿಸಿಕೊಳ್ಳುತ್ತದೆ. ಅರ್ಥಾತ್ ಪರಮಾತ್ಮ ಪರಂಜ್ಯೋತಿಯಲ್ಲಿ ಬಸವ ಚೈತನ್ಯದ ಚಿಜ್ಯೋತಿ ವಿಲೀನಗೊಳ್ಳುತ್ತದೆ. ಹೀಗೆ ಬಸವಣ್ಣನವರು ಬಯಲಿನಲ್ಲಿ ಬಯಲಾದರು. ಮರ್ತ್ಯದ ಬಾಳ್ಗೆ ಮಂಗಲವನ್ನು ಹಾಡಿದರು. ಅವರು ಇಳೆಯನ್ನಗಲಿದ ನೂರಾರು ವರುಷಗಳಿಂದಲೂ ಆ ದಿನವು ಬಸವ ಪಂಚಮಿಯೆಂದು ಖ್ಯಾತಿವೆತ್ತಿದೆ. ಶಾರೀರಿಕವಾಗಿ ಬಸವಣ್ಣನವರು ಅಗಲಿದ್ದರೂ ಶರಣರ ಹೃದಯ ಕಮಲದಲ್ಲೆ ಪರಮ ಪ್ರಕಾಶವಾಗಿ ಬೆಳಗುತ್ತಲಿದ್ದಾರೆ. ಅಂತೆಯೇ ಜನಪದವು ಹೀಗೆ ಕೊಂಡಾಡುತ್ತದೆ.

ಎಲ್ಲ ಬಲ್ಲಿದನಯ್ಯಾ ಕಲ್ಯಾಣ ಬಸವಯ್ಯಾ
ಚೆಲ್ಲಿದನು ತಂದು ಶಿವ ಬೆಳಕ । ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುಡು ॥
ಉತ್ತಿ ಬಿತ್ತುವ ಮಂತ್ರ, ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವಮಂತ್ರ ನಿನ್ನೆಸರು । ಬಸವಯ್ಯಾ
ಮರ್ತ್ಯದೊಳು ಮಂತ್ರ ಜೀವನಕೆ ॥
ಜಯಗುರು ಬಸವೇಶ ಹರಹರ ಮಹಾದೇವ ॥

ಮಂಗಲ ಗೀತೆ

ಓಂ ಗುರು ಬಸವ ಪ್ರಭು ವರಗುರು ಶರಣವಿಭು
ಆಶ್ರಿತಜನ ಸಂರಕ್ಷಕ ಸದ್ಗುರು ಬಸವ ಪ್ರಭು।
ವರಗುರು ಶರಣವಿಭು ॥ಪ॥

ಶರಣಲೋಲನು ನೀ ಪರಮ ಪುರುಷನು ನೀ
ಕರುಣಾ ಸಿಂಧು ನೀ ದೀನರ ಬಂಧು ನೀ॥
ಸುಭಗಗಾತ್ರನು ನೀ ಪ್ರೇಮನೇತ್ರನು ನೀ
ಪರಮಚರಿತನು ನೀ ಜ್ಞಾನ ಭರಿತನು ನೀ ॥ ॥1॥

ಭವಭಯ ತಾರಕನೆ ನವಪಥದಾಯಕನೆ
ಹರಗಣತಾರೆಗಳಾ ನಡುವಿನ ಚಂದಿರನೆ ॥
ಮಾತಾಪಿತನು ನೀ ಬಂಧು ಬಳಗವು ನೀ
ಭಕ್ತಜನ ಮನೋರಾಜಿತ ಮಂತ್ರ ಪುರುಷನು ನೀ ॥2॥

ಮೋಹ ರಹಿತನು ನೀ ಮಮತಾ ಸಹಿತನು ನೀ ॥
ಮಾಯಾದೂರಕ ನೀ ಮುಕುತಿಯ ದಾಯಕ ನೀ
ಮನುಕುಲ ಜ್ಯೋತಿಯು ನೀ ಕ್ರಾಂತಿಯ ವೀರನು ನೀ
ಶಾಂತಿಯ ಹೊನಲನು ಹರಿಸಲು ಬಂದ ಸಚ್ಚಿದಾನಂದ ಕಂದ ನೀ ॥ ॥3॥

ಚಿನ್ಮಯ ಜ್ಞಾನಿ ಚನ್ನ ಬಸವಣ್ಣನವರ ಜೀವನ ಚರಿತ್ರೆ

ಶ್ರೀ ಚನ್ನಬಸವೇಶ ಭಕ್ತರನು ಪೊರೆವೀಶ
ಜಯ ಭಜಕ ಜನ ಬಂಧು ಕಾರುಣ್ಯ ಸಿಂಧು ॥ ಪ ॥

ಪರಮಗುರು ಬಸವನ ಕರಕಮಲ ಜನಿತನೆ
ಶರಣ ಹೃತ್ಸರಸಿಯ ಶ್ರೀ ಪರಮಹಂಸೆಯೆ ॥ ಅ.ಪ ॥

ಕಾರ್ತೀಕ ಪ್ರತಿಪದೆಯ ದೀವಳಿಗೆಯಂದು
ಮಾತೆಯ ಗರ್ಭದಿಂ ನೀ ಬಂದೆಯಂದು।
ಅವ್ವ ನಾಗಲಾಂಬಿಕೆಯ ಅಕ್ಕರೆಯ ಚಿಣ್ಣನೆ
ಅಯ್ಯ ಶಿವದೇವನ ಮಮತೆಯ ತನುಜನೆ ॥ 1 ॥

ಷಟಸ್ಥಲದ ಚೌಕಟ್ಟ ವಚನ ಶಾಸ್ತ್ರಕ್ಕೆ ಇತ್ತೆ
ಸಟೆಯ ಮಾಯೆಯ ಗೆಲಿದು ವಿರಾಗಿ ಎನಿಸಿದೆ।
ಉನ್ಮನಿಯ ಉಯ್ಯಾಲೆಯಲ್ಲಿ ತೂಗಿ ನಲಿದು
ಅನುಭವ ಮಂಟಪದ ಹೊಂಗಳಸ ನೀನಾದೆ ॥ 2 ॥

ವಚನ ವಾಙ್ಮಯಕ್ಕಂದು ಸಂಕಷ್ಟ ಎರಗಿರಲು
ಕಾಷಾಯ ಧರಿಸಿಯೂ ಖಡ್ಗವನು ನೀ ಹಿಡಿದೆ !
ಮುನ್ನಡೆಸಿ ಶರಣರನು ವಾಙ್ಮಯವ ರಕ್ಷಿಸಿದೆ
ಚನ್ನ ಹುಣ್ಣಿಮೆಯಂದು ಉಳಿವೆಯಲಿ ಬಯಲಾದೆ ॥ 3 ॥

Digitalized by e-Sahithya Documentation Forum
Sponsored by Sarayu Foundation Trust

ನೀ ಪಾದವಿಟ್ಟುದು ಸುಕ್ಷೇತ್ರ ತಾನಾಯ್ತು
ನೀ ನುಡಿದ ಮಾತೆಲ್ಲ ದಿವ್ಯ ಶಾಸ್ತ್ರವದಾಯ್ತು
ಶರಣ ಧರ್ಮದ ಉಳಿವು ನಿನ್ನಿಂದಲೇ ಆಯ್ತು
ವರ ಸಚ್ಚಿದಾನಂದನ ಮೆಚ್ಚುಗೆಯ ಮಗನಾದೆ **॥ 4 ॥**

(ಲಿಂಗಾಯತ ಧರ್ಮದ ಷಟ್ ಪ್ರಮಥರಲ್ಲಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಒಬ್ಬರು. ವಿಶ್ವಗುರು ಬಸವಣ್ಣನವರು ಲಿಂಗಾಯತ ಧರ್ಮ ಪುರುಷನ ಆತ್ಮವಾದರೆ ಚನ್ನಬಸವಣ್ಣನವರು ಪ್ರಾಣ ಸ್ವರೂಪರು. ಶೂನ್ಯ ಪೀಠಾಧೀಶ ಅಲ್ಲಮಪ್ರಭು ಶಿರಸ್ವರೂಪರಾದರೆ ಅಕ್ಕಮಹಾದೇವಿ ನಾಸಿಕದಂತೆ. ಸಿದ್ಧರಾಮೇಶ್ವರ – ಮಡಿವಾಳ ಮಾಚಿದೇವರು ನೇತ್ರ ಸ್ವರೂಪರು. ಶ್ರೀ ಗುರು ಬಸವಣ್ಣನವರ ನೇತೃತ್ವದಲ್ಲಿ ರೂಪುಗೊಂಡ ಈ ಧರ್ಮಕ್ಕೆ ತಾತ್ವಿಕವಾಗಿ ಒಂದು ಚೌಕಟ್ಟನ್ನು, ವಿಚಾರಕ್ಕೆ ಒಂದು ಆಚಾರಕ್ರಮವನ್ನು ಒದಗಿಸಿಕೊಂಡ ಮಹಾಪುರುಷ ಚನ್ನಬಸವಣ್ಣನವರು.)

ಮಹಾಗುರು ಬಸವಣ್ಣನವರ ಮಣಿಹವನ್ನು ಪೂರೈಸಲೆಂದೇ ಹುಟ್ಟಿ ಬಂದ ಮಹಾಚೇತನ ಚನ್ನಬಸವಣ್ಣನವರು. ಆನಂದ ನಾಮ ಸಂವತ್ಸರದಲ್ಲಿ (ಕಿ.ಶ.1134) ವೈಶಾಖ ಮಾಸದ ರೋಹಿಣಿ ನಕ್ಷತ್ರದಲ್ಲಿ ಹುಟ್ಟಿದ ಬಸವಣ್ಣನವರು ವಿಕ್ರಮ ನಾಮ ಸಂವತ್ಸರದಲ್ಲಿ (ಕಿ.ಶ.1160) ತಮ್ಮ 27ನೆಯ ವಯಸ್ಸಿಗೆ ಕಲ್ಯಾಣವನ್ನು ಪ್ರವೇಶಿಸಿದರು. ಈವರೆಗೂ ಅವರ ಹೃನ್ಮನದಲ್ಲಿ ರೂಪುಗೊಂಡ ಆಲೋಚನೆಗಳು, ಸಿದ್ಧಾಂತ ಈಗ ಕಾರ್ಯರೂಪಕ್ಕೆ ಬರಲಾರಂಭಿಸುತ್ತವೆ. ಸಮಾಜದಲ್ಲಿ ಧಾರ್ಮಿಕ, ನೈತಿಕ, ಸಾಂಸ್ಕೃತಿಕ ಅಧ್ಯಾತ್ಮಿಕ ಪರಿವರ್ತನೆ ಮಾಡಲು ಗುರು ಬಸವಣ್ಣನವರು ಸಂಕಲ್ಪ ತೊಟ್ಟರು. ಇದರ ಫಲವಾಗಿ ಸಮಾಜದಲ್ಲಿ ಧಾರ್ಮಿಕ, ನೈತಿಕ, ಸಾಂಸ್ಕೃತಿಕ ಸಾಹಿತ್ಯಿಕ ಮೌಲ್ಯಗಳನ್ನೊಳಗೊಂಡ ಸಂವಿಧಾನವಾಗಿ ವಚನ ಸಾಹಿತ್ಯ ಆವಿರ್ಭವಿಸಿತು. ಈ ತತ್ವಗಳನ್ನು ಅನುಷ್ಠಾನಿಸಲು ಮತ್ತು ಧರ್ಮ ಪ್ರಸಾರದ ಮಹತ್ತರ ಕಾರ್ಯ ಮಾಡಲು ಅನುಭವ ಮಂಟಪವನ್ನು ನಿರ್ಮಿಸುತ್ತಾರೆ. ಜ್ಞಾನಶಕ್ತಿಯಾಗಿ ನೀಲಾಂಬಿಕೆ, ಕ್ರಿಯಾಶಕ್ತಿಯಾಗಿ ಅಕ್ಕನಾಗಲಾಂಬಿಕೆ ಬಸವಣ್ಣನವರ ಸಹಾಯಕ ಶಕ್ತಿಗಳಾಗಿ ನಿಲ್ಲುತ್ತಾರೆ. ಧರ್ಮದ ಕಡೆಗೆ ಜನ ಬರದಾಗ ಧರ್ಮವನ್ನೇ ಜನರ ಕಡೆಗೆ ಒಯ್ಯಬೇಕೆಂಬ ಆಸೆ ಹೊತ್ತು, ಬಸವಣ್ಣನವರು ಧರ್ಮಗಂಗೆಯನ್ನು ಜನಸಾಮಾನ್ಯರ ಮನೆ–ಮನಗಳ ಬಾಗಿಲಿಗೆ ಒಯ್ಯುತ್ತಾರೆ. ಎಲ್ಲರಿಗೂ ಧರ್ಮಸಂಸ್ಕಾರ ನೀಡುತ್ತಾರೆ. ಈ ಪರಿವರ್ತನ ಶೀಲ ಕ್ರಾಂತಿಗೆ ಆಕರ್ಷಿತರಾಗಿ ಜನರು ತಂಡೋಪತಂಡವಾಗಿ ಬರುತ್ತಾರೆ. ಜಂಬೂದ್ವೀಪದ ಶಿರೋಭಾಗದಿಂದ ಹಿಡಿದು ಪಾದದವರೆಗಿನ ಭೂಭಾಗದಲ್ಲೆಲ್ಲ ಧರ್ಮಗುರು ಬಸವಣ್ಣನವರ ಖ್ಯಾತಿ ಹರಡಿ ಸತ್ಯದ ಸಾಧಕರು ಶೋಧಕರು ಕಲ್ಯಾಣದತ್ತ ಧಾವಿಸುತ್ತಾರೆ. ಕಲ್ಯಾಣವೆಂಬುದು ಪ್ರಣತೆಯಾಗಿ, ಭಕ್ತಿರಸವು ತೈಲವಾಗಿ, ಸದಾಚಾರವು ಬತ್ತಿಯಾಗಿ ಬಸವ ಎಂಬ ಜ್ಯೋತಿ ಮುಟ್ಟಲು ದೈವೀ ಪ್ರಕಾಶವು ತೊಳಗಿ ಬೆಳಗಲಾರಂಭಿಸುತ್ತದೆ.

ಬಸವಣ್ಣನವರ ಈ ಮಹಾನ್ ಕ್ರಾಂತಿಯಲ್ಲಿ ಹೆಗಲೆಣೆಯಾಗಿ ನಿಂತ ಮತ್ತೋರ್ವ ವ್ಯಕ್ತಿ ಅಕ್ಕನಾಗಮ್ಮನ ಮಗ ಚಿನ್ಮಯಜ್ಞಾನಿ ಚನ್ನಬಸವಣ್ಣನವರು. **"ನಾನೊಂದು ಕಾರಣಕ್ಕೆ ಮರ್ತ್ಯಕ್ಕೆ ಬಂದೆನು; ಬಂದ ಬಳಲಿಕೆಯ ಪರಿಹರಿಸಲು ಚನ್ನಬಸವಣ್ಣನವರು ಬಂದರು."** ಎಂದು ಗುರು ಬಸವಣ್ಣನವರೇ ಉದ್ಗರಿಸುತ್ತಾರೆ. ಚನ್ನಬಸವಣ್ಣನವರು ಅಕ್ಕನಾಗಲಾಂಬಿಕೆ ಮತ್ತು ಶಿವಸ್ವಾಮಿಯವರ ದಾಂಪತ್ಯ ಸರೋವರದಲ್ಲಿ ಅರಳಿದ ಜ್ಞಾನ ತಾವರೆ. ಗುರು ಬಸವಣ್ಣನವರಿಗಿಂತಲೂ ನಾಲ್ಕಾರು ವರುಷ ಹಿರಿಯರಾದ ನಾಗಲಾಂಬಿಕೆ ಸಹೋದರನಲ್ಲಿ ವಿಚಾರಶೀಲತೆಯನ್ನು ಬೆಳೆಸಲು ಕಾರಣರಾದ ಮಹಿಮಾನ್ವಿತೆ. ಅವರನ್ನು ಕೂಡಲ ಸಂಗಮದ ಸಮೀಪದ ಬ್ರಹ್ಮಪುರಿಯ ಕಣ್ವ ಶಾಖೆಯ ಕೌಂಡಿಣ್ಯ ಗೋತ್ರದ ಸ್ಮಾರ್ತ ಸಂಪ್ರದಾಯದ

ನೀಲಕಂಠರಾಯನ ಮಗ ಶೈವ ಬ್ರಾಹ್ಮಣ ಯುವಕ ಶಿವರಾಯರಿಗೆ ಮದುವೆ ಮಾಡಿಕೊಡಲಾಯಿತು. ಬಸವಣ್ಣನವರು ಕೂಡಲ ಸಂಗಮದಲ್ಲಿ ವಿದ್ಯಾಭ್ಯಾಸ ಪೂರೈಸಿ, ಪರಮಾತ್ಮನಿಂದ ಆದೇಶ ಪಡೆದು ಮಂಗಳವೇಡೆಗೆ ಹೊರಟು ನಿಂತಾಗ ಅಕ್ಕನಾಗಲಾಂಬಿಕೆಯೂ ಸಹೋದರನ ಜೊತೆಗೇ ಸಾಗಿದರು. ಮನೆತನ – ಕರ್ತವ್ಯಗಳನ್ನು ಬಿಡಲಾರದ ಶಿವರಾಯರು ಕೂಡಲ ಸಂಗಮದಲ್ಲಿಯೇ ಉಳಿದರಾದರೂ ನಂತರದಲ್ಲಿ ಕಲ್ಯಾಣಕ್ಕೆ ನಡೆದು ಮಹಾಮನೆಯ ಉಗ್ರಾಣದ ಮೇಲ್ವಿಚಾರಣೆಯ ಹೊಣೆಗಾರಿಕೆ ವಹಿಸಿಕೊಂಡರು.

ನಂದನ ನಾಮ ಸಂವತ್ಸರದ (ಕ್ರಿ.ಶ.1172) ವೈಶಾಖ ಶುದ್ಧ ಪಾಡ್ಯ ಮಂಗಳವಾರ ಕೃತ್ತಿಕಾ ನಕ್ಷತ್ರದಲ್ಲಿ ಪ್ರಾತಃಕಾಲದಲ್ಲಿ ಮೃಣ್ಮಯ ಶರೀರ ಹೊದ್ದು ಚನ್ನಬಸವಣ್ಣನವರು ಅವತರಿಸಿದರು. ಅನುಭವ ಮಂಟಪದ ಪರಿಸರದಲ್ಲಿ, ತಾಯಿಯ ಅಧ್ಯಾತ್ಮಿಕ ತಪಸ್ಸನ್ನು ಮೈಗೂಡಿಸಿಕೊಂಡು, ಗುರು ಬಸವಣ್ಣನವರ ಕಾರುಣ್ಯ ರಸವನ್ನೇ ಉಂಡು, ಬಸವ ಧರ್ಮದ ಗಾಳಿಯನ್ನೇ ಉಸಿರಾಡಿ ಬೆಳೆದ ಚನ್ನಬಸವಣ್ಣನವರು ವಯಸ್ಸಿಗೆ ಮೀರಿದ ಜ್ಞಾನ ಅನುಭಾವಗಳನ್ನು ಹೊಂದಿದರು. ತಾಯಿಯ ಗರ್ಭದಲ್ಲಿರುವಾಗಲೇ ಮಂತ್ರೋಪದೇಶ ಪಡೆದು, ಶ್ರೀ ಗುರು ಬಸವಣ್ಣನವರ ಕರಮಕಮಲದಲ್ಲಿ ದೀಕ್ಷಿತರಾಗಿ ಜ್ಞಾನಮೇರುವಾಗಿ ಬೆಳೆದ ಚನ್ನ ಬಸವಣ್ಣನನ್ನು ಕಂಡು ಇಂದೇ ಹುಟ್ಟಿದ ಕೂಸಿಗೆ ಇಂದೇ ಜವ್ವನವಾಯಿತ್ತು ಎಂದು ಧರ್ಮಪಿತ ಬಸವಣ್ಣನವರು ಉದ್ಗರಿಸುವಂತಹ ಕ್ಷಿಪ್ರಗತಿಯ ಸಾಧನೆ ಅವರದು.

ಶ್ರೀಮದಲ್ಲಮಪ್ರಭು – ಸಿದ್ಧರಾಮರು ಬಂದಾಗ ಅವರನ್ನು ಸ್ವಾಗತಿಸಿ ಬರಮಾಡಿಕೊಳ್ಳುವುದು; ನುಲಿಯ ಚಂದಯ್ಯ ಮುಂತಾದವರು ಗುರುತರ ತಾತ್ವಿಕ ಸಮಸ್ಯೆಗಳನ್ನು ಒಡ್ಡಿದಾಗ ಅದಕ್ಕೆ ಉತ್ತರಿಸುವುದು ಮುಂತಾದುವನ್ನು ಕಂಡಾಗ ಚನ್ನಬಸವಣ್ಣನವರ ಅದ್ಭುತ ನಿಲುವು ಗೋಚರವಾಗತ್ತದೆ. ಚನ್ನಬಸವಣ್ಣನವರ ಬದುಕಿನ ಮಹತ್ವಪೂರ್ಣ ಸನ್ನಿವೇಶವೆಂದರೆ ವಯಸ್ಸಿನಲ್ಲಿ ತಮಗಿಂತಲೂ ಹಿರಿಯರಾದ ಸಿದ್ಧ ಮಾರ್ಗಾನುಯಾಯಿ ಕರ್ಮಯೋಗಿ ಸಿದ್ಧರಾಮರಿಗೆ ಲಿಂಗಧಾರಣೆ ಮಾಡಿ ಅವರನ್ನು ಲಿಂಗಾಂಗಯೋಗ ಮಾರ್ಗದಲ್ಲಿ ಮುನ್ನಡೆಸುವುದು. ದೀಕ್ಷಾನುಗ್ರಹ ಪಡೆದ ಸಿದ್ಧರಾಮೇಶ್ವರರು ಗುರು ಚನ್ನಬಸವಣ್ಣನವರನ್ನು ಪರಿಪರಿಯಾಗಿ ಕೊಂಡಾಡುವರು.

ಅಧ್ಯಾತ್ಮ ಅಧ್ಯಾತ್ಮವೆಂಬಿರಿ; ಅಧ್ಯಾತ್ಮವಾರಿಗೆ ?
ಶ್ರೀಗುರು ಬಹಳವಪ್ಪ ಶಿವಲಿಂಗವ ಸೂಕ್ಷ್ಮವ ಮಾಡಿ,
ಕರಸ್ಥಲದಲ್ಲಿ ಕೊಟ್ಟ ಬಳಿಕ ಬೇರೆ ಯೋಗವುಂಟೆ ?
ತನ್ನ ಹಸ್ತವ ಮಸ್ತಕದಲ್ಲಿಟ್ಟು ವಾಯು ಪ್ರಾಣಿಯಾಗಿರ್ದುದ ಕೊಂದು
ಲಿಂಗ ಪ್ರಾಣಿಯ ಮಾಡಿದ ಬಳಿಕ, ಅಕ್ಷರವೈದರಲ್ಲಿ ಮುಕ್ತನ ಮಾಡಿದ ಬಳಿಕ
ಮರಳಿ ಯೋಗವುಂಟೇ ಶಿವಯೋಗವಲ್ಲದೆ?
ಲಿಂಗಾರ್ಚನೆಯ ಮಾಡಿ ಜಂಗಮ ಪ್ರಸಾದವ ಕೊಂಡ ಬಳಿಕ
ಬರಿಯ ಯೋಗಕ್ಕೆ ಒಡಂಬಡುವುದೇ ಅರಿವು?
ಇಂತಪ್ಪವನತಿಗಳೆದು ಶುದ್ಧ ಲಿಂಗಯೋಗಿಯ ಮಾಡಿದಾತ ಚನ್ನಬಸವಣ್ಣ
ಮಹಾಲೋಕದಲ್ಲಿಪ್ಪ ಆದ್ಯಕ್ಷರ ದ್ವಯವ
ಭೇದಿಸಿ ತಂದು ಕರಸ್ಥಲದಲ್ಲಿರಿಸಿ,
ಇದು ಉರುತರ ಪದವೆಂಬ ತೋರಿಕೊಟ್ಟು
ಎನ್ನ ತನ್ನಂತೆ ಮಾಡಿದ ಗುರು ಚನ್ನಬಸವಣ್ಣ
ಆನು ಚನ್ನಬಸವಣ್ಣನ ಕರುಣದಿಂದ ಅಭ್ಯಾಸ ಯೋಗವನತಿಗಳೆದು

Digitalized by e-Sahithya Documentation Forum
Sponsored by Sarayu Foundation Trust

ಲಿಂಗಯೋಗದಲ್ಲಿ ನಿತ್ಯನಾಗಿ,
ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಐಕ್ಯ ಎಂಬ
ಷಡುಸ್ಥಳಕ್ಕೆ ಅಧಿಕಾರಿಯಾದೆನು, ನಿನ್ನವರ ಸಲುಗೆಗೆ ಸಂದೆನು
ಚನ್ನಬಸವಣ್ಣನ ಕೃಪೆ ಎನ್ನ ನಿಂತು ಮಾಡಿತ್ತು ಕಾಣಾ ಪ್ರಭುವೆ
ಕಪಿಲ ಸಿದ್ಧ ಮಲ್ಲಿಕಾರ್ಜುನಾ.

ಗುರು ಬಸವಣ್ಣನವರ ತಮ್ಮ ಶಿಷ್ಯೋತ್ತಮ ಚನ್ನಬಸವಣ್ಣನವರನ್ನು ಹೀಗೆ ಹೊಗಳುತ್ತಾರೆ:

ಬಿತ್ತದೆ ಬೆಳೆಯದೆ ಬೆಳೆದ ಹೆಬ್ಬೆಳಸಿನ ರಾಶಿಯ ನೋಡಾ!
ಸುಗಂಧ ಬಂಧುರದಂತೆ ಹುಟ್ಟುತ್ತಲೇ ಪರಿಮಳ !
ಆದಿ ಅನಾದಿಯಿಲ್ಲದ ಮುನ್ನವೆ ತನ್ನಿಂದಲೇ ತಾನಾದ ಕಾರಣ,
ಮುಟ್ಟದೆ, ತಟ್ಟದೆ ಗುರು ಕಾರುಣ್ಯವ ಪಡೆದು,
ಲಿಂಗಸ್ವಯವಾಗಿ ಎನಗೆ ಗತಿಪಥವ ತೋರಿಸಬೇಕೆಂದು
ಆಗಾದನು ಲಿಂಗದೇವರಲ್ಲಿ ಚನ್ನಬಸವಣ್ಣನು!
ಲೋಕದಿಚ್ಚೆಯ ನಡೆದವನಲ್ಲ ಲೋಕದಿಚ್ಚೆಯ ನುಡಿದವನಲ್ಲ
ಲೋಕವಿರಹಿತ ಶರಣ ನೋಡಾ
ಲಿಂಗವೇ ಗೂಡಾಗಿ ಜಂಗಮವೆ ಸ್ವಾಯತವಾಗಿ
ಪ್ರಸಾದವೇ ಪ್ರಾಣವಾಗಿ ಪರಿಣಾಮದಲ್ಲಿ ಇಪ್ಪ ನೋಡಯ್ಯಾ

ಲಿಂಗದೇವಾ, ನಿಮ್ಮ ಶರಣ ಚನ್ನಬಸವಣ್ಣಂಗೆ ನಮೋ ನಮೋ ಎಂಬೆನು.

ಶಿಷ್ಯರು, ಭಕ್ತರ ಕೈಯಲ್ಲಿ ಹೊಗಳಿಸಿಕೊಂಡವರಿರಬಹುದು; ಆದರೆ ತಮ್ಮ ಗುರುವಿನ ಕೈಯಲ್ಲಿಯೇ ಹೊಗಳಿಸಿಕೊಂಡ ಮಹಾನುಭಾವ ಚನ್ನಬಸವಣ್ಣ.

ಅಪಾರ ಜ್ಞಾನದೊಡನೆ ವಿನಯಭಾವ ಸಂಪನ್ನತೆ ಬೇರೆ ಚಿನ್ನಕ್ಕೆ ಸುವಾಸನೆ ಕೊಟ್ಟಂತಾಗಿದೆ. ಸಿದ್ಧರಾಮೇಶ್ವರರು ಒಮ್ಮೆ ತಮ್ಮ ಗುರು ಚನ್ನಬಸವಣ್ಣನವರನ್ನು, ಗುರುವಿನ ಗುರು ಬಸವಣ್ಣನವರನ್ನು ಸೊನ್ನಲಾಪುರಕ್ಕೆ ಬರಮಾಡಿಕೊಂಡು ಪಲ್ಲಕ್ಕಿಯ ಸ್ವಾಗತ ಏರ್ಪಡಿಸಿದ್ದಾರೆ. ಗುರು ಬಸವಣ್ಣನವರು ಮನುಷ್ಯರು ಹೊರುವ ಪಲ್ಲಕ್ಕಿ ಏರಲು ನಿರಾಕರಿಸಿ ರಥಾರೂಢರಾಗಿ ಮೆರವಣಿಗೆಯಲ್ಲಿ ಹೊರಟಿದ್ದಾರೆ. ಚನ್ನಬಸವಣ್ಣನವರಾದರೂ ಪಲ್ಲಕ್ಕಿಯನ್ನು ಏರಲೇಬೇಕೆಂದು ಸಿದ್ಧರಾಮೇಶ್ವರರು ಒತ್ತಾಯ ಮಾಡಿದಾಗ ಚನ್ನಬಸವಣ್ಣನವರು ಹೀಗೆ ನಿರಾಕರಿಸುತ್ತಾರೆ.

ನಮ್ಮ ಗುರುಗಳ ಸನ್ನಿಧಿಯಲ್ಲಿ ನಿಮ್ಮ ಗುರುಗಳು
ಪಲ್ಲಕ್ಕಿಯನೇರುವರೆಂತು?
ನಮ್ಮ ಗುರುಗಳ ಸನ್ನಿಧಿಯಲ್ಲಿ ನಿಮ್ಮ ಗುರುಗಳು ಮೆರೆವರೆಂತು?
ಅವರ ಮೆರವಣಿಗೆಯೇ ಎನ್ನ ಮೆರವಣಿಗೆ
ಅವರಾನಂದವೆ ಎನ್ನಾನಂದ ಕಾಣಾ
ಕೂಡಲ ಚನ್ನಸಂಗನ ಶರಣ, ಸಿದ್ಧರಾಮಯ್ಯ!

ಎಂಥ ಗುರು -ಶಿಷ್ಯ ಸಂಬಂಧ! ಶಿಷ್ಯನಲ್ಲಿರುವ ವೈಶಿಷ್ಟ್ಯವನ್ನು ಗುರುತಿಸಿ ನಮೋ ನಮೋ ಎಂಬ ಗುರುವು; ಬಾಯಿ ತುಂಬ ಹೊಗಳಿದರೂ ಅಹಂಕಾರದಿಂದ ಬೀಗದ ಶಿಷ್ಯ!

ಚನ್ನಬಸವಣ್ಣನವರದು ಎಂತಹ ಕಠಿಣ ಪರಿಸ್ಥಿತಿಯಲ್ಲೂ ಎದೆಗೆಡದ ಆತ್ಮಸ್ಥೈರ್ಯ, ಉದ್ವಿಗ್ನಗೊಳ್ಳದ ಚಿತ್ತ ಸಮತೆಯನ್ನು ಹೊಂದಿದ್ದರೆಂದೇ ಕಠಿಣ ಪರಿಸ್ಥಿತಿಯನ್ನು ನಿಭಾಯಿಸಲು ಅವರಿಗೇ ಶ್ರೀಗುರುವು ಹೊಣೆಗಾರಿಕೆಯನ್ನು ವಹಿಸಿಕೊಟ್ಟುದು. ಅಂಥ ಪ್ರಸಂಗ ಬಂದುದು ಹೀಗೆ:

ಅನುಭವ ಮಂಟಪದ ಪ್ರಗತಿ, ಜನರ ಪರಿವರ್ತನೆ, ಬಸವಣ್ಣನವರ ಕೀರ್ತಿ ಮುಂತಾದುವನ್ನು ಸಹಿಸದ ಕೊಂಡಿ ಮಂಚಣ್ಣ, ನಾರಾಯಣ ಕ್ರಮಿತ

ಮುಂತಾದವರು ಬಸವಣ್ಣನವರು ತಮ್ಮ ಭಕ್ತರಿಗೆ ಭಂಡಾರವನ್ನು ಸೂರೆ ಮಾಡುತ್ತಿದ್ದಾರೆಂಬ ಆರೋಪ ಹೊರಿಸಿ, ಬಿಜ್ಜಳನ ಮನಸ್ಸನ್ನು ಕಲಕಿದರು. ಆದರೆ ಧರ್ಮಪಿತರು. ಲೆಕ್ಕ-ಪತ್ರಗಳನ್ನು ಆಗಿಂದಾಗಲೇ ಮಂಡಿಸಿ, ಭಂಡಾರವೂ ದುರುಪಯೋಗವಾಗಲಿಲ್ಲ; ಮಾತ್ರವಲ್ಲ ಹಿಂದಿನ ಎಲ್ಲ ಸಚಿವರ ಕಾಲಕ್ಕಿಂತಲೂ ಇಮ್ಮಡಿ ಮುಮ್ಮಡಿ ಆದಾಯವು ಬೊಕ್ಕಸಕ್ಕೆ ಬರುತ್ತಿದೆ ಎಂಬುದನ್ನು ಮನಗಾಣಿಸಿದರು. ಬಿಜ್ಜಳನು ತನ್ನ ಸಂಶಯಕ್ಕೆ ಪಶ್ಚಾತ್ತಾಪ ಪಟ್ಟ ; ಬಸವಣ್ಣನವರ ಕಾರ್ಯದಕ್ಷತೆ, ಯೋಜನಾ ಚತುರತೆ, ಮುತ್ಸದ್ದಿತನಕ್ಕೆ ಬೆರಗಾದ. ಇಂತಹ ನಿಸ್ವಾರ್ಥಿಯ ಕೈಯಲ್ಲಿ ರಾಜ್ಯಲಕ್ಷ್ಮಿ ಸುರಕ್ಷಿತವೆಂದು ಬಗೆದು ಬಲದೇವ ಮಂತ್ರಿಗಳ ನಿಧನದಿಂದ ತೆರವಾಗಿದ್ದ ಪ್ರಧಾನಿಯ ಸ್ಥಾನವನ್ನು ಬಸವಣ್ಣನವರಿಗೆ ವಹಿಸಿಕೊಟ್ಟನು. ಹೀಗೆ ಕೊಂಡಿ ಮಂಚಣ್ಣ ಮುಂತಾದವರು ಹೊರಿಸಿದ ಆರೋಪದ ಹಾವು, ಲಿಂಗದೇವನ ಕರುಣೆಯಿಂದ ಧರ್ಮಪಿತ ಬಸವಣ್ಣನವರಿಗೆ ಕೀರ್ತಿಯ ಹೂವಾಯಿತು.

"ಹೊನ್ನಿನೊಳಗೊಂದೊರೆಯು, ವಸ್ತ್ರದೊಳಗೊಂದೆಳೆಯು, ಅನ್ನದೊಳಗೊಂದಗುಳ ನಾಳೆಗಿರಲಿ ಎಂದು ಸಂಗ್ರಹಿಸೆವುದಿಲ್ಲ. ಹೊತ್ತಾರೆ ಎದ್ದು ಎನ್ನ ಸುಖಕ್ಕೆ ಮಡದಿ ಮಕ್ಕಳ ಸುಖಕ್ಕೆ ಕುದಿಯದೆ, ಪ್ರಜೆಗಳ ಹಿತಚಿಂತನೆ ಮಾಡುವೆ" ಎಂಬ ಪ್ರತಿಜ್ಞೆ ಹೊತ್ತು, 'ಬಯಸದೆ ತಾನಾಗಿ ಬಂದುದು ಪರಮಾತ್ಮನ ಪ್ರಸಾದವೆಂದು' ಸೇವಾಕೈಂಕರ್ಯ ಭಾವದಿಂದ ಸ್ವೀಕರಿಸಿ ಮಹಾಮಂತ್ರಿಯಾದರು. ಬಿಜ್ಜಳನು ಸಂಭ್ರಮದಿಂದ ಮೆರವಣಿಗೆ ಮಾಡಿ ಸಮಸ್ತ ಪರಿವಾರ ಸಿಬ್ಬಂದಿಯೊಡನೆ ಬಸವಣ್ಣನವರನ್ನು ಮಹಾಮನೆಗೆ ಬೀಳ್ಕೊಟ್ಟಾಗ, ಜನರು ಆ ಮಹಾಪುರುಷನ ದರ್ಶನದಿಂದ ಆನಂದ ತುಂದಿಲರಾದರು. ಮಹಾಮನೆಯೊಳಕ್ಕೆ ಆರತಿ ಬೆಳಗಿ ಸ್ವಾಗತಿಸಿ ಅಕ್ಕ ನಾಗಮ್ಮ ಆನಂದದಿಂದ ಧರ್ಮಗುರುವಿನ ಪ್ರತಿಭೆ ಕೊಂಡಾಡುವಳು. ಆಗ ಗುರು ಬಸವಣ್ಣನವರು ವಿನಯದಿಂದ ಹೇಳುವರು; "ಇದೆಲ್ಲ ದೇವನೊಲಿದು ಇತ್ತುದು; ಅವನ ಒಲುಮೆಯಿಂದ ಕೊರಡೂ ಕೊನರುವುದು, ಬರಡೂ ಹಯ -ನಾಗುವುದು. ಮಾಡಿದೆ - ಪಡೆದೆ ಎನ್ನಲು ನಾನಾರು?" ಬಸವಣ್ಣನವರು ಒಬ್ಬ ಆದರ್ಶ ಮುತ್ಸದ್ದಿಯಾಗಿ ಬಾಳಿದರು. ಉತ್ತಮ ಸ್ಥಿತಿಗೇರಿ ಉನ್ನತ ಅಧಿಕಾರದಲ್ಲಿದ್ದಾಗ ಬಂಧು - ಬಳಗದವರು ಏನಾದರೂ ಸ್ವಾರ್ಥ ಸಾಧಿಸಲು ಬಂದರೆ, 'ನೆಂಟರಿಷ್ಟರು ಬಂದರೆ ಸಮಯವಿಲ್ಲ ಎನ್ನಿ; ಒಡೆಯರಾದ ಪ್ರಜೆಗಳು ಬಂದರೆ ಗುಡಿ ತೋರಣವ ಕಟ್ಟಿ ಸ್ವಾಗತಿಸಿ" ಎನ್ನುತ್ತಿದ್ದರು. **"ಜಾತಿಯಿಂದ ಯಾರೂ ನನ್ನವರಲ್ಲ, ರಕ್ತ ಸಂಬಂಧದಿಂದಲೂ ನನ್ನವರಲ್ಲ, ಲಿಂಗಪಥದಲ್ಲಿ ನಡೆವವರಷ್ಟೇ ನನ್ನವರು"** ಎನ್ನುತ್ತಿದ್ದರು, ಅನುಭಾವಿಗಳು, ಯೋಗಿಗಳು, ಪ್ರಜೆಗಳು ಅವರ ಪ್ರಾಣವಾಗಿ **"ಜಂಗಮ ಪ್ರಾಣಿ"** ಎನ್ನಿಸಿಕೊಂಡರು. ಶ್ರೇಷ್ಠ ಅರ್ಥ ಶಾಸ್ತ್ರಜ್ಞರಾಗಿ ಕಾಯಕದ ಹಾಲಿನ ಹೊಳೆಯಲ್ಲಿ, ದಾಸೋಹದ ತೆಪ್ಪ ತೇಲುವಂತಹ ಸಮೃದ್ಧಿ ಸಾಧಿಸಿದರು. ಜಾತಿವರ್ಣ ವರ್ಗರಹಿತ ಧರ್ಮಸಹಿತ ಕಲ್ಯಾಣ ರಾಜ್ಯವನ್ನು ಕಟ್ಟುವುದರಲ್ಲಿ ಯಶಸ್ವಿಯಾದರು. ಬೇಡುವವರೇ ಇಲ್ಲದ, ಎಲ್ಲರೂ ನೀಡಲು ಉತ್ಸುಕರೂ ಸಮರ್ಥರೂ ಆದ ಶರಣ ಸಮಾಜವನ್ನು ಕಟ್ಟಿದರು.

ಧಾರ್ಮಿಕ ಸಂಸ್ಕಾರವು ಎಲ್ಲ ವರ್ಗದವರಿಗೂ, ಪಂಚಮ ವರ್ಣದವರೆನ್ನಿಸಿಕೊಂಡ ಅಸ್ಪೃಶ್ಯರಿಗೂ, ಪತಿತರೆನ್ನಿಸಿಕೊಂಡ ವೇಶ್ಯೆಯರಿಗೂ ಲಭ್ಯವಾಗುವಂತೆ ಮಾಡಿ, ಅವರೆಲ್ಲರನ್ನು ಇಂಬಿಟ್ಟುಕೊಂಡು ಅರಿವಿನ ಮಹಾಂತರನ್ನಾಗಿ ಮಾಡಿದರು. ಹೀಗಾಗಿ ಬಸವ ನಾಮವು ಮಂತ್ರವಾಯಿತು. ಬಸವನ ದಿವ್ಯಮೂರ್ತಿ ಎಲ್ಲರ ಹೃದಯ ಸಿಂಹಾಸನದಲ್ಲಿ ಪ್ರತಿಷ್ಠಾಪನೆಗೊಂಡಿತು. ಬಸವಣ್ಣನವರು ನುಡಿದುದು ಶಾಸ್ತ್ರವಾಯಿತು. ನಡೆದುದು ಸತ್ಪಥವಾಯಿತು. **ಕಲ್ಯಾಣವೆಂಬುದು ಪ್ರಣತೆಯಾಗಿ, ಭಕ್ತಿರಸವು ತೈಲವಾಗಿ, ಸದಾಚಾರವು ಬತ್ತಿಯಾಗಿ**

Digitalized by e-Sahithya Documentation Forum
Sponsored by Sarayu Foundation Trust

ಬಸವಣ್ಣ ಎಂಬ ಜ್ಯೋತಿ ಮುಟ್ಟಲು ದೈವೀ ಪ್ರಕಾಶವು ತೊಳಗಿ ಬೆಳಗತೊಡಗಿತು. ಆ ಪ್ರಕಾಶದಲ್ಲಿ ತಮ್ಮ ಬಾಳಿನ ಹಣತೆಗಳನ್ನು ಹೊತ್ತಿಸಿಕೊಂಡು ಬೆಳಗಲು ಅನೇಕರು ಧಾವಿಸಿದರು.

'ಜಾತಿಯಿಂದ ಗುರುತ್ವ ಬರದು. ಆತ್ಮ ಜ್ಯೋತಿಯಿಂದ ಮಾತ್ರ' ಎಂಬುದನ್ನು ಘೋಷಿಸಿ ಬಸವಣ್ಣನವರು ಶೂನ್ಯ ಪೀಠವನ್ನು ಸ್ಥಾಪಿಸಿದರು, ವೀರ ವೈರಾಗ್ಯನಿಧಿ ಅಲ್ಲಮಪ್ರಭುಗಳು ಪ್ರಥಮ ಶೂನ್ಯಪೀಠಾಧಿಕಾರಿಯಾಗಿ ಅನುಭವ ಮಂಟಪದ ಸಚೇತಕ ಶಕ್ತಿಯಾದರು. ಲೋಹ ಚುಂಬಕದತ್ತ ಕಬ್ಬಿಣವು ಆಕರ್ಷಿಸಲ್ಪಡುವಂತೆ ವೀರ ವಿರಾಗಿಣಿ ಅಕ್ಕಮಹಾದೇವಿ, ಲಿಂಗಾಂಗಯೋಗಿ ಸಿದ್ಧರಾಮೇಶ್ವರ, ಕಾಶ್ಮೀರದ ಮಹಾರಾಜ ಮೋಳಿಗೆ ಮಾರಯ್ಯ, ತತ್ವ ನಿಷ್ಠುರಿ ಮಡಿವಾಳ ಮಾಚಯ್ಯ ಆಕರ್ಷಿಸಲ್ಪಟ್ಟರು. ಅನುಭವ ಮಂಟಪವು ಜ್ಞಾನನಿಧಿ ಚನ್ನಬಸವಣ್ಣ, ಕ್ರಿಯಾಶಕ್ತಿ ಅಕ್ಕನಾಗಲಾಂಬಿಕೆ, ಹಡಪದ ಅಪ್ಪಣ್ಣ, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಬ್ರಾಹ್ಮಣ ಮಧುವರಸ, ಸಮಗಾರ ಹರಳಯ್ಯ, ಅಂಬಿಗರ ಚೌಡಯ್ಯ, ಒಕ್ಕಲಿಗ ಮುದ್ದಣ್ಣ, ತುರುಗಾಹಿ ರಾಮಣ್ಣ ಮುಂತಾದ ಅಸಂಖ್ಯಾತ ಜಂಗಮ ಪುಂಗವರಿಂದ ವಿಜೃಂಭಿಸಿತು. ಪ್ರಥಮ ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು ಕದಳಿಯ ಬನಕ್ಕೆ ಹೊರಟು ನಿಂತಾಗ, ಪೀಠದ ಅಧಿಕಾರವನ್ನು ಚನ್ನಬಸವಣ್ಣನವರಿಗೆ ಹಸ್ತಾಂತರಿಸಲಾಯಿತು. ರಾಕ್ಷಸನಾಮ ಸಂವತ್ಸರದ ಕಾರ್ತೀಕ ಶುದ್ಧ ಪಂಚಮಿ ಸೋಮವಾರ ರಾತ್ರಿ ಪಟ್ಟಾಧಿಕಾರವು ನೆರವೇರಿತು.

"ಜಾತಿಗಳು ಮಾನವ ಕಲ್ಪಿತವೇ ವಿನಾ ದೇವ ನಿರ್ಮಿತವಲ್ಲ" ಎಂಬುದಾಗಿ ಘೋಷಿಸಿ, ಬಸವ ಧರ್ಮವನ್ನು ಸ್ವೀಕಾರ ಮಾಡಿದ ಬ್ರಾಹ್ಮಣ ಮಂತ್ರಿ ಮಧುವರಸರ ಮಗಳ ಮತ್ತು ಸಮಗಾರ ಹರಳಯ್ಯನ ಮಗನ ಮದುವೆಗೆ ಬಸವಣ್ಣನವರು ಪ್ರೋತ್ಸಾಹ ನೀಡಿದರು. ಬಸವಣ್ಣನವರ ಅಗಾಧ ಯೋಜನೆ, ಸಮಾಜದಲ್ಲಿ ತರುತ್ತಿದ್ದ ಅಪೂರ್ವ ಪರಿವರ್ತನೆಗಳನ್ನು ಕಂಡು ಒಳಗೇ ತಳಮಳಿಸುತ್ತಿದ್ದ ಸಂಪ್ರದಾಯ ವಾದಿಗಳು ಅಂತರ್ವರ್ಣೀಯ ವಿವಾಹದ ನೆಪದಲ್ಲಿ ಸಿಡಿದೆದ್ದರು. ಶಾಸ್ತ್ರ ವಿರುದ್ಧವಾದ ವರ್ಣ ಸಂಕರವಿದೆಂದು ಆರೋಪಿಸಿದರು ಸ್ವತಂತ್ರ ವಿಚಾರ ವಾದಿಯಲ್ಲದ ಬಿಜ್ಜಳನನ್ನು ಪ್ರಚೋದಿಸಿ ಬಸವಣ್ಣನವರಿಗೆ ಗಡಿಪಾರು ಶಿಕ್ಷೆ ವಿಧಿಸುವಂತೆ ಮಾಡಿದರು. ರಾಜಾಜ್ಞೆಯನ್ನು ಹೊತ್ತ ಬಸವಣ್ಣನವರು ರಾಕ್ಷಸನಾಮ ಸಂವತ್ಸರ ಫಾಲ್ಗುಣ ಶುದ್ಧ ದ್ವಾದಶಿ ಸೋಮವಾರದಂದು ಹೊರಟು ನಿಂತು, ಚನ್ನಬಸವಣ್ಣನವರನ್ನು ಹತ್ತಿರ ಕರೆಯುವರು."ಮಾಚಿದೇವರು ಬಹು ಬೇಗನೆ ಉದ್ವಿಗ್ನಗೊಳ್ಳುವ ಸ್ವಭಾವದವರು. ಆದ್ದರಿಂದ ಎಚ್ಚರಿಕೆಯಿಂದ ಪರಿಸ್ಥಿತಿಯನ್ನು ನಿಭಾಯಿಸಿ" ಎಂದು ಚನ್ನಬಸವಣ್ಣನವರಿಗೆ ಹೇಳುವರು.

ಶಿವಯೋಗ ಮಗ ಬಾರೋ ಶಿಪಪುತ್ರ ಚನ್ನಬಸವ
ಶಿವನಾಣೆ ಚನ್ನಬಸವಣ್ಣ, ಕಲ್ಯಾಣ
ಶಿವಗಳಸ ಬಾರೋ ಮಂಟಪಕೆ ॥
ಕರೆದು ಆಶೀರ್ವದಿಸಿ, ಹರಸಿ ಒಪ್ಪಿಸಿ ಬಸವ
ವರ ಚನ್ನಬಸವ ಶರಣರಿಗೆ ಕಂಟಕದ ।
ಹುರಿಯಾಳು ಕಾಯೋ ಹೊಸಮತವ

ಧರ್ಮಗುರು ಬಸವಣ್ಣನವರ ನಿರ್ಗಮನಾಂತರ ಕಲ್ಯಾಣದಲ್ಲಿ ಅಂತರ್ಜಾತೀಯ ವಿವಾಹದಲ್ಲಿ ಭಾಗವಹಿಸಿದ್ದಕ್ಕಾಗಿ ಮಧುವರಸ, ಶೀಲವಂತ ಮತ್ತು ಹರಳಯ್ಯನವರಿಗೆ ಕಣ್ಣು ಕೀಳಿಸುವ ಶಿಕ್ಷೆ ಮತ್ತು ಎಳೆಹೂಟೆ ಶಿಕ್ಷೆಯಾಯಿತು. ಈ ಕ್ರಾಂತಿಗೆ ಬೆಂಬಲ ನೀಡಿದ ಸಾವಿರಾರು ಶರಣರ ವಧೆಯಾಯಿತು. ಬಿಜ್ಜಳನ ಅನ್ಯಾಯದ ವಿರುದ್ಧ ಸಿಡಿದೆದ್ದ ಚಾಲುಕ್ಯ ಸಾಮಂತರಾದ ಜಗದೇವ ಮಲ್ಲಣ್ಣ ಬೊಮ್ಮಣ್ಣರಿಂದ ಬಿಜ್ಜಳನ ವಧೆಯಾಯಿತು.

ಬಿಜ್ಜಳನ ವಧೆಯಾಗುತ್ತಲೇ ಇನ್ನು ರಾಜಕೀಯ ಕ್ಷೋಭೆ ಉಂಟಾಗುತ್ತದೆ ಎಂದು ಶರಣರು ಊಹಿಸಿ, ಗುರು ಬಸವಣ್ಣನವರ ದಿವ್ಯ ಆದೇಶದಂತೆ ವಚನ ಸಾಹಿತ್ಯ ಸಂಪತ್ತನ್ನು ರಕ್ಷಿಸಲು ಪಣತೊಟ್ಟರು. ಆಗ ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ನೇತೃತ್ವದಲ್ಲಿಯೇ ಫಾಲ್ಗುಣ ಮಾಸದ ಹುಣ್ಣಿಮೆಯ ಮರುದಿನ ಶರಣರ ತಂಡ ಸಹ್ಯಾದ್ರಿಯತ್ತ ಸಾಗಿತು. ಚೆನ್ನಬಸವಣ್ಣನವರು ಸೊನ್ನಲಾಪುರಕ್ಕೆ ಹೋಗಿ ಸಿದ್ಧರಾಮೇಶ್ವರರಿಗೆ ಶೂನ್ಯ ಪೀಠದ ಅಧಿಕಾರವನ್ನು ಹಸ್ತಾಂತರಿಸಿ ಮುನ್ನಡೆಸಿದರು. ಜಾತಿವಾದಿಗಳ ಪ್ರಚೋದನೆಯಿಂದ ಬೆನ್ನು ಹತ್ತಬಹುದಾದ ಸೈನ್ಯದ ನಿರೀಕ್ಷೆಯಲ್ಲಿ ಸಾಹಿತ್ಯ ಹೊತ್ತು ಹೊರಟ ಈ ತಂಡದ ನೇತೃತ್ವ ವಹಿಸಿದ ಮಹಾಪುರುಷರೆಂದರೆ ಚನ್ನಬಸವಣ್ಣನವರು, ವೀರ ಶರಣ ಮಡಿವಾಳ ಮಾಚಿದೇವರು ಮತ್ತು ವೀರಮಾತೆ ಅಕ್ಕನಾಗಲಾಂಬಿಕೆ. ಕಾದರವಳ್ಳಿ ಬಳಿ ನಡೆದ ಹೋರಾಟದಲ್ಲಿ ಘಾಸಿಗೊಂಡರಾದರೂ ಮುರಗೋಡಿನ ಬಳಿ ನಡೆದ ಹೋರಾಟದಲ್ಲಿ ಜಯವನ್ನು ಸಂಪಾದಿಸಿದರು. ವೈರಿಗಳನ್ನು ಸದೆ ಬಡಿದರು.

ನಳನಾಮ ಸಂವತ್ಸರದ ವೈಶಾಖ ಬಹುಳ ಬಿದಿಗೆ, ಬುಧವಾರ ರೋಹಿಣಿ ನಕ್ಷತ್ರದಲ್ಲಿ ಚನ್ನಬಸವಣ್ಣನವರು ತಮ್ಮೊಡನೆ ಹನ್ನೆರಡು ಸಾವಿರ ಶರಣರನ್ನು ಕರೆದುಕೊಂಡು ಉಳಿವೆಗೆ ಬಂದು ಬೀಡು ಬಿಟ್ಟರು. ಸಾಹಿತ್ಯವನ್ನು ಗವಿಗಳಲ್ಲಿ, ಸುರಕ್ಷಿತ ತಾಣಗಳಲ್ಲಿ ಇಡಲು ಸಮರ್ಥರಾದರು.

ಹರಭಜನೆ ಗುರುಸೇವೆ ಉರುತರದಿ ಮಾಡುತಲಿ
ಶರಣ ಗಣ ಕೂಡಿ ಉಳಿವೆಯೊಳು । ಮರುದಿನವೆ
ಮೆರೆಸಿದರು ತತ್ವ ಮಂಟಪವ ॥
ಚನ್ನಬಸವೇಶ್ವರನು ಉನ್ನತನುಭಾವಿಗಳು
ಚಿನ್ನಮಯವಾಯಿತು ಆ ಉಳಿವೆ । ಲಿಂಗಿಗಳ
ಕನ್ನೆ ಭಕ್ತಿಯಾ ಗೂಡಾತು ॥

ಅತ್ತ ಕಲ್ಯಾಣದಲ್ಲಿ ಅಂತರ್ವರ್ಣೀಯ ವಿವಾಹದಲ್ಲಿ ಭಾಗವಹಿಸಿದ್ದಕ್ಕಾಗಿ ಮಧುವರಸ, ಶೀಲವಂತ ಮತ್ತು ಹರಳಯ್ಯನವರಿಗೆ ಕಣ್ಣು ಕೀಳಿಸುವ ಶಿಕ್ಷೆ ಮತ್ತು ಎಳೆಹೊಟೆ ಶಿಕ್ಷೆಯಾಯಿತು. ಈ ಕ್ರಾಂತಿಗೆ ಬೆಂಬಲ ನೀಡಿದ ಸಾವಿರಾರು ಶರಣರ ವಧೆಯಾಯಿತು. ಬಿಜ್ಜಳನ ಅನ್ಯಾಯದ ವಿರುದ್ಧ ಸಿಡಿದೆದ್ದ ಚಾಲುಕ್ಯ ಸಾಮಂತರಾದ ಜಗದೇವ ಮಲ್ಲಣ್ಣ ಬೊಮ್ಮಣ್ಣರಿಂದ ಬಿಜ್ಜಳನ ವಧೆಯಾಯಿತು.

ಅಂದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ (30-07-1196); ಕೂಡಲ ಸಂಗಮ ಕ್ಷೇತ್ರದಲ್ಲಿ ತಮ್ಮ ಕಲ್ಲಿನ ಗವಿಯಲ್ಲಿ ಬಸವಣ್ಣನವರು ಇಷ್ಟಲಿಂಗ ಪೂಜೆ-ತ್ರಾಟಕಯೋಗದಲ್ಲಿ ತಲ್ಲೀನರಾಗಿದ್ದಾರೆ. ಆಗ ಅವರಿಗೊಂದು ದಿವ್ಯವಾಣಿ ಕೇಳಿ ಬರುತ್ತದೆ. "ಬಸವಣ್ಣಾ, ನೀನು ಮರ್ತ್ಯಕ್ಕೆ ಬಂದ ಮಣಿಹ ಪೂರೈಸಿತು. ಇನ್ನು ನೀನು ನನ್ನಲ್ಲಿ ಒಂದಾಗು." ಈ ವಾಣಿಯನ್ನು ಕೇಳಿ ಅತ್ಯಂತ ಹರ್ಷಿತರಾಗುವರು. ತಮ್ಮ ಬದುಕಿನ ಸಿಂಹಾವಲೋಕನವನ್ನು ಮಾಡಿಕೊಂಡಾಗ ಸಂತೃಪ್ತಿಯ ಅಲೆ ಮುಖದ ಮೇಲೆ ಹಾಯುತ್ತವೆ. ಆಗ ಅವರು ತಮ್ಮ ಬಾಳೀಗ ನಿಷ್ಪತ್ತಿಯ ಹಣ್ಣು, ಲಿಂಗದೇವನಿಗೆ ಸಲ್ಲಬೇಕಾದುದು ಎಂದು ಅರಿಯುವರು.

ಭಕ್ತಿ ಎಂಬ ಪೃಥ್ವಿಯ ಮೇಲೆ ; ಗುರುವೆಂಬ ಬೀಜವಂಕುರಿಸಿ ;
ಲಿಂಗವೆಂಬ ಎಲೆಯಾಯಿತ್ತು ; ವಿಚಾರವೆಂಬ ಹೂವಾಯಿತ್ತು ;

ಆಚಾರವೆಂಬ ಕಾಯಾಯಿತ್ತು ; ನಿಷ್ಪತ್ತಿಯೆಂಬ ಹಣ್ಣಾಯಿತ್ತು.
ನಿಷ್ಪತ್ತಿಯೆಂಬ ಹಣ್ಣು ತಾನು ತೊಟ್ಟು ಕಳಚಿ ಬೀಳುವಲ್ಲಿ,
ಲಿಂಗದೇವ ತನಗೆ ಬೇಕೆಂದು ಎತ್ತಿಕೊಂಡ.

Digitalized by e-Sahithya Documentation Forum
Sponsored by Sarayu Foundation Trust

ಎಂದು ಪ್ರಸನ್ನ ಭಾವದಿಂದ ಹಾಡುವರು. ತಮ್ಮ ಕಾರಣಿಕ ಹುಟ್ಟು ವೈಚಾರಿಕ ಬಾಲ್ಯ, ಮನೆಯಿಂದ ನಿರ್ಗಮನ, ಕೂಡಲ ಸಂಗಮಕ್ಕೆ ಆಗಮನ, ಗುರುಕುಲ ವಾಸ, ದೇವಾನುಗ್ರಹ, ಕಲ್ಯಾಣಕ್ಕೆ ಆಗಮನ, ರಾಜಕೀಯ ಕ್ಷೇತ್ರದಲ್ಲಿ ತ್ವರಿತ ಪ್ರಗತಿ, ಧಾರ್ಮಿಕ ಆಂದೋಲನ, ದೀನದಲಿತರ ಸುಧಾರಣೆ, ಅನುಭವ ಮಂಟಪ ನಿರ್ಮಾಣ, ಶರಣ ಸಮೂಹದಲ್ಲಿ ಸಂಗಮ, ಜಾತ್ಯತೀತ ಸಮಾಜ ರಚನೆ – ಈ ಎಲ್ಲ ಚಿತಪಟಲದ ಮೇಲೆ ಹಾಯ್ದು ಸಂತೃಪ್ತಿ ಎನಿಸುವುದು. ಒಂದು ವಿಶೇಷ ಮಣಿಹ ಹೊತ್ತು, ದೈವೀ ಕಾರುಣ್ಯ ಧರಿಸಿ, ದೇವನೆ ಮನಸ್ಸು ಸಂತೋಷಗೊಳ್ಳುವಂತೆ, ತಮ್ಮ ಅಂತರಾತ್ಮ ಮೆಚ್ಚುವಂತೆ ಬಾಳಿಯಾಗಿದೆ. ಇನ್ನು ಲಿಂಗದೇವನ ಕರೆಯಂತೆ ಅವನಲ್ಲಿ ಲೀನವಾಗುವುದು ಎಂದು ಸಂಕಲ್ಪಿಸುವರು. ತಮ್ಮ ಕುಂಡಲಿನೀ ಶಕ್ತಿಯನ್ನು ಆಧಾರ ಚಕ್ರದಿಂದ ಮೇಲೆತುವರು. ಆತ್ಮ ಚೇತನದ ವಿಶೇಷ ಬೆಳಕು ನಾಭಿ ಚಕ್ರದಿಂದ ಮೇಲೇರುತ್ತದೆ. ಹೃದಯದ ಭಾಗದಲ್ಲಿ ಕ್ಷಣಕಾಲ ನಿಲ್ಲುತ್ತದೆ. ಪುನಃ ಆರೋಹಣವಾಗುತ್ತದೆ. ಆಗ ಬಸವಣ್ಣನವರ ಮುಖವು ದೇದೀಪ್ಯಮಾನವಾಗಿ ಬೆಳಗುವುದು. ಕಾಯ-ಜೀವಗಳ ಹೊಲಿಗೆಯನ್ನು ಬಿಚ್ಚಿ ಇಚ್ಛಾಮರಣಿಗಳಾಗಿದ್ದ ಅವರು ತಮ್ಮ ದೇಹದಿಂದ ಆತ್ಮವನ್ನು ಬೇರ್ಪಡಿಸಿ ಪರಮಾತ್ಮ ಚೈತನ್ಯದಲ್ಲಿ ಲಯಗೊಳಿಸಿದರು. ಆಗ ಮೇಲಿನಿಂದ ಒಂದು ಬೃಹತ್ ಬೆಳಕು ಇಳಿದು ಈ ಚಿಕ್ಕ ಜ್ಯೋತಿಯನ್ನು ಅಡಗಿಸಿಕೊಳ್ಳುತ್ತದೆ. ಅರ್ಥಾತ್ ಪರಮಾತ್ಮ ಪರಂಜ್ಯೋತಿಯಲ್ಲಿ ಬಸವ ಚೈತನ್ಯದ ಚಿಜ್ಯೋತಿ ವಿಲೀನಗೊಳ್ಳುತ್ತದೆ. ಹೀಗೆ ಬಸವಣ್ಣನವರು ಬಯಲಿನಲ್ಲಿ ಬಯಲಾದರು. ಮರ್ತ್ಯದ ಬಾಳ್ವೆಗೆ ಮಂಗಲವನ್ನು ಹಾಡಿದರು. ಅವರು ಇಳೆಯನ್ನಗಲಿದ ನೂರಾರು ವರುಷಗಳಿಂದಲೂ ಆ ದಿನವು ಬಸವ ಪಂಚಮಿಯೆಂದು ಖ್ಯಾತಿವೆತ್ತಿದೆ. ಶಾರೀರಿಕವಾಗಿ ಬಸವಣ್ಣನವರು ಅಗಲಿದ್ದರೂ ಶರಣರ ಹೃದಯ ಕಮಲದಲ್ಲೆ ಪರಮ ಪ್ರಕಾಶವಾಗಿ ಬೆಳಗುತ್ತಲಿದ್ದಾರೆ. ಅಂತೆಯೇ ಜನಪದವು ಹೀಗೆ ಕೊಂಡಾಡುತದೆ.

ಎಲ್ಲ ಬಲ್ಲಿದೆನಯ್ಯಾ ಕಲ್ಯಾಣ ಬಸವಯ್ಯಾ
ಚೆಲ್ಲಿದನು ತಂದು ಶಿವ ಬೆಳಕ । ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುಡು ॥

ಉತ್ತಿ ಬಿತ್ತುವ ಮಂತ್ರ, ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವಮಂತ್ರ ನಿನ್ದೆಸರು । ಬಸವಯ್ಯಾ
ಮರ್ತ್ಯದೊಳು ಮಂತ್ರ ಜೀವನಕೆ ॥

ಉಳಿವೆಗೆ ಬಂದು ಸುಮಾರು ಆರು ತಿಂಗಳ ಕಾಲ ಅಧ್ಯಯನ ಲಿಂಗಯೋಗಾನುಷ್ಠಾನದಲ್ಲಿ ತಲ್ಲೀನರಾಗಿ ಚನ್ನಬಸವಣ್ಣನವರು ನಳನಾಮ ಸಂವತ್ಸರದ ಕಾರ್ತೀಕ ಮಾಸದ ಹುಣ್ಣಿಮೆಯಂದು ಉರಿಯುಂಡ ಕರ್ಪುರದಂತೆ ಅಂಗವನ್ನು ಲಿಂಗದೇವನಲಿ ಲೀನಗೊಳಿಸಿ ಒಡವೆರೆದು ಒಂದಾದರು.

ಚನ್ನಬಸವಣ್ಣನವರು ಲಿಂಗೈಕ್ಯರಾದುದು ಕಾರ್ತೀಕ ಮಾಸದ ಹುಣ್ಣಿಮೆಯಂದಾದರೂ ಮಳೆಗಾಲದ ಅಂತ್ಯಭಾಗವಾದ್ದರಿಂದಲೂ ಚನ್ನಬಸವಣ್ಣನವರ ಪುಣ್ಯ ಸ್ಮರಣೆಯ ನಿಮಿತ್ತ ಮಾಘ ಪೌರ್ಣಿಮೆಯು ಚನ್ನ ಹುಣ್ಣಿಮೆಯಂದೇ ಖ್ಯಾತಿವೆತ್ತಿದೆ.

ಚಿನ್ಮಯ ಜ್ಞಾನಿ ಚನ್ನಬಸವಣ್ಣನವರು ಅಸಂಖ್ಯಾತ ಭಕ್ತರ ಆರಾಧ್ಯಗುರುವಾಗಿ ಅಂದಿನಿಂದ ಇಂದಿನವರೆಗೆ ಅನುಗ್ರಹಿಸುತ್ತ ಬಂದಿದ್ದಾರೆ. ಅಂತೆಯೇ ಇಂತಹ ಮಹಿಮನನ್ನು ಶರಣರು ಹೀಗೆ ಸುತಿಸುತಾರೆ.

ನರಲೋಕದ ನರರುಗಳೆಲ್ಲರೂ ನರ ಸಂಸಾರಕ್ಕೊಳಗಾದರು

ಸುರಲೋಕದ ಮುನಿಗಳೆಲ್ಲರು ತಪೋ ಸಂಸಾರಕ್ಕೊಳಗಾದರು
ಜಂಗಮವ ಪೂಜಿಸುವರೆಲ್ಲರು ಸಾಯುಜ್ಯ ಸಂಸಾರಕ್ಕೊಳಗಾದರು
ರುದ್ರಲೋಕದ ರುದ್ರಗಣಂಗಳೆಲ್ಲರು
ರುದ್ರಪದವೆಂಬ ಸಂಸಾರಕ್ಕೊಳಗಾದರು
ಪ್ರಸಾದ ಪಾದೋದಕ ಸಂಬಂಧಿಗಳೆಲ್ಲರು ಪ್ರಸಾದ ಸಂಸಾರಕ್ಕೊಳಗಾದರು
ಗುಹೇಶ್ವರ ಲಿಂಗದಲ್ಲಿ ಸರ್ವ ಸಂಸಾರ ವಿರಹಿತ
ಚನ್ನಬಸವಣ್ಣಂಗೆ ನಮೋ ನಮೋ ಎಂಬೆನು !

ಬೆಳಗುವೆ ಬೆಳಗುವೆ ಮಂಗಲದಾರತಿ
ಜಂಗಮ ಜ್ಯೋತಿ ಚನ್ನಬಸವೇಶಗೆ ॥ ಪ ॥

ಗುರು ಬಸವ ತಂದೆಯ ಕರಕಮಲ ಜನಿತನೆ
ಶರಣರ ಹೃದಯದ ಶ್ರೀ ಪರಮಹಂಸೆಯೆ
ಅಕ್ಕನಾಗಲಾಂಬಿಕೆಯ ಮಮತೆಯ ಕಂದನೆ
ಅಯ್ಯ ಶಿವದೇವನ ಪ್ರೇಮದ ಪುತ್ರನೆ ॥ 1 ॥

ಕಲ್ಯಾಣ ಪುರದೊಳು ಜನನವ ಹೊಂದಿ
ಉಳಿವೆಯ ಕ್ಷೇತ್ರದಿ ಲಿಂಗದೇವನ ಹೊಂದಿ
ಎಳೆಯವರೆಯದಲ್ಲೇ ಆತ್ಮಜ್ಞಾನಿಯಾಗಿ
ವಿರತಿಯ ಪಥದೊಳು ಮುನ್ನಡೆದ ಮಹಿಮನೆ ॥ 2 ॥

ಧರ್ಮಪಿತ ಬಸವರು ಕೊಟ್ಟಿಹ ಧರ್ಮವ
ತತ್ವ ನೆಲೆಯಲಿ ಸ್ಫುಟವಾಗಿ ನೀಡಿ
ಷಟಸ್ಥಲ ಚೌಕಟ್ಟಿಗೆ ವಚಗಳನ್ನಿಸಿರಿ
ಅರಿವಿನ ನಿಧಿಯಾಗಿ ಮೆರೆದ ಸುಜ್ಞಾನಿ ॥ 3 ॥

ಶರಣ ಧರ್ಮಕ್ಕೆ ಸಂಕಷ್ಟ ಬರಲು
ಕಾಷಾಯ ಧರಿಸಿಯು ಖಡ್ಗವ ಹಿಡಿದೆ
ವಚನ ವಾಙ್ಮಯವ ರಕ್ಷಿಸಿದ ವಿರಾಗಿ
ಸಚ್ಚಿದಾನಂದ ಕಿರಣ ಚನ್ನಬಸವ ಯೋಗಿ ॥ 4 ॥

ನವ ದೆಹಲಿಗೆ ಕೆಲಸಕ್ಕೆ ಬೇಕಾಗಿದ್ದಾರೆ.

ನವದೆಹಲಿಯ ಬಸವ ಮಂಟಪದಲ್ಲಿ Lord Basava Computer Academy ತೆರೆಯಲಾಗಿದ್ದು ಬಹಳ ಚನ್ನಾಗಿ ನಡೆಯುತ್ತಲಿದೆ. ಜೊತೆಗೆ DTP, Tally ಮತ್ತು English Speaking Course ಗಳನ್ನು ಆರಂಭಿಸಲಾಗುತ್ತಿದೆ. ಇದರಲ್ಲಿ ಪರಿಣಿತರಾದವರಿದ್ದರೆ ನೇರವಾಗಿ ಕೆಲಸಕ್ಕೆ ತೆಗೆದುಕೊಳ್ಳಲಾಗುವುದು. ಇಲ್ಲದಿದ್ದರೆ ಪದವೀಧರರಾಗಿ ಉತ್ತಮ ಅಂಕ ಗಳಿಸಿದವರನ್ನು ಆಯ್ಕೆ ಮಾಡಿಕೊಂಡು Tally ಮತ್ತು English Speaking Courseದಲ್ಲಿ ಊಟ -ವಸತಿಯೊಡನೆ ಉಚಿತವಾಗಿ ತರಬೇತಿ ನೀಡಿ ಸೂಕ್ತ ವೇತನ ನೀಡಿ, ನವದೆಹಲಿಗೆ ಕಳಿಸಿ ಕೊಡಲಾಗುವುದು. ಆಸಕ್ತಿ ಇರುವವರು ದೂರವಾಣಿ ಮೂಲಕ ಸಂಪರ್ಕಿಸಿ, ವಿವರಗಳನ್ನು ನೀಡಬಹುದು ಮತ್ತು ತಮಗೆ ಬೇಕಾದ ವಿವರಗಳನ್ನು ಪಡೆಯಬಹುದು.

ಬಸವ ಮಂಟಪ, 2035, 20ನೇ ಮೇನ್, 2ನೇ ಬ್ಲಾಕ್, ರಾಜಾಜಿನಗರ ಬೆಂಗಳೂರು -10
ದೂರವಾಣಿ 080-23131476, 22923736

Digitalized by e-Sahithya Documentation Forum
Sponsored by Sarayu Foundation Trust

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಕಾರ್ಯಕ್ರಮ ಪತ್ರಿಕೆ



ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು
ಲಿಂಗಾನಂದ ಸ್ವಾಮಿಗಳ 13ನೆಯ
ಲಿಂಗೈಕ್ಯ ಸಂಸ್ಮರಣೆ

ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿ ಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ ।
ಗುರುದೇವ ಲಿಂಗಾನಂದ ಹೆಸರು ಅಮರವಾಗಿದೆ
ಸತ್ ಚಿತ್ ಆನಂದನ ಶುಭ ರಕ್ಷೆಯು ತಮಗಿದೆ ॥



ಪ್ರವಚನದ ಪಟುವಾಗಿ ಜ್ಞಾನ ಸುಧೆಯ ಎರೆದಿರಿ
ಶಿವ ಬೆಳಗಿನ ಗುರುವಾಗಿ ಎನ್ನ ಧನ್ಯ ಗೈದಿರಿ
ನಿಮ್ಮ ಪರುಷ ಹಸ್ತವೆನ್ನ ಮಸ್ತಕವನು ಮುಟ್ಟಲು
ಜ್ಯೋತಿ ಮುಟ್ಟಿ ಜ್ಯೋತಿಯಾಗಿ
ಬೆಳಗುವಂತೆ ಗೈದಿರಿ.

ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು
ಪ್ರಥಮ ಪೀಠಾಧೀಶರು
ಬಸವ ಧರ್ಮಪೀಠ, ಕೂಡಲಸಂಗಮ

ಜನನ : 15-9-1931 -
ಕ್ರಿಯಾ ವಿಶ್ರಾಂತಿ : 30-6-1995

ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ದೇವ(ಭಾನು)ವಾರ ದಿ. 29-6-2008, ಬೆಳಿಗ್ಗೆ : 10-30

------- ★ -------- ★ -------- ★

ಕಾರ್ಯಕ್ರಮ ಸ್ಥಳ : ಬಸವ ಮಂಟಪ, 2035, 20ನೇ ಮೇನ್,
2ನೇ ಬ್ಲಾಕ್, ರಾಜಾಜಿನಗರ ,
ಬೆಂಗಳೂರು-560010

Digitalized by e-Sahitya Documentation Forum
Sponsored by Sarayu Foundation Trust

6. ಮನದ ಘನತೆ

ಕರಿ ಘನ : ಅಂಕುಶ ಕಿರಿದೆನ್ನಬಹುದೆ ? ಬಾರದಯ್ಯಾ
ಗಿರಿ ಘನ: ವಜ್ರ ಕಿರಿದೆನ್ನಬಹುದೆ ? ಬಾರದಯ್ಯಾ;
ತಮಂಧ ಘನ : ಜ್ಯೋತಿ ಕಿರಿದೆನ್ನಬಹುದೆ ? ಬಾರದಯ್ಯಾ;
ಮರಹು ಘನ : ನಿಮ್ಮ ನೆನವ ಮನ ಕಿರಿದೆನ್ನಬಹುದೆ ?
ಬಾರದಯ್ಯಾ: ಲಿಂಗದೇವಾ ಬ.ವ.ದೀ.05

ಮನಸ್ಸು ಒಂದು ಅಂತರೇಂದ್ರಿಯ, ಅತ್ಯಂತ ಶಕ್ತಿಶಾಲಿಯಾದ ಇಂದ್ರಿಯ. ಅದರ ಕೀಟಲೆ ಮತ್ತು ಕೋಟಲೆ ಬಹಳ. ಆದರೆ ಅದನ್ನು ಬಿಟ್ಟು ಬದುಕಲೂ ಬರುವುದಿಲ್ಲ. ಮನ ಏವ ಬಂಧ ಮೋಕ್ಷ ಕಾರಣಂಚ ಬಂಧನ ಮತ್ತು ಮೋಕ್ಷ ಎರಡಕ್ಕೂ ಮನಸ್ಸೇ ಕಾರಣ. ಅದು ಬಾಧಕವೂ ಅಹುದು, ಸಾಧಕವೂ ಅಹುದು, ಬಾಧಕವಾದುದನ್ನು ಸಾಧಕವಾಗಿ, ಮಾರಕವಾದುದನ್ನು ಪೂರಕವಾಗಿ, ಸಹಾಯಕವಾಗಿ ಮಾಡಿಕೊಳ್ಳುವುದರಲ್ಲಿದೆ ವ್ಯಕ್ತಿಯ ಜಾಣ್ಮೆ.

ಆನೆ ಬಹಳ ಬೃಹತ್ತಾದ ಪ್ರಾಣಿ, ಹಾಗಂತ ಅದಕ್ಕೆ ಹೆದರುವುದೆ? ಅದನ್ನು ಮಣಿಸಲು ಸಿಂಹದ ನಖವನ್ನು ಅಳವಡಿಸಿದ ಚಿಕ್ಕ ಅಂಕುಶವೇ ಸಾಕು. ಗಾತ್ರದಲ್ಲಿ ಆನೆಯು ಬೃಹತ್ತಾದುದು, ಅಂಕುಶವು ಕಿರಿದಾದುದು ಆಗಿರಬಹುದು. ಆದರೆ ಅಂಕುಶದ ತುದಿಯಲ್ಲಿರುವ ಸಿಂಹದ ಉಗುರು ಆನೆಯನ್ನು ಮಣಿಸುತ್ತದೆ. ಬೆಟ್ಟವು ಮುಗಿಲನ್ನು ಚುಂಬಿಸುವ ಎತ್ತರದಲ್ಲಿರಬಹುದು. ಅಭೇದ್ಯವಾದ ಕೋಟೆಯಂತೆ ಅದು ಭಯ ಹುಟ್ಟಿಸಬಹುದು. ಆದರೆ ಕಲ್ಲನ್ನು ಭೇದಿಸುವ ಚೂಪಾದ ಉಳಿಯನ್ನು ಸಣ್ಣದು ಎಂದು ಹೀಗಳೆಯಬಹುದೆ ? ಕೊಳವೆ ಭಾವಿ ಕೊರೆಯುವಾಗ ಭೂಮಿಯಲ್ಲಿ ಕಲ್ಲಿನ ಬಂಡೆಗಳು, ಪದರುಗಳು ಸಿಕ್ಕಾಗ ಕೊರೆಯುವ ಯಂತ್ರದ ತುದಿಯಲ್ಲಿರುವ ವಜ್ರದ ಭಾಗ ಕಲ್ಲನ್ನೇ ಕೊರೆಯುತ್ತದೆ. ಕಲ್ಲಿನ ಪಡಿಗಳನ್ನು ಪದರು ಪದರಾಗಿ ಕೊರೆಯಲು ಕೊರೆಯುವ ಗರಗಸದ ತುದಿಯಲ್ಲಿ ವಜ್ರದ ತುಣುಕು ಇರುವುದಂತೆ. ಬೆಟ್ಟದ ಕಲ್ಲು ಬೃಹದಾಕಾರದಲ್ಲಿದ್ದರೂ ಉಳಿ ಸುತ್ತಿಗೆಯ ಏಟಿಗೆ ತುಂಡಾಗುವುದು. ಕತ್ತಲೆ ಬಹಳ ಗಾಢವಾಗಿ ಇರಬಹುದು. ಅದನ್ನು ಓಡಿಸಲು ಒಂದು ಕಿರು ಹಣತೆಯೇ ಸಾಕು.

ಅದೇ ರೀತಿ ಮರಹು, ಅಜ್ಞಾನ ಬಹಳ ಗಾಢವಾದುದು. ಜೀವಾತ್ಮನಲ್ಲಿ ಸ್ವಭಾವತಃ ಹುದುಗಿರುವ ಅಜ್ಞಾನ ಅಥವಾ ಮಾಯಾ ಮಲ ಒಂದು ಬಗೆಯಾದರೆ ಆದರ್ಶ ರಹಿತವಾದ ಸಮಾಜ, ಸಂಗದ ಪರಿಣಾಮದಿಂದ ಉಂಟಾಗುವ ಮೌಲಿಕ -ಅಜ್ಞಾನ ಮತ್ತೊಂದು ಬಗೆಯದು. ಇದರ ನಿವಾರಣೆ ಹೇಗೆ ಎಂದು ಸಾಧಕನಿಗೆ ಕಳವಳವಾಗುವುದು ಸಹಜ. ಆದರೆ ಲಿಂಗದೇವನು ದಯಾಶೀಲ ಮರಹನ್ನಷ್ಟೆ ಇಟ್ಟು ಕಳಿಸಿಲ್ಲ; ಅದನ್ನು ನಿವಾರಿಸುವ ಸಾಮರ್ಥ್ಯ ಉಳ್ಳ ಸಮರ್ಥ ಸಾಧನವಾದ ಮನವನ್ನು ಇಟ್ಟೇ ಕಳಿಸಿದ್ದಾನೆ. ಆ ಮನಸ್ಸಿಗೆ ಒಂದು ಅದ್ಭುತ ಶಕ್ತಿ ಇದೆ. ಹೇಗೆ ಅಂಕುಶಕ್ಕೆ ಆನೆಯನ್ನು ಮರ್ಧಿಸುವ ಶಕ್ತಿ ಇದೆಯೋ, ವಜ್ರಾಯುಧಕ್ಕೆ, ಉಳಿಗೆ ಕಲ್ಲಿನ ಬಂಡೆಯನ್ನೇ ಸೀಳುವ ಶಕ್ತಿ ಇದೆಯೋ, ಕತ್ತಲೆಯನ್ನು ಓಡಿಸುವ ಸಾಮರ್ಥ್ಯ ಹೇಗೆ ಜ್ಯೋತಿಗಿದೆಯೋ ಹಾಗೆ ಮರಹನ್ನು ಭೇದಿಸುವ, ನಿವಾರಿಸುವ ಶಕ್ತಿ ದೇವರನ್ನು ನೆನೆಯುವ ಸಾಮರ್ಥ್ಯವಿರುವ ಮನಸ್ಸಿಗೆ ಇದೆ. ಹೀಗಾಗಿ ಜೀವಿಯು ತನ್ನ ಅಜ್ಞಾನಕ್ಕಾಗಿ ಭಯಪಡಬೇಕಾಗಿಲ್ಲ. ಎಲ್ಲಿ ಅಪಾಯವಿದೆಯೋ ಅದರ ಜೊತೆಗೇ ನಿವಾರಿಸುವ ಉಪಾಯವನ್ನೂ ದೇವನು ಇಟ್ಟಿದ್ದಾನೆ. ಲಿಂಗದೇವನ ನೆನಹೊಂದೇ ಜೀವಿಯ ಸಮಸ್ಯೆಗಳಿಗೆ ಪರಿಹಾರ !

7. ಅರಿದ ಬಳಿಕ ಬಂಧನವಿಲ್ಲ

ಭವ ಬಂಧನ ಭವ ಪಾಶವಾದ ಕಾರಣವೇನಯ್ಯಾ
ಹಿಂದಣ ಜನ್ಮದಲ್ಲಿ ಲಿಂಗವ ಮರೆದೆನಾಗಿ,
ಹಿಂದಣ ಸಿರಿಯಲ್ಲಿ ಜಂಗಮವ ಮರೆದೆನಾಗಿ
ಅರಿದಡೀ ಸಂಸಾರವ ಹೊದ್ದಲೀವೆನೆ, ಲಿಂಗದೇವಾ ?

ಭೃ-ಭವತಿ. ಅಂದರೆ ಹುಟ್ಟುವುದು. ಹುಟ್ಟು - ಸಾವು ಬಾಳ ನಾಣ್ಯದ ಎರಡು ಮುಖ. ಹುಟ್ಟು - ಸಾವುಗಳ ದಂದುಗವೇ ಭವ; ಲಿಂಗದೇವನು -ಅಭವ ಅಂದರೆ ಹುಟ್ಟು ಸಾವುಗಳ ದಂದುಗ ಇಲ್ಲದವನು. ಇನ್ನುಳಿದ ಜೀವಿಗಳೆಲ್ಲರೂ ಹುಟ್ಟು -ಸಾವಿನ ಜಂಜಡದ ಚಕ್ರದಲ್ಲಿ ಸಿಕ್ಕಿಕೊಂಡು ಸುತ್ತುವವರೆ! ಜೀವಿಯು ಮುಕ್ತಾತ್ಮನಾಗುವವರೆಗೆ ಈ ಚಕ್ರವು ಸುತ್ತುತ್ತಲೇ ಇರುತ್ತದೆ.

ಈ ಜನ್ಮದಲ್ಲಿ ವ್ಯಕ್ತಿಯು ಸ್ಥೂಲ ಶರೀರದಿಂದ ಮಾಡುವ ಕಾರ್ಯಗಳು (*Action*), ಸೂಕ್ಷ್ಮ ಶರೀರದಿಂದ ಮಾಡುವ ಆಲೋಚನೆಗಳು (*Cognition*), ಕಾರಣ ಶರೀರದಿಂದ ತಾಳುವ ಭಾವನೆಗಳು (Emotion) ಎಲ್ಲವೂ ಹಗ್ಗಗಳಾಗಿ ರೂಪುಗೊಂಡು ಮುಂದಿನ ಜನ್ಮಕ್ಕೆ ಪಾಶವಾಗುತ್ತವೆ. ಹಿಂದಿನ ಜನ್ಮ ಈ ಜನ್ಮಕ್ಕೆ ಅಥವಾ ಈ ಜನ್ಮ ಮುಂದಿನ ಜನ್ಮಕ್ಕೆ ಕಾರಣವಾಗುವ ಅಂಶಗಳಾವುವು? ಕಾರಣ -ಕಾರ್ಯ (Cause and effect) ಸಂಬಂಧದ ಮೇಲೆ ಈ ಜಗತ್ತಿನ ಮತ್ತು ಜೀವಾತ್ಮನ ಚಟುವಟಿಕೆಗಳು ನಡೆಯುತ್ತಲಿವೆ. ಈ ಜನ್ಮ ಒಂದು ಬೀಜವಿದ್ದಂತೆ. ಹಿಂದಿನ ಜನ್ಮವೃಕ್ಷದ ಫಲ ಮುಂದಿನ ಜನ್ಮವೃಕ್ಷಕ್ಕೆ ಬೀಜ !

ಧರ್ಮಪಿತ ಬಸವಣ್ಣನವರು ಭವಬಂಧನಕ್ಕೆ 2 ಕಾರಣಗಳನ್ನು ಗುರುತಿಸಿದ್ದಾರೆ.

1. ದೇವನನ್ನು ಮರೆತುದು.
2. ಸಮಾಜದ ಸೌಖ್ಯವನ್ನು ಕಡೆಗಾಣಿಸಿದುದು.

ಈ ಜಗತ್ತನ್ನು ನಿರ್ಮಾಣ ಮಾಡಿದ, ಜೀವಾತ್ಮನನ್ನು ಸೃಷ್ಟಿ ಮಾಡಿದ ಸೃಷ್ಟಿಕರ್ತನ ಬಗ್ಗೆ ಕೃತಜ್ಞತೆ ತಾಳದೆ ಬದುಕುವುದು ಮುಂದಿನ ಭವಕ್ಕೆ ಪ್ರಮುಖ ಕಾರಣ. ದೇವನು ಮಹಾದಾನಿ. ಪಂಚಭೂತಾತ್ಮಕ ಸೃಷ್ಟಿ, ಸುಂದರ ನಿಸರ್ಗ, ಹರಿವ ನೀರು ಅರಳುವ ಹೂವು, ಉದಿಸುವ ಸೂರ್ಯ ಒಂದೊಂದೂ ದೇವನ ಅಮೂಲ್ಯ ಕೊಡುಗೆ. ಇಂತಹ ನಿಸರ್ಗವನ್ನು ಆಸ್ವಾದಿಸುವ ಹೃದಯ ಮನ ಬುದ್ಧಿಗಳನ್ನುಳ್ಳ ಮಾನವ ಜನ್ಮ ದೇವರ ವರ. ಇದನ್ನರಿತು ಕೃತಜ್ಞತೆಯಿಂದ ಕರ್ತನನ್ನು ಕೊಂಡಾಡದೆ ಪೂಜಿಸದೆ, ಪ್ರಾರ್ಥಿಸದೆ, ಧ್ಯಾನಿಸದೆ ವ್ಯಕ್ತಿ ಕೇವಲ ಸುಖ ಭೋಗಗಳಲ್ಲೇ ಮುಳುಗಿದರೆ ಹೇಗೆ? ಈ ಜಗತ್ತು ದೇವರ ಮನೆ. ಜೀವಿಗಳೆಲ್ಲ ಬಾಡಿಗೆದಾರರು. ಅಂದಾಗ ಬಾಡಿಗೆ ಕೊಡಲೇಬೇಕು. ಅರ್ಚನೆ -ಪ್ರಾರ್ಥನೆ - ಧ್ಯಾನ -ಸೇವೆಗಳೇ ಬಾಡಿಗೆ. ಇದನ್ನು ಮಾಡದ ವ್ಯಕ್ತಿಗೆ ಭವಪಾಶ ಮತ್ತೆ ಬಿಗಿಯುವುದು ಖಂಡಿತ.

ಗುರು ಬಸವಣ್ಣನವರ ಸಿದ್ಧಾಂತ ಕೇವಲ ದೇವಮುಖಿ, ಆತ್ಮ ಮುಖಿಯಲ್ಲ ಸಮಾಜ ಮುಖಿಯೂ ಕೂಡ. ಆತ್ಮ ಸಾಕ್ಷಾತ್ಕಾರಕ್ಕಾಗಿ ಲಿಂಗ (ದರ್ಪಣ)ವ ನೋಡುವ ಅಣ್ಣಗಳಿರಾ ಜಂಗಮವ ಅರ್ಥಾತ್ ಸಮಾಜವನ್ನು ನೋಡಿರೆ ಎಂದು ಅವರು ಕಳಕಳಿಯಿಂದ ಕೇಳಿಕೊಳ್ಳುತ್ತಾರೆ. ವ್ಯಷ್ಟಿಯ ಪರಿಪೂರ್ಣತೆ ಇರುವುದು ಸಮಷ್ಟಿಯ ಪೂರ್ಣತೆಯಲ್ಲಿ. ಆದ್ದರಿಂದ ಸಿರಿಯ ವೈಭವದಲ್ಲಿ ಜಂಗಮದ ಅರ್ಥಾತ್ ಸಮಾಜದ ಶ್ರೇಯಸ್ಸು ಮರೆಯಬಾರದು ಎಂದು ಗುರು ಬಸವಣ್ಣನವರ ಆಶಯ. ಇಲ್ಲಿ ಸಿರಿ ಎಂಬ ಪದದ ಅರ್ಥವ್ಯಾಪಕವಾಗಿದೆ. ತಪಸ್ಸಿನ ಸಿರಿ ಇರಬಹುದು, ಧನ ಸಿರಿ, ಅಧಿಕಾರ ಸಿರಿ, ರೂಪ ಸಿರಿ, ವಿದ್ಯಾಸಿರಿ ಹೀಗೆ ಅಷ್ಟಮದಗಳನ್ನು ಸೃಷ್ಟಿಸುವ ಯಾವುದೇ ಸಿರಿಯಿಂದ ಕೂಡಿರಬಹುದು. ಈ ಸಿರಿಯಲ್ಲಿ ಅನುರಕ್ತವಾಗಿ ಸಮಾಜದ ಹಿತವನ್ನು ಕಡೆಗಾಣಿಸಿರಬಹುದು. ಹೀಗೆ ನಾಸ್ತಿಕತೆ ಮತ್ತು ಸ್ವಾರ್ಥಗಳು ಭವಬಂಧನಕ್ಕೆ ಕಾರಣವಾದರೆ ದೇವಶ್ರದ್ಧೆ (ಲಿಂಗ ತತ್ತ್ವ) ಮತ್ತು (ಜಂಗಮ) ದಾಸೋಹಗಳು ಬಿಡುಗಡೆಗೆ ಕಾರಣವಾಗುತವೆ. ಹೀಗೆ ಭವಬಂಧನಕ್ಕೆ ಕಾರಣ ಮತ್ತು ಪರಿಹಾರ ತಿಳಿದ ಬಳಿಕ ಸಾಧಕನು ಪುನಃ ಸಂಸಾರವ ಮತ್ತೆ ಹೊದ್ದುವನೆ? ಅರಿದ ಬಳಿಕ ಬಂಧನವಿಲ್ಲ.

ಸಂಸಾರ ಹೇಯ ಸ್ಥಲ

ಷಟ್‌ಸ್ಥಲದ ಕ್ರಮದಲ್ಲಿ ಹೆಣೆಯಲ್ಪಟ್ಟ ಪ್ರಮುಖ ಶರಣರ ವಚನಗಳಲ್ಲಿ ಸಂಸಾರ ಹೇಯ ಸ್ಥಲದ ವಚನಗಳು ಬಂದೇ ಬರುತ್ತವೆ. ಸ್ವಲ್ಪವೇ ಸಂಖ್ಯೆಯ ವಚನಗಳು ಲಭ್ಯವಿರುವ ಶರಣರ ವಚನಗಳಲ್ಲೂ ಸಂಸಾರವು ನಿಸ್ಸಾರ, ಅರ್ಥರಹಿತ, ದುಃಖಮಯ ಎಂಬ ಭಾವದ ವಚನಗಳು ಬರುತ್ತವೆ. ಇವುಗಳು ಇಂದು ವಿಶಿಷ್ಟ ಮನಃಸ್ಥಿತಿಯನ್ನು ವಿವರಿಸುತ್ತವೆ. ಇಂಥ ಭಾವದ ವಚನಗಳಿಗೆ ವಿವರಣೆ ಬರೆಯುವುದಕ್ಕೆ ಮೊದಲೇ ಈ ಸ್ಥಲದ ಬಗ್ಗೆ ಬರೆಯುವುದು ಸೂಕ್ತವೆನಿಸುತ್ತಿದೆ.

ಷಟಸ್ಥಲಗಳು ಆರು; ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ. ಇದು 6

ಕಾಲಿನ ನಿಚ್ಚಣಿಕೆಯಂತೆ. ಆದರೆ ಭಕ್ತ ಸ್ಥಲವು ಪ್ರಾರಂಭವಾಗುವುದಕ್ಕೆ ಮೊದಲಿಗೆ ಪೂರ್ವಸಿದ್ಧತಾ ಸ್ಥಲಗಳು (Preparatory stages) ಬರುತ್ತವೆ.

ಭವಿ

ಎಲ್ಲ ಮಾನವರೂ ಅಜ್ಞಾನದ ಸ್ಥಿತಿಯಲ್ಲಿ ಅನಂತಕಾಲ ತೊಳಲುತ್ತ, ಬಳಲುತ್ತ ಜನ್ಮ ಜನ್ಮಾಂತರದ ಚಕ್ರದಲ್ಲಿ ಸಿಕ್ಕಿ ತಿರುಗುತ್ತಾರೆ. ಒಮ್ಮೆ ಎಚ್ಚರ ಉಂಟಾಗುತ್ತದೆ. ಕೇವಲ ಭೌತಿಕ ಸುಖ ಭೋಗಗಳಲ್ಲಿಯೇ ಆಸಕ್ತನಾದ ಈ ಭವಾತ್ಮನಲ್ಲಿ, ನಾನಾರು? ಎಂಬ ಪ್ರಶ್ನೆ ಏಳುತ್ತದೆ. ಈ ಎಚ್ಚರಕ್ಕೆ ಕಾರಣ ಯಾರಾದರೂ ಮಹಾತ್ಮರ ದರ್ಶನವೋ, ಪ್ರವಚನವೋ, ಘಟನೆಯೋ, ಬದುಕಿನ ಪ್ರಸಂಗವೋ ಆಗಬಹುದು. ನಾನೆಂದರೆ ಕೇವಲ ಸುಖಭೋಗಗಳನ್ನು ಅನುಭವಿಸುವ ಶರೀರ ಮಾತ್ರವೋ ? ಎಂಬ ಚಿಂತನೆ ಈ ಎಚ್ಚರದ ಲಕ್ಷಣ. ನಾನೆಂದರೆ ಕೇವಲ ಶರೀರವಲ್ಲ ಇದನ್ನು ಆಡಿಸುವ ಸೂತ್ರಧಾರಕ ಶಕ್ತಿಯಾದ ಜ್ಞಾತೃ, ಭೋಕ್ತೃ, ಕರ್ತೃವಾದ ಆತ್ಮ ಎಂಬ ಅರಿವು, ತಿಳುವಳಿಕೆ ಉಂಟಾಗುತ್ತದೆ. ಈ ಸ್ಥಿತಿಗೆ ಬಂದುದೇ ಪಿಂಡ (ಆತ್ಮ) ಸ್ಥಲ.

ತಾನೆಂದರೆ ಕೇವಲ ದೇಹವಲ್ಲ, ದೇಹದ ಸುಖಭೋಗಗಳೇ ಸರ್ವಸ್ವವಲ್ಲ. ಆತ್ಮವೇ ನಿಜವಾದ ವಸ್ತು. ಇದು ನೆಲದ ಮರೆಯ ನಿಧಾನದಂತೆ, ಫಲದ ಮರೆಯ ರುಚಿಯಂತೆ, ತಿಲದ ಮರೆಯ ತೈಲದಂತೆ ಶರೀರದಲ್ಲಿ ಹುದುಗಿ ಕೊಂಡಿರುತ್ತದೆ ಎಂಬ ಜ್ಞಾನವು ಪಿಂಡಸ್ಥಲದಲ್ಲಿ ಉಂಟಾಗುತ್ತದೆ. ಹಾಗಾದರೆ ದೇಹದಲ್ಲಿ ಅಂತರ್ಗತವಾಗಿರುವ ಆತ್ಮ ಬ್ರಹ್ಮಾಂಡವನ್ನು ತುಂಬಿರುವ ಜೀವಾತ್ಮ -ಇವೆರಡರ ಸಂಬಂಧವೇನು? ಎಂದು ಎಚ್ಚರಗೊಂಡ ಜೀವಿಯು ಚಿಂತನೆಗೆ ತೊಡಗಿದಾಗ ಎರಡೂ ಸ್ವರೂಪದಲ್ಲಿ, ಸತ್ವದಲ್ಲಿ ಒಂದೆ ಗಾತ್ರದಲ್ಲಿ ಬೇರೆ. ಇವುಗಳ ಸಂಬಂಧ ದೀಪ -ದೀಪ್ತಿ, ರವಿ -ರಶ್ಮಿ ಚಂದ್ರ -ಚಂದ್ರಿಕೆಯಂತೆ ಎಂಬ ಅರಿವು ಉಂಟಾಗುವುದು; ಇದೇ ಪಿಂಡಜ್ಞಾನ ಸ್ಥಲ.

ತನ್ನೊಳಗಣ ಸತ್ಯವು ಯಾವುದು ಎಂಬ ಬಗ್ಗೆ ಅರಿವು ಉಂಟಾಗುವುದೇ ತಡ ಜೀವಿಯಲ್ಲಿ ಒಂದು ಬಗೆಯ ಕಾತುರ, ಚಟಪಟಿಕೆ, ವಿಹ್ವಲತೆ ಉಂಟಾಗುವುದು. ತಾನು ತಾಯಿಯಿಂದ ಬೇರಾದ ಶಿಶುವಿನ ಹಾಗೆ ಲಿಂಗದೇವನಿಂದ ದೂರವಿದ್ದೇನೆ ಎಂಬ ಅನಾಥ ಭಾವ, ಪತಿಯಿಂದ ದೂರವಾದ ಸತಿಯಂತೆ ವಿರಹ ಭಾವ ಮೂಡತೊಡಗುವುವು. ಆಗ ಸಂಸಾರ, ಐಹಿಕ ಜೀವನ, ಮಾನವ ಸಂಬಂಧಗಳು, ಶರೀರದ ಸುಖಗಳು ಮಾತ್ರವೇ ಅಲ್ಲದೆ ಶರೀರದ ಆವಶ್ಯಕತೆಗಳ ಕಡೆಗೆ ಸಹ ತಿರಸ್ಕಾರ ಉಂಟಾಗುತ್ತದೆ. ಇದೆಲ್ಲವೂ ನಿಸ್ಸಾರ, ದುಃಖಮಯ ಎಂಬ ಭಾವ ಮೂಡುತ್ತದೆ. ಇದನ್ನೇ ಸಾಧಕನ ಜೀವನದ ಕಾಳರಾತ್ರಿ, (Dark Night of the Soul) ಎಂದು ದರ್ಶನ ಶಾಸ್ತ್ರದಲ್ಲಿ ಕರೆಯಲಾಗುವುದು. ವಚನ ಸಾಹಿತ್ಯದಲ್ಲಿ ಇದನ್ನು ಸಂಸಾರ ಹೇಯಸ್ಥಲ ಎಂದು ಸಂಬೋಧಿಸಲಾಗಿದೆ.

ಸಂಸಾರಹೇಯಸ್ಥಲದಲ್ಲಿ ಪೂರ್ವಾರ್ಧ ಮತ್ತು ಉತ್ತರಾರ್ಧದ ಎರಡು ಹಂತಗಳನ್ನು ಕಾಣಬಹುದು. ಮೊದಲನೆಯದರಲ್ಲಿ ನಿಷೇಧಾತ್ಮಕ ನಿಲುವು ತನ್ನ ಬಗ್ಗೆಯೇ ತಿರಸ್ಕಾರ, ಸ್ವಅವಲೋಕನ ಮುಂತಾದ ಅಂಶಗಳು ಬರುತ್ತವೆ. ಈ ಹಂಬಲ, ವಿರಹ ಉತ್ಕಟವಾಗಿ ಆತ್ಯಂತಿಕ ಸ್ಥಿತಿಯನ್ನು ತಲ್ಪಿದಾಗ ವಿಶಿಷ್ಟ ಅನುಭವಗಳಾಗುತ್ತವೆ. ಸಂಸಾರ ಹೇಯಸ್ಥಲದಲ್ಲಿ ಹಂಬಲಿಸುವ ಜೀವಿಗೆ ಪುನರ್ಜನ್ಮ ನೀಡುತ್ತದೆ ಗುರುಕಾರುಣ್ಯ. ಬೆನ್ನು ಹತ್ತಿದ ಹುಲಿಯಿಂದ ಓಡಿ ಓಡಿ ದಣಿದ ಜಿಂಕೆ ಹೇಗೋ ತಪ್ಪಿಸಿಕೊಂಡಿದೆ. ಆದರೆ ಈಗ ಅದರ ಜೀವ ಉಳಿಯಬೇಕಾದರೆ ಅದಕ್ಕೆ ನೀರು ಬೇಕು. ಹಾಗೆ ಪಂಚೇಂದ್ರಿಯ, ಅರಿಷಡ್ವರ್ಗಗಳೆಂಬ ಮೃಗಗಳಿಂದ ತಪ್ಪಿಸಿಕೊಳ್ಳಲು ಸೆಣಸುವ ಜೀವಾತ್ಮನಿಗೆ ಈಗ ಗುರುವಿನ ಅನುಗ್ರಹ ಅಗತ್ಯವಾಗಿದೆ. ಗುರುಕಾರುಣ್ಯವು ವಿಭೂತಿ ಧಾರಣೆ, ರುದ್ರಾಕ್ಷಿ ಧಾರಣೆ, ಇಷ್ಟಲಿಂಗ ಧಾರಣೆಯ ಮೂಲಕ ಪ್ರಾಪ್ತಿಯಾಗುತ್ತದೆ. ಆಗ ಭವಿಯ ಭವಿತನ ದೂರವಾಗಿ ಅವನು ಭಕ್ತನಾಗಿ ಷಟಸ್ಥಲದ ಏಣಿಯ ಮೊದಲನೇ ಮೆಟ್ಟಿಲನ್ನು ಹತ್ತುವನು.

ಪೂರ್ವ ಸಿದ್ಧತಾ ಸ್ಥಲಗಳು (Preparatory stages) ಬಹಳ ಮುಖ್ಯ. ಅದರಲ್ಲಿ ಸಂಸಾರ ಹೇಯ ಸ್ಥಲ ಬಗೆ ಬಗೆಯ ಭಾವನೆಗಳ ಬುಗ್ಗೆಯಾಗಿ, ಸಾಧಕನ ಅಂತರಂಗವನ್ನು ಹೊರ ಹಾಕುತ್ತದೆ.

ಸಂಸಾರ ಪದದ ವಿವಿಧಾರ್ಥಗಳು

1. ಸಂಸಾರ್ ಎಂದರೆ ಜಗತ್ತು ಎಂಬ ಅರ್ಥ ಹಿಂದಿಯಲ್ಲಿದೆ.
2. ಸಂಸಾರ ಎಂದರೆ ಹೆಂಡತಿ -ಮಕ್ಕಳಿಂದ ಕೂಡಿದ ಪರಿವಾರ ಎಂಬುದು ಇನ್ನೊಂದು ಅರ್ಥ.

Digitalized by e-Sahithya Documentation Forum
Sponsored by Sarayu Foundation Trust

3. ಸಂಸಾರ ಎಂದರೆ ಭವ, ಹುಟ್ಟು -ಸಾವುಗಳ ಚಕ್ರ ಎಂಬರ್ಥವೂ ಇದೆ.
4. ಆಂತರಿಕ ಅರ್ಥವೆಂದರೆ, ನಾನು ನನ್ನದು ನನ್ನಿಂದ ನನಗೆ ನನಗಾಗಿ ಎಂಬ "ನಾನು" ಎಂಬುದರ ಸರಪಳಿಯೇ ಸಂಸಾರ.
5. ಜೀವನದ ಜಂಜಾಟ ಎಂಬ ಅರ್ಥವನ್ನೂ ಮಾಡಬಹುದು.

ವಚನಗಳನ್ನು ಓದುವಾಗ ಈ ವಿವಿಧಾರ್ಥಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಆ ವಚನದ ಭಾವಕ್ಕೆ ತಕ್ಕಂತೆ ಸೂಕ್ತವಾದ ಅರ್ಥವನ್ನು ಬಳಸಿಕೊಳ್ಳಬೇಕು.

8. ಸಂಕಷ್ಟಕ್ಕೊಳಗಾದ ಜೀವಿಯ ಮೊರೆ

ಸಂಸಾರ ಸಾಗರದ ತೆರೆ ಕೊಬ್ಬಿ ಮುಖದ ಮೇಲೆ ಅಲೆವುತ್ತಿದೆ ನೋಡಾ !
ಸಂಸಾರ ಸಾಗರ ಉರದುದ್ದವೆ ? ಹೇಳಾ !
ಸಂಸಾರ ಸಾಗರ ಕೊರಳುದ್ದವೇ ? ಹೇಳಾ !
ಸಂಸಾರ ಸಾಗರ ಶಿರದುದ್ದವಾದ ಬಳಿಕ ಏನ ಹೇಳುವೆನಯ್ಯಾ !
ಅಯ್ಯಾ, ಅಯ್ಯಾ, ಎನ್ನ ಹುಯ್ಯಲ ಕೇಳಯ್ಯಾ,
ಲಿಂಗದೇವಾ, ನಾನೇವೆನೇವೆನಯ್ಯಾ !

ಧರ್ಮಪಿತ ಬಸವಣ್ಣನವರ ಆತ್ಮ ಕಥೆಯಂತಿರುವ ವಚನಗಳು ವಿವಿಧ ಘಟ್ಟಗಳಲ್ಲಿ ಬರೆಯಲ್ಪಟ್ಟವು. ಅವುಗಳನ್ನು ಅರ್ಥವಿಸುವಾಗ ಧರ್ಮಪಿತರ ವಯಸ್ಸು ಮನಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಲ್ಲದೆ ಆಗಿನ ಸನ್ನಿವೇಶವನ್ನೂ ಕಲ್ಪಿಸಿಕೊಳ್ಳಬೇಕು.

ಗುರುಕುಲದಲ್ಲಿ ವಿದ್ಯಾಭ್ಯಾಸದ ಹಂತ ಮುಗಿದಿದೆ. ಜೀವನ ಕವಲುದಾರಿಯಲ್ಲಿದೆ. ಸನ್ಯಾಸ ಮತ್ತು ಸಂಸಾರ ಎರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದೆ. ಸುತ್ತಲಿನವರು ನಾನಾ ಬಗೆಯ ಸಲಹೆ ಕೊಡುತ್ತಾರೆ. ಆದರ್ಶವಾದಿಗಳನ್ನು ಸದಾ ಅಧೀರಗೊಳಿಸಿ ಹತ ಚೇತನರನ್ನಾಗಿ ಮಾಡಲು ಪ್ರಯತ್ನ ಮಾಡುತ್ತಿರುತ್ತಾರೆ. ಸಂಸಾರ ಜೀವನಕ್ಕೆ ದೂಡಲೆಂದೇ ಯತ್ನಿಸುವವರ ಸಂಖ್ಯೆ ಬಹಳ. ಸಾಧಕನು ನಿರ್ಧಾರ ಮಾಡಲಾರದೆ ಸಂದಿಗ್ಧತೆಗೆ ಒಳಗಾಗಿ ಸಮುದ್ರದ ಅಲೆಗಳ ಮಧ್ಯೆ ಸಿಕ್ಕ ವ್ಯಕ್ತಿಯಂತೆ ಚಟಪಟಿಸುತ್ತಾನೆ.

ಇಲ್ಲಿ ಸಂಸಾರ ಎಂದರೆ ಜೀವನದ ಸಮಸ್ಯೆಗಳು ಎಂದುಕೊಂಡರೆ ಅವು ತೆರೆ ಕೊಬ್ಬಿ ಅಲೆಯುವಂತೆ ಮುಖದ ಮೇಲೆ ಹಾಯುತ್ತಲಿವೆ. ಇವುಗಳ ಪ್ರತಾಪ ಎಷ್ಟೆಂದರೆ ಮೊದಲು ಎದೆ ಮಟ್ಟಕ್ಕೆ ಏರುತ್ತಿವೆ. ನಂತರ ಕೊರಳ ಮಟ್ಟಕ್ಕೆ, ನಂತರ ಶಿರದ ಮಟ್ಟಕ್ಕೆ ಏರ ತೊಡಗಿದರೆ ವ್ಯಕ್ತಿ ಏನು ಮಾಡಬೇಕು. ದಿಗ್ಭ್ರಾಂತನಾಗಿದ್ದಾನೆ, ಹತ ಚೇತನನಾಗಿದ್ದಾನೆ. ಲಿಂಗದೇವನಲ್ಲಿ ಪ್ರಾರ್ಥಿಸುವುದು ಬಿಟ್ಟು ಅನ್ಯ ಮಾರ್ಗವಿಲ್ಲ.

"ಅಯ್ಯಾ, ಲಿಂಗದೇವ, ಎನ್ನ ಹುಯ್ಯಲು ಎಂದರೆ ಆಕ್ರಂದನವನ್ನು ಕೇಳು, ಪರಿಹಾರ ತೋರಿಸು. ಏನು ಮಾಡಲೂ ತೋಚದ ಸ್ಥಿತಿಯಲ್ಲಿ ನಾನಿದ್ದೇನೆ." ಎಂದು ದೇವನಲ್ಲಿ ಮೊರೆ ಇಡುತ್ತಾನೆ.

"ಜೀವನದಲ್ಲಿ ಕೆಲವು ಸಂದಿಗ್ಧ ಕ್ಷಣಗಳು ಒದಗಿದಾಗ ಪರಿಹಾರ ಸೂಚಿಸಲು ಅಂತರಾತ್ಮವನ್ನು ಕೇಳಬೇಕು, ಸರ್ವಶಕ್ತನಾದ ಪರಮಾತ್ಮನಲ್ಲಿ ಮೊರೆ ಇಡಬೇಕು." ಎಂಬುದು ವಚನದ ಸಾರಾಂಶ.

9. ಬಿಡುಗಡೆಯ ಹಂಬಲ

ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ;
ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತಯ್ಯಾ !
ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು ;
ಇನ್ನೊಂದಿಗೆ ಮೋಕ್ಷವಹುದೋ, ಲಿಂಗದೇವಾ

ಧರ್ಮಪಿತರಲ್ಲಿ ಸಹಜವಾಗಿ ವೈರಾಗ್ಯ ಬಾಲ್ಯದಿಂದಲೂ ಮೈಗೂಡಿದೆ. ವಿದ್ಯಾಭ್ಯಾಸ ಮುಗಿದ ನಂತರ ವಿರಕ್ತ ಜೀವನಕ್ಕೆ ಕಾಲಿಡಬೇಕೆಂಬ ಕನಸನ್ನು ಕಾಣುತ್ತಾ ಬಂದಿರುವಾಗಲೇ, ಸೋದರ ಮಾವ ಬಲದೇವರಸರು ಗುರುಕುಲಕ್ಕೆ ಬಂದು ಸೋದರಳಿಯನೊಡನೆ ವಿವಾಹದ ಪ್ರಸ್ತಾಪ ಮಾಡುತ್ತಾರೆ. ವೈವಾಹಿಕ ಜೀವನದತ್ತ ಒಲವು ಇಲ್ಲ, ಆದರೆ ಸೋದರ ಸೊಸೆ ನೀಲಗಂಗಳು

ಬಾಲ್ಯದಿಂದಲೂ ಬಸವರಸನಿಗೆ ನಿಶ್ಚಯಿಸಲ್ಪಟ್ಟು ಕಾಯುತ್ತಲಿದ್ದಾಳೆ ಎಂಬುದನ್ನು ಸೋದರ ಮಾವ ನೆನಪಿಸಿದಾಗ ಬಸವರಸರು ಆಘಾತಕ್ಕೊಳಗಾಗುತ್ತಾರೆ.

ಅಂದಿನ ಸಮಾಜದಲ್ಲಿ ಅವಿವಾಹಿತಳ, ವಿಧವೆಯ ಪರಿಸ್ಥಿತಿ ಕಣ್ಣಿಗೆ ಕಟ್ಟುತ್ತದೆ ತನ್ನ ಆದರ್ಶಕ್ಕಾಗಿ ಒಬ್ಬ ಅಮಾಯಕ ಹೆಣ್ಣಿನ ದುಃಖಕ್ಕೆ ಆಹ್ವಾನ ನೀಡಬೇಕೇ ಎಂಬ ಸಂದಿಗ್ಧತೆಯಲ್ಲಿ ಇರುವಾಗಲೇ ಅಕ್ಕನಾಗಮ್ಮ, ಗುರು ಜಾತವೇದರು ವಿವಾಹವಾಗಲು ಒತ್ತಾಯಿಸುತ್ತಾರೆ. ಸಂಗಮನಾಥನ ವಾಣಿಯೂ, ಎಲೆ ಮಗನೆ ಬಸವಣ್ಣ,, ನಿನ್ನಂ ಮಹೀತಳದೊಳ್ ಮೆರೆದಪೆವು. ನೀ ಬಿಜ್ಜಳರಾಯನಿಪ್ಪ ಮಂಗಳವೇಡಕ್ಕೆ ಹೋಗು. ಎನ್ನುತ್ತದೆ. ಈ ದೈವೀ ತೀರ್ಪಿಗೆ ತಲೆಬಾಗಿ ವಿವಾಹಕ್ಕೆ ಒಪ್ಪಿಗೆ ಸೂಚಿಸಿ ಹೊರಡುತ್ತಾರೆ, ವಿವಾಹ ನೆರವೇರುತ್ತದೆ. ದಾಂಪತ್ಯ ಜೀವನಕ್ಕೆ ಕಾಲಿಡುತ್ತಾರೆ.

ಈ ವಚನವನ್ನು ಪ್ರಥಮರಾತ್ರಿಯ ದಿನದಂದು ಬರೆದಿರಬೇಕೆಂದು ಊಹಿಸಲು "ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು." ಎಂಬ ವಾಕ್ಯ ನೆರವು ನೀಡುತ್ತದೆ.

"ಈವರೆಗೆ ನಾನು ಚಂದ್ರನಂತೆ ದಿನದಿನಕ್ಕೆ ಕಳೆ ಏರಿ ವೃದ್ಧಿಯಾದೆ. ಇಂದು ಸಂಸಾರ ಎಂಬ ರಾಹು ಕಡೆಗೂ ನನ್ನನ್ನು ಸರ್ವಗ್ರಾಸಿಯಾಗಿ ನುಂಗಿತು. ಇಂದೆನ್ನ ದೇಹಕ್ಕೆ ಗ್ರಹಣವಾಯಿತು. ಈವರೆಗೂ ಕಾಯ್ದುಕೊಂಡು ಬಂದ ಬ್ರಹ್ಮಚರ್ಯ ಪತನಗೊಂಡಿತು. ವೈವಾಹಿಕ ಬಂಧನದಲ್ಲಿ ಸಿಕ್ಕಿಬಿದ್ದೆ. ಇನ್ನು ಇದರಿಂದ ಬಿಡುಗಡೆ ಎಂದಿಗೆ ಆಗುವುದೋ?" ಎಂದು ಧರ್ಮಪಿತ ಬಸವಣ್ಣನವರು ಹಲುಬಿದ್ದಾರೆ.

ಬುದ್ಧನನ್ನು ಲೌಕಿಕ ವೃತ್ತಿಗೆ ಎಳೆಯಬೇಕೆಂದು ತಂದೆ ಶುದ್ಧೋಧನನು ಸುಂದರಿ ಯಶೋಧರೆಯನ್ನು ವಿವಾಹ ಮಾಡಿದಾಗ ಬಹುಶಃ ಇಂಥ ಭಾವ ಸಿದ್ಧಾರ್ಥನಲ್ಲಿ ಮೂಡಿರಲೂ ಬಹುದು. ಆತ ಮುಂದೊಂದು ದಿನ ಪತ್ನಿಯನ್ನು ತೊರೆದ. ಧರ್ಮಪಿತ ಬಸವಣ್ಣನವರು ಪತ್ನಿಯನ್ನು ತೊರೆಯದೆ ಕಾಲಾನಂತರದಲ್ಲಿ ಆಕೆಯಲ್ಲೂ ಆದರ್ಶಗಳನ್ನು ತುಂಬಿ ವೈರಾಗ್ಯ ಮೂರ್ತಿಯನ್ನಾಗಿ ಮಾಡಿದರು.

10. ಜಂಜಡದ ಬಗ್ಗೆ ಬೇಸರ

ಇಲಿ ಗಡಹನೊಡ್ಡಿದಲ್ಲಿ ಇಪ್ಪಂತೆ ಎನ್ನ ಸಂಸಾರ
ತನು ಕೆಡುವನ್ನಕ್ಕ ಮಾಣದು.
ಹೆರರ ಬಾಧಿಸುವುದು ತನು ಕೆಡುವನ್ನಕ್ಕ ಮಾಣದು,
ಹೆರರ ಛಿದ್ರಿಸುವುದು ತನು ಕೆಡುವನ್ನಕ್ಕ ಮಾಣದು.
ಅಕಟಕಟಾ, ಸಂಸಾರಕ್ಕೆ ಆಸತ್ತೆ ಲಿಂಗದೇವಾ !

ಇಲಿಗಳನ್ನು ಹಿಡಿಯಲು ಬಲೆ ಹಾಕಿ ಅಥವಾ ಬೋನು ಇಟ್ಟು ಅವನ್ನು ಆಕರ್ಷಿಸಲು ಆಮಿಷವಾಗಿ ಕೆಲವೊಂದು ವಸ್ತುಗಳನ್ನು ಉದಾಃ ಬೋಂಡಾ, ಕೊಬ್ಬರಿ ತುಂಡು ಇತ್ಯಾದಿ ಇಡುತ್ತಾರೆ. ಆ ವಸ್ತುಗಳ ವಾಸನೆ ಇಲಿಗಳನ್ನು ಪ್ರಚೋದಿಸುತ್ತದೆ. ಅವು ತಾವು ಮುಂದೆ ಬಲೆಯಲ್ಲಿ, ಬೋನಿನಲ್ಲಿ ಸಿಕ್ಕಿ ಬೀಳುತ್ತೇವೆ ಎಂಬ ಪ್ರಜ್ಞೆ ಇಲ್ಲದೆ ಆ ಆಮಿಷ ಅದನ್ನೊಳಗೊಂಡ ಬಲೆಯ ಸುತ್ತಲೂ ಸುಳಿಯುತ್ತಿರುತ್ತವೆ. ಸರಳ ಬೋನಾದರೆ ಸಿಕ್ಕಿ ಬೀಳುತ್ತವೆ. ಕತ್ತರಿ ಬೋನಾದರೆ ಕತ್ತರಿಗೆ ಸಿಕ್ಕಿ ಶರೀರ ಛಿದ್ರಗೊಳ್ಳುತ್ತವೆ. ಅದೇ ರೀತಿ ಜೀವನ ಚಟುವಟಿಕೆಗಳೂ ಸಾಗುತ್ತವೆ. ಮನಸ್ಸು ಎಂಬ ಇಲಿಯೂ ಸದಾ ಆಮಿಷಗಳ ಸುತ್ತಲೂ ಸುತ್ತುತ್ತದೆ. ಕ್ಷಣ ಕ್ಷಣಕ್ಕೂ ವಿನಾಶದತ್ತ ಸಾಗುವಂತೆ ತನ್ನ ಶರೀರದ ಕ್ಷೀಣತೆಯನ್ನು ಗಮನಕ್ಕೆ ತಂದುಕೊಳ್ಳದೆ ಸುಖಭೋಗಗಳತ್ತ ಆಕರ್ಷಿತವಾಗುತ್ತದೆ. ಇಲಿಯು ತಾನು ವಸ್ತುಗಳನ್ನು ಕಡಿದು ಇತರರಿಗೆ ತೊಂದರೆ ಕೊಡುವಂತೆ ಮನಸ್ಸು ಸಹ ತನ್ನನ್ನು ತಾನು ನಾಶ ಮಾಡಿಕೊಳ್ಳುತ್ತಲೇ ಇತರರನ್ನು ಬಾಧಿಸುವುದು, ಛಿದ್ರಿಸುವುದು. ಇಂತಹ ಮನಸ್ಸಿನ (ಅ) ವ್ಯವಹಾರಕ್ಕೆ ಸಾಧಕನು ಬೇಸತ್ತು ಬಳಲುವನು.

11. ಜೀವಾತ್ಮನ ನಿಸ್ಸಹಾಯಕ ಸ್ಥಿತಿ

ಕಪ್ಪೆ ಸರ್ಪನ ನೆರಳಲ್ಲಿಪ್ಪಂತೆನಗಾಯಿತ್ತಯ್ಯಾ !
ಅಕಟಕಟಾ, ಸಂಸಾರ ವೃಥಾ ಹೋಯಿತ್ತಲ್ಲಾ !
ಕರ್ತೃವೇ ಲಿಂಗದೇವಾ,
ಇದ ತಪ್ಪಿಸಿ ಎನ್ನುವ ರಕ್ಷಿಸಯ್ಯಾ.

Digitalized by e-Sahithya Documentation Forum
Sponsored by Sarayu Foundation Trust

ಕೆಲವು ವಚನಗಳು ವೈಯಕ್ತಿಕ ಜೀವನದ ಪ್ರಸಂಗವನ್ನು ಬಿಂಬಿಸುತ್ತಿದ್ದರೆ ಮತ್ತೆ ಕೆಲವು ಸಿದ್ಧಾಂತವನ್ನು ಬಿಂಬಿಸುತ್ತವೆ. ತಮ್ಮನ್ನು ಸಂಬೋಧಿಸಿಕೊಂಡು ಹೇಳಿದರೂ ಅಲ್ಲಿ ಒಂದು ತತ್ವಜ್ಞಾನವಿರುತ್ತದೆ.

ಪ್ರತಿಯೊಂದು ಜೀವಾತ್ಮನ ಸ್ಥಿತಿ ಹೇಗೆ ಎಂದರೆ ಸರ್ಪನ ನೆರಳಲ್ಲಿ ಇರುವ ಕಪ್ಪೆಯಂತೆ. ಸಾವು ಸದಾ ಹೆಡೆ ಎತ್ತಿ ಆಡುತ್ತಿರುತ್ತದೆ. ಅದರ ನೆರಳಲ್ಲಿ ಆಶ್ರಯ ಪಡೆದುಕೊಳ್ಳಲು ಜೀವಾತ್ಮನೆಂಬ ಕಪ್ಪೆ ಯತ್ನಿಸುತ್ತಿರುತ್ತದೆ. ಬದುಕು ಇಷ್ಟು ಕ್ಷಣಿಕವಾಗಿ ಇದ್ದರೂ ಜನರು ದೇವರನ್ನು ಮರೆತು, ಪೂಜೆ -ಧ್ಯಾನಾದಿಗಳನ್ನು ಮರೆತು ಕೇವಲ ಸುಖಭೋಗಾಸಕ್ತರಾಗಿ ಇರುತ್ತಾರೆ. ಹೀಗಾಗಿ ಆಯುಷ್ಯವೂ ವೃಥಾ ಸವೆಯುತ್ತ ಹೋಗುತ್ತಿರುತ್ತದೆ. ಇಂಥಾ ಸುಖಾಸಕ್ತ ಮನಸ್ಥಿತಿಯಿಂದ ತಪ್ಪಿಸಿ ನನ್ನನ್ನು ರಕ್ಷಿಸು ಎಂದು ಸೃಷ್ಟಿಕರ್ತ ಲಿಂಗದೇವನಲ್ಲಿ ಸಾಧಕ ಜೀವಿಯಾದ ಬಸವಣ್ಣನವರು ಮೊರೆ ಇಡುತ್ತಾರೆ.

12. ಶೂಲದ ಮೇಲಣ ವಿಭೋಗ

ಶೂಲದ ಮೇಲಣ ವಿಭೋಗವೇನಾದಡೇನೋ?
ನಾನಾ ವರ್ಣದ ಸಂಸಾರ ಹಾವು ಹಾವಾಡಿಗನ ಸ್ನೇಹದಂತೆ !
ತನ್ನಾತ್ಮ ತನಗೆ ಹಗೆಯಾದ ಬಳಿಕ
ಬಿನ್ನಾಣವುಂಟೆ, ಮಹಾದಾನಿ ಲಿಂಗದೇವಾ ?

ಶೂಲದ ಶಿಕ್ಷೆ ಕೊಡಲ್ಪಟ್ಟ ವ್ಯಕ್ತಿಗೆ ನಿನ್ನ ಅಂತಿಮ ಬಯಕೆ ಏನು ಎಂದು ಕೇಳಿ, ಅವನು ಇಷ್ಟಪಟ್ಟಂತೆ ಒದಗಿಸಲಾಗುವುದು. ಒಬ್ಬ ವ್ಯಕ್ತಿ ತನಗೆ ಹೋಳಿಗೆ, ಹುಗ್ಗಿ ಮುಂತಾಗಿ ಬೇಕೆಂದು ಕೇಳಿ ಪಡೆದುಕೊಳ್ಳಬಹುದು. ಆದರೇನು ಬಂತು? ಉಂಡ ಸ್ವಲ್ಪ ಹೊತ್ತಿನಲ್ಲೇ ಶೂಲಕ್ಕೆ ಏರಬೇಕಾಗುವುದು. ಜೀವನದ ಜಂಜಾಟವೂ ಹಾಗೆಯೇ ಇದೆ. ಪ್ರತಿಯೊಬ್ಬನೂ ಸಾವಿನ ಶಿಕ್ಷೆ ವಿಧಿಸಲ್ಪಟ್ಟವನೆ. ಸಾಯುವುದರೊಳಗೆ ಸುಖಭೋಗಗಳನ್ನು ಅನುಭವಿಸಬೇಕು ಎಂಬ ಅಜ್ಞಾನಿ ಮಾನವನೂ ಅಂಥವನೆ, ಹಾವನ್ನು ಆಡಿಸಿ ಹಾವಾಡಿಗ ಉಪಜೀವನ ಮಾಡಿಕೊಳ್ಳುವನೆಂಬುದು ನಿಜ; ಆದರೆ ಆ ಹಾವು ಯಾವಾಗ ಇವನನ್ನು ಕಚ್ಚಿಕೊಲ್ಲುತ್ತದೋ ತಿಳಿಯಲಾಗದು. ಈ ಜೀವನದ ಜಂಜಾಟವೂ ಹಾಗೆಯೇ. ಸಾಕುವ ಹಾವೇ ಹಗೆಯಾದಂತೆ ಮನುಷ್ಯನ ಪಾಪಾತ್ಮಕ ಕ್ರಿಯೆಗಳೇ ಜೀವನಕ್ಕೆ ಶತ್ರುಗಳಾಗುತ್ತವೆ. ಆದ್ದರಿಂದ ವಿವೇಕಿಯು ಸ್ಥಿರ ಸತ್ಯವಾದ ಮಹಾದಾನಿ ಲಿಂಗದೇವನನ್ನು ಆಶ್ರಯಿಸುವನೇ ವಿನಾ ಬಿನ್ನಾಣದ ಸುಖ ಭೋಗಗಳನ್ನಲ್ಲ.

13.ಸಂಸಾರದ ಬಲೆ

ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯ;
ಎನ್ನುವನು ಕಾಯಯ್ಯಾ, ಕಾಯಯ್ಯಾ
ಹುರುಳಿಲ್ಲ ! ಹುರುಳಿಲ್ಲ !
ಲಿಂಗದೇವಾ, ಶಿವಧೋ ! ಶಿವಧೋ !

ಸಂಸಾರ ಎಂಬುದು ಒಂದು ಬಲೆಯಂತೆ. ಇದರಲ್ಲಿ ಏನೂ ಹುರುಳಿಲ್ಲ, ವ್ಯರ್ಥ ಪ್ರಯಾಸ ತುಂಬಿದೆ. ಇದರಲ್ಲಿ ಜೀವಿಯು ಸಿಕ್ಕಿ ಬಿದ್ದಿದ್ದಾನೆ. ಲಿಂಗದೇವರೇ, ನನ್ನನ್ನು ಈ ಬಲೆಯಿಂದ ಬಿಡಿಸು ಎಂದು ದೇವರಲ್ಲಿ ಮೊರೆ ಇಡುತ್ತಾನೆ. ವಚನದ ಅರ್ಥ ಬಹಳ ಸರಳವಾಗಿದೆ.

ಆದರಿಲ್ಲಿ ಸಂಸಾರ ಎಂಬ ಪದದ ವ್ಯಾಪ್ತಿ ಏನಿದೆ ನೋಡಬೇಕು.

1. ಸಂಸಾರ ಎಂದರೆ ಕೇವಲ ಹೆಂಡತಿ, ಗಂಡ, ಮಕ್ಕಳು ಎಂದು ಅರ್ಥ ಮಾಡಿದರೆ, ವ್ಯಕ್ತಿಯು ಬರೀ ಉಂಡುಟ್ಟು, ನಲಿದು, ಸುಖ ಭೋಗಗಳಲ್ಲಿ ತಲ್ಲೀನನಾದರೆ ಆಗ ಸಂಸಾರವು ಒಂದು ಬಲೆಯೇ ಸರಿ. ಸಂಸಾರಿಯಾಗಿದ್ದರೂ ಗುರು -ಲಿಂಗ -ಜಂಗಮ ಸೇವೆಯಲ್ಲಿ ತೊಡಗಿ, ದೇವನನ್ನು ನಂಬಿ ತನ್ನ ಸಮಯವನ್ನು ಸಂಸಾರ ನಿರ್ವಹಣೆಯ ಜೊತೆಗೆ ದೈವಿಕ ಚಟುವಟಿಕೆಗಳಿಗೂ ವಿನಿಯೋಗಿಸಿದರೆ ಆಗ ಸಂಸಾರ ಒಂದು ಬಲೆಯಾಗದು, ದೈವೀ ಲೀಲೆಯಾಗುವುದು.

2. ಹೆಂಡತಿ ಮಕ್ಕಳಿದ್ದವನೇ ಸಂಸಾರಿಯಲ್ಲ; ಬಹುದೊಡ್ಡ ಜಂಜಾಟವನ್ನು ಹರಡಿಕೊಂಡು ಧರ್ಮ ಪ್ರಚಾರವನ್ನೇ ಮರೆತು ತತ್ವವನ್ನು ನಿರ್ಭಿಡೆಯಿಂದ ಹೇಳುವ ಆತ್ಮಬಲವನ್ನೇ ಕಳೆದುಕೊಂಡ ವಿರಕ್ತನೂ ಬಹುದೊಡ್ಡ ಸಂಸಾರಿ, ಆತನದೂ ಬಲೆಯೇ !

3. ಶರಣ ಸಿದ್ಧರಾಮೇಶ್ವರರು ಅಸಾಮಾನ್ಯ ವ್ಯಕ್ತಿ. ಪರೋಪಕಾರವನ್ನು ಮಾಡಬೇಕು ಎಂಬ ಉತ್ಸಾಹದಲ್ಲಿ ಕೆರೆಭಾವಿ ದೇವಾಲಯ ಕಟ್ಟಿಸುವ ಜಂಜಾಟದಲ್ಲಿ ಸಿಕ್ಕಿ ಬಿದ್ದಿದ್ದರು. ಅದಕ್ಕಾಗಿಯೇ ಅಲ್ಲಮಪ್ರಭುದೇವರು ವಿಡಂಬಿಸಿ, ಛೇಡಿಸಿ ಎಚ್ಚರಗೊಳ್ಳುವಂತೆ ಮಾಡಿದ್ದರು. ವಿರಕ್ತರಾದರೂ ಒಂದು ಬಗೆಯ ಜಂಜಾಟದಲ್ಲಿ ಇದ್ದರೆಂದೇ ಅವರ ಪರೋಪಕಾರವೂ ಒಂದು ಸಂಸಾರದ ಬಲೆಯಾಗಿತ್ತು. ಅದನ್ನು ಪ್ರಭುದೇವರು ಹರಿದೊಗೆದು, ಮುಕ್ತರನ್ನಾಗಿ ಮಾಡಿದರು.

ಹೀಗೆ ಯಾವುದೇ ಚಟುವಟಿಕೆಯಲ್ಲಿ ನಾನು ಎಂಬ ಅಹಂಕಾರ, ನನ್ನದು ಎಂಬ ಮಮಕಾರ, ನನಗಾಗಿ ಎಂಬ ಸ್ವಾರ್ಥ, ನನ್ನಿಂದಲೇ ಎಂಬ ಮದ ಸುಳಿದಾಗ ಆ ಚಟುವಟಿಕೆ ಧಾರ್ಮಿಕ ಸ್ವರೂಪದ್ದೇ ಆದರೂ ಅದು ಸಂಸಾರ, ಒಂದು ಬಲೆಯಂತೆ. ಹಾಗಲ್ಲದೆ ಧರ್ಮಪಿತರು ಹೇಳುವಂತೆ, ಮಾಡುವಂತಿರಬೇಕು ಮಾಡದಂತಿರಬೇಕು, ಮಾಡುವ ಮಾಟದಲ್ಲಿ ತಾನಿಲ್ಲದಿರಬೇಕು ಎಂಬಂತೆ ಕಾರ್ಯ ಮಾಡಿದರೆ ಆ ಚಟುವಟಿಕೆ ಬಂಧನಕಾರಿಯಲ್ಲ, ಬಿಡುಗಡೆಗೆ ಸಹಕಾರಿ.

14. ಮಾಯೆಯ ಲೀಲೆ

ನಾನೊಂದು ನೆನೆದರೆ ತಾನೊಂದು ನೆನೆವುದು
ನಾನಿತ್ತಲೆಳೆದರೆ ತಾನತ್ತಲೆಳೆವುದು.
ತಾ ಬೇರೆ ಎನ್ನನಳಲಿಸಿ ಕಾಡಿತ್ತು ; ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು.
ಲಿಂಗದೇವನ ಕೂಡಿಹೆನೆಂದರೆ ತಾನೆನ್ನ ಮುಂದುಗೆಡಿಸಿತ್ತು ಮಾಯೆ !

ಈ ವಚನದಲ್ಲಿ ಮಾಯೆಯ ಲೀಲಾವಿಲಾಸವನ್ನು ಕುರಿತು ಧರ್ಮಪಿತರು ಹೇಳುತ್ತಾರೆ. ಸಂಸಾರ ಎಂಬ ಪದ ಹೇಗೆ ಬಹು ವಿಧದ ಅರ್ಥಗಳಿಂದ ಕೂಡಿದ ಹಿನ್ನೆಲೆಯುಳ್ಳುದೋ ಮಾಯೆ ಎಂಬ ಪದವೂ ಸಹ ಹಾಗೆಯೇ! ಮಾಯೆಯು ವಸ್ತುನಿಷ್ಠ ಸತ್ಯ (Objective Reality)ವಲ್ಲ ತನ್ನ ಮನಾಂತರ್ಗತ (Subjective feeling) ಮಾತ್ರ. ಅದನ್ನೇ ಅಲ್ಲಮಪ್ರಭುದೇವರು ಮಾರ್ಮಿಕವಾಗಿ ಹೇಳಿರುವುದು.

ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ
ಹೊನ್ನು ಮಾಯೆ ಎಂಬರು ಹೊನ್ನು ಮಾಯೆಯಲ್ಲ
ಮಣ್ಣು ಮಾಯೆ ಎಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೆ ಮಾಯೆ ಕಾಣಾ ಗುಹೇಶ್ವರ.

ಇಲ್ಲಿ ಮಾಯೆ ಎಂದರೆ ಮನದ ಮುಂದಣ ಆಸೆ ಎಂಬ ಅರ್ಥವಿವರಣೆ ದೊರಕುತ್ತದೆ. ಇದನ್ನೇ ಧರ್ಮಪಿತರ ವಚನಕ್ಕೆ ಅನ್ವಯಿಸಿ ಅರ್ಥಮಾಡಬಹುದು.

ಆದರ್ಶ ಜೀವಿಯಾದ ಸಾಧಕ ದೇವನನ್ನು ನೆನೆಯಲು ಯತ್ನಿಸಿದರೆ ಮನಸ್ಸು ಮತ್ತೆ ಏನನ್ನೋ ನೆನೆಯಲು ಯತ್ನಿಸುತ್ತದೆ. ದೈವಿಕ ಚಿಂತನೆಯತ್ತ ಮನಸ್ಸನ್ನು ತೊಡಗಿಸಲು ಪ್ರಯತ್ನಿಸಿದರೆ ಅದು ಬೇರೆ ದಿಕ್ಕಿಗೆ ಸಾಗಲು ಯತ್ನಿಸುತ್ತದೆ. ಇದರಿಂದ ಸಾಧಕನಲ್ಲಿ ದುಃಖ, ಅಳಲು, ಬಳಲಿಕೆ ಉಂಟಾಗುತ್ತದೆ. ತನ್ನ ಮನಸ್ಸಿನ ಗತಿಯ ಬಗ್ಗೆ ಕೋಪ, ತಿರಸ್ಕಾರ ಉಂಟಾಗುತ್ತವೆ. ಮನಸ್ಸು ಧ್ಯಾನಾಸಕ್ತವಾಗಿ ಲಿಂಗದೇವನ ದಿವ್ಯಾನುಭವ ಹೊಂದಲು ಸಾಗುತ್ತಿದೆ ಎನ್ನುವಷ್ಟರಲ್ಲಿ 'ಮಾಯೆ' ದೇವ -ಭಕ್ತರ ನಡುವೆ ಅಡ್ಡ ಹಾಯ್ದು, ಮನಸ್ಸಿನ ದಾರಿ ತಪ್ಪಿಸುತ್ತದೆ; ದೇವನ ನೆನಹಿನಿಂದ ಮನಸ್ಸನ್ನು ದೂರ ಮಾಡುತ್ತದೆ.

15. ಮಾಯೆಯ ಭ್ರಾಂತಿ ಮೀರುವುದು ಹೇಗೆ?

ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ;
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ.
ಇದಾವಾವ ಪರಿಯಲ್ಲಿ ಕಾಡಿತ್ತು ಮಾಯೆ.
ಈ ಮಾಯೆಯ ಕಳೆವಡೆ ಎನ್ನಳವಲ್ಲ
ನೀವೇ ಬಲ್ಲಿರಿ ಕೂಡಲ ಸಂಗಮದೇವಾ !

ಈ ವಚನವನ್ನು ಹಲವರು ಹಲವು ರೀತಿಯಿಂದ ಅರ್ಥೈಸುತ್ತಾರೆ. ಗುರು ಬಸವಣ್ಣನವರ ಒಟ್ಟಾರೆ ಸಿದ್ಧಾಂತ ನೋಡಿದಾಗ ಸ್ತ್ರೀಯು ಮಾಯೆಯಲ್ಲ, ಸ್ತ್ರೀಗೆ ಅತ್ಯುನ್ನತ ಸ್ಥಾನವನ್ನು ಬಸವಣ್ಣನವರು

Digitalized by e-Sahithya Documentation Forum
Sponsored by Sarayu Foundation Trust

ಕೊಟ್ಟು ಗೌರವಿಸಿದ್ದಾರೆ. ಅಂದಾಗ ತಾಯಿ, ಮಗಳು, ಪತ್ನಿ ಹೇಗೆ ಮಾಯೆ?

ಈ ವಚನವು ಗುರು ಬಸವಣ್ಣನವರ ಸೈದ್ಧಾಂತಿಕ ನಿಲುವಲ್ಲ. ಅವರು ಸ್ವತಂತ್ರ ಧರ್ಮವನ್ನು ಕೊಡುವ ಮೊದಲು ಇನ್ನೂ ಚಿಂತನೆಯ ಹಂತದಲ್ಲಿದ್ದಾಗ ಎತ್ತಿರುವ ಸಂದೇಹ ಎನ್ನಿಸುತ್ತದೆ. ''ವೈದಿಕ ಧರ್ಮದ, ಶೃತಿ ಸ್ಮೃತಿಗಳ ಪ್ರಕಾರ ಸ್ತ್ರೀಯು ಮಾಯೆ, ಅದಕ್ಕಾಗಿ ಆಕೆಗೆ ಶೂದ್ರಳ ಸ್ಥಾನ. ಜನನಕ್ಕೆ ಕಾರಣವಾಗುವ ತಾಯಿ ಮಾಯೆ?! ಪುರುಷನ ಕೈಹಿಡಿದು ಪತ್ನಿಯಾಗಿ ಬಂದು ಜೀವನ ಪರ್ಯಂತರ ಅರ್ಧಾಂಗಿನಿಯಾಗಿ ಒಡನಾಡುವ ಸತಿ ಮಾಯೆ?! ಹೀಗೆ ವೈದಿಕ ಶಾಸ್ತ್ರಗಳ ಪ್ರಕಾರ ಪುರುಷನ ಬಾಳಿನ ಅವಿಭಾಜ್ಯ ಅಂಗವಾದ ತಾಯಿ, ಪತ್ನಿ, ಮಗಳು - ಎಲ್ಲರೂ ಮಾಯೆಯೆ! ಈ ಸಮಸ್ಯೆಯನ್ನು ಪರಿಹರಿಸುವುದು ಎಂತು? ನನಗಂತೂ ತಿಳಿಯುತಲಿಲ್ಲ. ನೀನೇ ದಾರಿ ತೋರಿಸಬೇಕು ದೇವಾ.'' ಎಂದು ಈ ವಚನದಲ್ಲಿ ಗುರು ಬಸವಣ್ಣನವರು ಸಮಸ್ಯೆಯ ಮೇಲೆ ಕ್ಷ ಕಿರಣ ಬೀರಿದ್ದಾರೆ.

ಸಾಧಕಾವಸ್ಥೆಯಲ್ಲಿ ಹೀಗೆ ನಿಸಹಾಯಕರಾಗಿ ಪ್ರಶ್ನೆಯನ್ನು ಎತ್ತಿದ್ದಾರಾದರೂ ನಂತರ ಸ್ವತಂತ್ರ ಧರ್ಮ ದ್ರಷ್ಟಾರರಾದ ಬಳಿಕ ಈ ಸಮಸ್ಯೆಗೆ ಪರಿಹಾರವನ್ನು ಹುಡುಕಿದ್ದಾರೆ. ಸ್ತ್ರೀಯೇ ಮಾಯೆಯಲ್ಲ, ಸ್ತ್ರೀಯನ್ನು ಕಾಣುವ ಕಣ್ಣಿನಲ್ಲಿ, ದೃಷ್ಟಿಯಲ್ಲಿ ಮಾಯೆ ಇದೆ ಎಂದರು. ಅಕ್ಕಮಹಾದೇವಿಯಂತೂ, ದುರ್ಬಲ ಮನಸ್ಸಿನ ಪುರುಷನಿಗೆ ಸ್ತ್ರೀ ಮಾಯೆಯಾದರೆ ದುರ್ಬಲ ಮನಸ್ಸಿನ ಸ್ತ್ರೀಗೆ ಪುರುಷನೂ ಮಾಯೆಯೆ. ಲಿಂಗದೇವನೊಲಿದ ಶರಣಂಗೆ ಮಾಯೆ ಇಲ್ಲ, ಮರೆವೂ ಇಲ್ಲ, ಅಭಿಮಾನವೂ ಇಲ್ಲ ಎಂದು ಸಾರಿದರು.

ಬಸವ ಧರ್ಮ ಸ್ತ್ರೀಗೆ ಪೂರ್ಣ ಪ್ರಮಾಣದ ಸಾಮಾಜಿಕ, ಧಾರ್ಮಿಕ ಹಕ್ಕುಗಳನ್ನು ಕೊಟ್ಟು ಗೌರವಿಸಿರುವುದನ್ನು ಕಾಣಬಹುದು.

ಚೆನ್ನೈದಲ್ಲಿ 2008ರ ಮುಂದೂಡಿಕೆ
ಲಿಂಗಾಯತ ಧರ್ಮದ ತೃತೀಯ ಸಮ್ಮೇಳನ

2011ನೆಯ ಇಸವಿಯ ಜನಗಣತಿಯ ಹಿನ್ನೆಲೆಯಲ್ಲಿ ಸಂಘಟನೆ ಮಾಡುವ ದೃಷ್ಟಿಯಿಂದ ತಮಿಳು ನಾಡಿನ ರಾಜಧಾನಿ ಚೆನ್ನೈದಲ್ಲಿ ಲಿಂಗಾಯತ ಧರ್ಮದ ತೃತೀಯ ಸಮ್ಮೇಳನವನ್ನು ಆಯೋಜಿಸಲಾಗುತ್ತಿದೆ. ಪ್ರತಿನಿಧಿ ಶುಲ್ಕ ಇತ್ಯಾದಿ ವಿವರಗಳನ್ನು ಮುಂಬರುವ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು. ನವದೆಹಲಿಯಲ್ಲಿ 1997ರಲ್ಲಿ 5ನೆಯ ಬಸವ ಧರ್ಮ ಸಮ್ಮೇಳನವನ್ನು, 2005ರಲ್ಲಿ ಲಿಂಗಾಯತ ಧರ್ಮದ ಪ್ರಥಮ ಸಮ್ಮೇಳನವನ್ನು, 2007ರಲ್ಲಿ ದ್ವಿತೀಯ ಸಮ್ಮೇಳನವನ್ನು ನಡೆಸಲಾಗಿದ್ದು, ಮೂರನೆಯ ಸಮ್ಮೇಳನವನ್ನು ಚೆನ್ನೈ (ಮದ್ರಾಸ್)ದಲ್ಲಿ ನಡೆಸಲು ನಿರ್ಧರಿಸಲಾಗಿದೆ. ಆಗಸ್ಟ್ ತಿಂಗಳಿನ 16,17,18ರಂದು ಏರ್ಪಡಿಸುವ ಆಲೋಚನೆ ಇತ್ತು. ಮಳೆಗಾಲದ ಸಮಯವಾದುದರಿಂದಲೂ ಮತ್ತು ಹೊಗೇನಕಲ್ ಸಮಸ್ಯೆ ಉದ್ಭವವಾದರೆ ಜನರಿಗೆ ಗಡಿ ದಾಟಲು ತೊಂದರೆಯಾಗುವುದರಿಂದ ಬೇಸಿಗೆಯಲ್ಲಿ ಮಾಡುವುದು ಸೂಕ್ತವೆಂದು ಸ್ಥಳೀಯರು ಅಭಿಪ್ರಾಯ ಪಟ್ಟ ಕಾರಣ ಸಮ್ಮೇಳನದ ದಿನಾಂಕಗಳನ್ನು ಮುಂದೂಡಲಾಗಿದೆ.

ಅಕ್ಟೋಬರ್ 12, 13, 14ರಂದು ಬಸವ ಕಲ್ಯಾಣದಲ್ಲಿ
ಏಳನೆಯ ಕಲ್ಯಾಣ ಪರ್ವ

ಶರಣ ಭೂಮಿ ಬಸವ ಕಲ್ಯಾಣದಲ್ಲಿ ಪ್ರತಿ ವರ್ಷ ಮೇ 1, 2 ಮತ್ತು 3ರಂದು ಕಲ್ಯಾಣ ಪರ್ವ ಎಂಬ ಧಾರ್ಮಿಕ ಉತ್ಸವವನ್ನು 2002ರಿಂದಲೂ ನಡೆಸಿಕೊಂಡು ಬರಲಾಗುತ್ತಿತ್ತಷ್ಟೆ. ಏಳನೆಯ ಕಲ್ಯಾಣ ಪರ್ವವು 2008ರ ಮೇ 1, 2,3ರಂದು ನಡೆಯಬೇಕಿತ್ತು. ಆದರೆ ಎರಡೂ ವರ್ಷ ಮಳೆ ಮತ್ತು ಭಯಂಕರ ಗಾಳಿಯಿಂದ ಪೆಂಡಾಲ್ ಕಿತ್ತು ಹೋಯಿತು. ತಗಡುಗಳು ಗಾಳಿಗೆ ಹಾರಿಹೋದವು. ಅದು ತೀವ್ರವಾದ ಬಿಸಿಲಿನ ಪ್ರದೇಶವಾದ್ದರಿಂದ ಕೆಲವು ಭಾಗಗಳವರು ಬರಲು ಹಿಂಜರಿಯುತ್ತಾರೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಕಲ್ಯಾಣ ಪರ್ವದ ದಿನಾಂಕಗಳಲ್ಲಿ ಬದಲಾವಣೆ ಮಾಡಲಾಗಿದೆ.

ಅಶ್ವಯುಜ ಪೌರ್ಣಮೆಯನ್ನು ವೀರ ಮಾತೆ ಅಕ್ಕನಾಗಲಾಂಬಿಕೆಯ ಹೆಸರಿನಲ್ಲಿ ಆಚರಿಸುತ್ತಿದ್ದೇವೆ. ಇದಕ್ಕೆ ಹೊಂದಿಕೊಂಡು ಕಲ್ಯಾಣ ಪರ್ವವನ್ನು 2008ರ ಅಕ್ಟೋಬರ್ 12, 13, 14ರಂದು ಆಚರಿಸಲಾಗುವುದು (ಸಂಸ್ಥೆಯ ಕ್ಯಾಲೆಂಡರಿನಲ್ಲಿ ಅಕ್ಟೋಬರ್ 7, 8, 9ರಂದು ಎಂದು ಮುದ್ರಿಸಲಾಗಿದೆ. ಅದು ದಸರಾದ ದಿನಗಳಾದ್ದರಿಂದ ಜನರಿಗೆ ಅನಾನುಕೂಲವಾಗುತ್ತದೆ ಎಂದು ಬಹಳ ಜನರು ಅಭಿಪ್ರಾಯಪಟ್ಟುದರಿಂದ ವಿಜಯ ದಶಮಿ (ದಿ.9) ಮುಗಿದ ಎರಡು ದಿನಗಳ ಮೇಲೆ ಇಡಲಾಗಿದೆ.) ಈ ಬದಲಾವಣೆಯನ್ನು ಗಮನಿಸಬೇಕು ಮತ್ತು ಪ್ರಚಾರ ಮಾಡಬೇಕೆಂದು ವಿನಂತಿಸುತ್ತೇವೆ.

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ
13ನೆಯ ಲಿಂಗೈಕ್ಯ ಸಂಸ್ಮರಣೆ



ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿ ಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ ।
ಗುರುದೇವ ಲಿಂಗಾನಂದ ಹೆಸರು ಅಮರವಾಗಿದೆ
ಸತ್ ಚಿತ್ ಆನಂದನ ಶುಭ ರಕ್ಷೆಯು ತಮಗಿದೆ ॥

ಪರಮ ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳು ದಿ.30-6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿ ಹೊಂದಿದರು. ಅವರ ಲಿಂಗೈಕ್ಯ ಸಂಸ್ಮರಣೆಯು ದಿ.30 ರಂದು, ಶಿವ (ಸೋಮ)ವಾರ ಒದಗಿ ಬಂದಿದೆ. ಹಿಂದಿನ ದಿವಸವೇ ದೇವ (ಭಾನು) ವಾರ ಒದಗಿ ಬಂದಿರುವುದರಿಂದ ರಾಷ್ಟ್ರೀಯ ಬಸವ ದಳದವರು, ಇತರ ಶರಣ ಬಂಧುಗಳು ಪೂಜ್ಯರ ಲಿಂಗೈಕ್ಯ ಸಂಸ್ಮರಣೆಯನ್ನು ದೇವ(ಭಾನು)ವಾರದಂದು ಶರಣ ಸಂಗಮ-ಸಾಮೂಹಿಕ ಪ್ರಾರ್ಥನೆಯ ನಂತರ ಏರ್ಪಡಿಸಬಹುದು.

ದಿ. 29-6-2008ರಂದು ,ದೇವ (ಭಾನು) ವಾರ; ಬೆಳಿಗ್ಗೆ 10-30ಕ್ಕೆ

1. ಬೆಂಗಳೂರು ಬಸವ ಮಂಟಪದಲ್ಲಿ
   ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು.
   ದಿವ್ಯ ಸಮ್ಮುಖ : ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮಿಗಳು
2. ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ
   ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಮಾತೆ ಸತ್ಯಾದೇವಿ
3. ನವ ದೆಹಲಿಯ ಬಸವ ಮಂಟಪದಲ್ಲಿ
   ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಸದ್ಗುರು ಚನ್ನಬಸವಾನಂದ ಸ್ವಾಮಿಗಳು
   ದಿವ್ಯ ಸಮ್ಮುಖ : ಪೂಜ್ಯ ಶ್ರೀ ಮಾತೆ ಸರ್ವಮಂಗಳಾದೇವಿ
4. ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ
   ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳು
   ದಿವ್ಯ ಸಮ್ಮುಖ : ಪೂಜ್ಯ ಶ್ರೀ ಸದ್ಗುರು ಬಸವ ಪ್ರಭು ಸ್ವಾಮೀಜಿ
5. ಚಿತ್ರದುರ್ಗದ ಬಸವ ಮಂಟಪದಲ್ಲಿ
   ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಮಾತೆ ದಾನೇಶ್ವರಿ

ದಿ.30-6-2008, ಸೋಮ (ಶಿವ)ವಾರದಂದು ಕೂಡಲ ಸಂಗಮದ
ಬಸವ ಧರ್ಮ ಪೀಠದಲ್ಲಿ ನಡೆಯಲಿದೆ.
ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಮಾದೇಶ್ವರ ಸ್ವಾಮಿಗಳು

ಪ್ರವಚನದ ಪಟುವಾಗಿ ಜ್ಞಾನ ಸುಧೆಯ ಎರೆದಿರಿ
ಶಿವ ಬೆಳಗಿನ ಗುರುವಾಗಿ ಎಮ್ಮ ಧನ್ಯ ಗೈದಿರಿ
ನಿಮ್ಮ ವರುಷ ಹಸ್ತವೆನ್ನ ಮಸ್ತಕವನು ಮುಟ್ಟಲು
ಜ್ಯೋತಿ ಮುಟ್ಟಿ ಜ್ಯೋತಿಯಾಗಿ ಬೆಳಗುವಂತೆ ಗೈದಿರಿ.

Digitalized by e-Sahithya Documentation Forum
Sponsored by Sarayu Foundation Trust


|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಬೆಂಗಳೂರು ನಗರದಲ್ಲಿ

ವಿಶ್ವಗುರು ಬಸವಣ್ಣನವರ
813ನೆಯ ಲಿಂಗೈಕ್ಯ ದಿನಾಚರಣೆ

ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ



ಬುಧ (ಚನ್ನ) ವಾರ ದಿ. 6-8-2008 ರಂದು

ಬೆಳಿಗ್ಗೆ 10-30

ಬೆಂಗಳೂರು ನಗರದ
ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ (ಟೌನ್ ಹಾಲ್)

ಶರಣರ ಬರುವೆಮಗೆ ಪ್ರಾಣ ಜೀವಾಳ
ಸರ್ವರಿಗೂ ಆದರದ ಸುಸ್ವಾಗತ

ಪ್ರಾಯೋಜಕರು:
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ,
2035, 20ನೇ ಮುಖ್ಯರಸ್ತೆ, 2ನೇ ವಿಭಾಗ
ರಾಜಾಜಿ ನಗರ, ಬೆಂಗಳೂರು -560010
ದೂರವಾಣಿ-080-22923736/23131476

ವಚನ ದುಂದುಭಿ -15

- ಶರಣ ಸಚ್ಚಿದಾನಂದ ಚಟನಳ್ಳಿ

1. "ಶಿವಭಕ್ತರ ರೋಮ ನೊಂದಡೆ, ಶಿವನು ನೋವ ನೋಡಾ. ಶಿವಭಕ್ತರು ಪರಿಣಾಮಿಸಿದಡೆ ಶಿವನು ಪರಿಣಾಮಿಸುವ ನೋಡಾ..." ಇದು ಯಾರ ವಚನ?
2. "ಶರಣರ ಮನ ನೋಯ ನುಡಿದೆನಾಗಿ ಹರಜನ್ಮವಳಿದು ನರಜನ್ಮಕ್ಕೆ ಬಂದೆನು.." ಅಕ್ಕನ ಈ ವಚನವನ್ನು ಪೂರ್ತಿಗೊಳಿಸಿರಿ.
3. ಕದಿರೆ ಕಾಯಕದ ಕಾಳವ್ವೆಯ ವಚನಾಂಕಿತವೇನು ?
4. ಉಗ್ಘಡಿಸುವ ಗಬ್ಬಿದೇವಯ್ಯನವರ ವಚನಾಂಕಿತವೇನು ?
5. ಮನೆಗೆ ಬಂದ ಅತಿಥಿಯನ್ನು ಹೇಗೆ ಮಾತನಾಡಿಸಬೇಕೆಂಬುದನ್ನು ಗುರು ಬಸವಣ್ಣನವರು ಯಾವ ವಚನದಲ್ಲಿ ಹೇಳಿದ್ದಾರೆ ?
6. "ಹಲವನೋದಿದಡೇನು? ಚಲುವನಾದಡೇನು? ಕುಲವಂತನೆನಿಸಿ ಫಲವೇನು ಲಿಂಗದ ಒಲವಿಲ್ಲದನ್ನಕ್ಕ" ಇದು ಯಾರ ವಚನ ?
7. ಗುರು ಬಸವಣ್ಣನವರು ವಿದ್ಯೆಯಲ್ಲಿ ಮುಂದಿರುವಂತೆ ಸಾಹಸದಲ್ಲಿಯೂ ಮುಂದಾಗಿದ್ದರು ಎನ್ನುವುದಕ್ಕೆ ಯಾವ ಘಟನೆ ನಿದರ್ಶನವಾಗಿದೆ ?
8. ಚೆನ್ನಬಸವಣ್ಣನವರ ಜನ್ಮಸ್ಥಳ ಯಾವುದು?
9. ಮೊದಲು ವೇಶ್ಯಾ ವೃತ್ತಿಯಲ್ಲಿ ತೊಡಗಿದ್ದು ಅವ್ವ ನೀಲಾಂಬಿಕೆಯವರ ಧಾರೆಯ ಸೀರೆ ಪಡೆದು ಪರಿವರ್ತನೆಯಾದವರು ಯಾರು ?
10. ಅನುಭವ ಮಂಟಪಕ್ಕೆ ಕಳಿಂಗದೇಶದಿಂದ ಬಂದ ಶರಣ ಯಾರು ?
11. ತಳವಾರ ಕಾಯಕ ಮಾಡುತ್ತಿದ್ದ ಅನುಭವ ಮಂಟಪದ ಶರಣ ಯಾರು ?
12. "ಎನ್ನ ಗಂಡ ಬರಬೇಕೆಂದು ಎನ್ನಂತರಂಗದ ಮನೆಯ ತೆರಹು ಮಾಡಿ..." ಯಾರ ವಚನ ?
13. "ಆದಿಯ ಜ್ಞಾನ ನಿನ್ನಿಂದೆನಗಾಯಿತು, ಅನಾದಿಯ ಜ್ಞಾನ ನಿನ್ನ ನೆನೆದಡೆ ಸಾಧ್ಯವಾಯಿತ್ತು" ಎಂದು ಯಾರು ಯಾರಿಗೆ ಹೇಳಿದ್ದಾರೆ ?
14. ಲಿಂಗಾಯತ ಧರ್ಮದ ಪರಂಪರೆ ಯಾವುದು ?
15. ಶಿವಾಚಾರವೆಂದರೇನು ?

ವಚನ ದುಂದುಭಿ -14ರ ಸರಿ ಉತ್ತರಗಳು

1. ಕುವೆಂಪುರವರು ಗುರು ಬಸವಣ್ಣನವರ ಬಗ್ಗೆ 2.ಗುರು ಬಸವಣ್ಣನವರ ವಚನ
3.ಅಲ್ಲಮ ಪ್ರಭುದೇವರನ್ನು ಗುರು ಬಸವಣ್ಣನವರು ಬರಿಸಿಕೊಂಡರು
4. ಕಿನ್ನರಯ್ಯ ಅಕ್ಕಮಹಾದೇವಿಯವರಿಗೆ 5. ಮಾಚಿದೇವರು ಅಕ್ಕಮಹಾದೇವಿಯವರ ಬಗ್ಗೆ
6. ಅಕ್ಕಮಹಾದೇವಿಯವರು 7. ಘಟ್ಟಿವಾಳಯ್ಯ 8. ಚೆನ್ನಬಸವಣ್ಣನವರು ಅಲ್ಲಮ ಪ್ರಭುದೇವರಿಗೆ
9. ಮಾತೃವಂದನೆ 10. ಒಮ್ಮೆ ನೆಲದಲ್ಲಿ ಬಿತ್ತಿದ ಬಿತ್ತುವ ಕಿತಿ ಕಿತ್ತಿ ಬಿತ್ತುತ್ತಾ ಹೋದರೆ....
11. 5-ಅಷ್ಟವಿಧಾರ್ಚನೆ, ಲಿಂಗಸ್ತವನ, ಲಿಂಗಾನುಸಂಧಾನ, ಲಿಂಗಧ್ಯಾನ, ಲಿಂಗ ತೀರ್ಥ ಪ್ರಸಾದ
12. ರಾಘವಂಕ 13. ಮೆದುಳಿನಲ್ಲಿರುತ್ತದೆ 14. ತುರುಗಾಹಿ ರಾಮಣ್ಣ 15. ಶ್ರೀಗುರು ಸಿದ್ಧೇಶ್ವರ

ವಚನ ದುಂದುಭಿ -14ರ ಸರಿ ಉತ್ತರ ಕೊಟ್ಟವರು

1. ನಿರ್ಮಲಾ ಜಯದೇವ್, ಬೆಂಗಳೂರು 2.ಹೆಚ್ ಚಂದ್ರಿಕಾ, ಭದ್ರಾವತಿ
3. ಹೆಚ್ ಶಾಂತಮ್ಮ, ಭದ್ರಾವತಿ. 4.ಸುಮ ರಾಜು, ಭದ್ರಾವತಿ
5. ಸರೋಜನಿ.ಎಸ್, ಕಣಬರ್ಗಿ

ಬೆಂಗಳೂರು ಬಸವ ಮಂಟಪದ ದೂರವಾಣಿಗಳು 1975ರಿಂದಲೂ ಬಳಕೆಯಲ್ಲಿದ್ದ 23325335 ದೂರವಾಣಿಯನ್ನು ತೆಗೆಸಲಾಗಿದೆ. ಈಗ ಚಲಾವಣೆಯಲ್ಲಿರುವ ಸಂಖ್ಯೆಗಳೆಂದರೆ

080-22923736, 23131476

Digitalized by e-Sahithya Documentation Forum
Sponsored by Sarayu Foundation Trust

ಬಸವ ಜಯಂತಿ -ಬಸವ ಪಂಚಮಿ ಅತ್ಯಂತ ಮಹತ್ವಪೂರ್ಣ ಹಬ್ಬಗಳು

ಹೊಸ ಧರ್ಮವನ್ನು ಕೊಟ್ಟು ನಮ್ಮೆಲ್ಲರನ್ನು ಪಾವನವ ಮಾಡಿದ ಗುರು ಬಸವಣ್ಣನವರು ಅವತರಿಸಿದ ದಿನ ಬಸವ ಜಯಂತಿ ಅತ್ಯಂತ ಪಾವನ ದಿನ. ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯದಂದು ರೋಹಿಣಿ ನಕ್ಷತ್ರದಲ್ಲಿ ಧರ್ಮಪಿತರು ಜನಿಸಿದರು. (30-4-1134)

ಪ್ರತಿ ಮನೆಯಲ್ಲಿ, ಪ್ರತಿ ಊರಿನಲ್ಲಿ ಬಸವ ಜಯಂತಿ ಆಚರಿಸಲ್ಪಡಬೇಕು. ಭಾಷಣ ಮುಂತಾದ ಕಾರ್ಯಕ್ರಮವನ್ನು ಅನುಕೂಲವಾದಂದು ಇಟ್ಟುಕೊಳ್ಳ ಬಹುದಾದರೂ ಭಾವಚಿತ್ರದ ಪೂಜೆ, ಬಸವೇಶ್ವರ ಪೂಜಾವ್ರತ ಪ್ರತಿ ಮನೆಯಲ್ಲಿ ಬಸವ ಜಯಂತಿಯಂದು ನಡೆಯಬೇಕು.

1. ಗೋಕುಲಾಷ್ಟಮಿ ದಿನ ಕೃಷ್ಣ ಭಕ್ತರು ಪ್ರತಿ ಮನೆಯಲ್ಲಿ ತೊಟ್ಟಿಲನ್ನು ಇಟ್ಟು ಶ್ರೀ ಕೃಷ್ಣ ಮೂರ್ತಿ ಅಥವಾ ಭಾವಚಿತ್ರ ಇಟ್ಟು ತೂಗುವಂತೆ, ಪ್ರತಿ ಮನೆಯಲ್ಲೂ ಬಸವ ಭಕ್ತರು ತೊಟ್ಟಿಲಿಟ್ಟು (ಚಿಕ್ಕ ತೊಟ್ಟಿಲು ಸಿಗುತ್ತವೆ. ಮನೆಯಲ್ಲಿ ಇಟ್ಟುಕೊಂಡಿರಬೇಕು) ಗುರು ಬಸವಣ್ಣನವರ ಭಾವಚಿತ್ರ/ ಮೂರ್ತಿಯನ್ನು ಇಟ್ಟು ತೂಗಬೇಕು. ಸಾರ್ವಜನಿಕವಾಗಿ ಬಸವ ಮಂಟಪಗಳಲ್ಲಿ ಬಸವೇಶ್ವರ ಗುಡಿಗಳಲ್ಲಿ ತೊಟ್ಟಿಲು ಕಾರ್ಯಕ್ರಮ ನಡೆಸಬೇಕು.

2. ಹೊಸ ಬಟ್ಟೆ ಉಡುವಿಕೆ/ ಕೊಡುವಿಕೆ.

ಬಸವ ಜಯಂತಿ ಲಿಂಗಾಯತ ಧರ್ಮೀಯರಿಗೆ ಹೊಸ ವರ್ಷದ ದಿನ. ಆದ್ದರಿಂದ ಅನುಕೂಲವಿದ್ದವರು ವರ್ಷದಲ್ಲಿ ಎಷ್ಟು ಬಾರಿಯಾದರೂ ಖರೀದಿಸಲಿ. ಬಡವರು ಬಸವ ಜಯಂತಿಯಂದು ಹೊಸಬಟ್ಟೆ ಖರೀದಿಸಿ, ಉಡುವ ಪರಿಪಾಠವನ್ನು ಬೆಳೆಸಿಕೊಳ್ಳಬೇಕು. ಶ್ರೀಮಂತರು, ದಾನಿಗಳು, (ಮುಸಲೀಮರು ರಂಜಾನ್ ಸಮಯದಲ್ಲಿ ದಾನ ಮಾಡುವ ಪರಿಪಾಠ ಇಟ್ಟುಕೊಂಡಂತೆ)ಬಡವರಿಗೆ ಬಟ್ಟೆಗಳನ್ನು, ಸಹಾಯ ಧನವನ್ನು ವಿತರಿಸುವ ಪದ್ಧತಿ ಇಟ್ಟುಕೊಳ್ಳಬೇಕು.

3. ಕೆಲವು ಊರುಗಳಲ್ಲಿ ಸಾರ್ವಜನಿಕವಾಗಿ ಬಸವ ಜಯಂತಿ ಮಾಡುವ ಪರಿಪಾಠ ಇಲ್ಲದಿರಬಹುದು. ಆದರೆ ಆಸಕ್ತಿ ಇರುವ ಶರಣ ಬಂಧುಗಳು ತಮ್ಮ ವೈಯಕ್ತಿಕ ಹಣ ಖರ್ಚು ಮಾಡಿಯಾದರೂ ಬಸವ ಜಯಂತಿ ಉತ್ಸವ ಆಚರಿಸಬೇಕು. ಗುಲಬರ್ಗಾ ಜಿಲ್ಲೆಯ ತಾಡ ತೆಗನೂರಿನ ಶರಣ. ರಾಚಣ್ಣಗೌಡ ಪಾಟೀಲ್ ಮತ್ತು ಫರಹತಾಬಾದಿನ ಶರಣ. ನಾಗರಾಜ ನಿಂಬರ್ಗಿ ಉಭಯತರೂ ಎಲ್ಲರೂ ಬಸವ ಜಯಂತಿ ಆಚರಿಸಿರಿ ಎಂದು ಕರಪತ್ರಗಳನ್ನು ಮಾಡಿ ಹಂಚಿದ್ದಾರೆ. ಕರಪತ್ರ ರೂಪದಲ್ಲಿ ಮುದ್ರಿಸಿ ಪ್ರಚಾರ ಮಾಡಬೇಕು. ಮದುವೆ, ಗೃಹಪ್ರವೇಶ, ನಾಮಕರಣ, ಲಿಂಗೈಕ್ಯರ ಸಂಸ್ಮರಣೆ ಮುಂತಾದ ಆಹ್ವಾನ ಪತ್ರಗಳಲ್ಲಿ ಧಾರ್ಮಿಕ ವಿವರಗಳನ್ನು ಮುದ್ರಿಸಬೇಕು. ಸಮಾವೇಶಗಳ ಸಂದರ್ಭದಲ್ಲಿ ವಚನ ಗ್ರಂಥಗಳನ್ನು ಹಂಚುವ ಸತ್ಸಂಪ್ರದಾಯವನ್ನು ಬೆಳೆಸಿ ಕೊಳ್ಳಬೇಕು.

ಲಿಂಗಾಯತ ಧರ್ಮ ಸಂಸ್ಥಾಪನಾ ದಿನ

ಧರ್ಮಪಿತ ಬಸವಣ್ಣನವರಿಗೆ ಸಾಕ್ಷಾತ್ಕಾರವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಲಿಂಗಾಯತ ಧರ್ಮವು ಹುಟ್ಟಿದ್ದು ಮಕರ ಸಂಕ್ರಾಂತಿಯಂದು. ಅದರ ನಿಮಿತ್ತ ಕೂಡಲ ಸಂಗಮದಲ್ಲಿ ಶರಣ ಮೇಳವನ್ನು ನಡೆಸಲಾಗುತ್ತಿದೆ. ಶರಣ ಮೇಳಕ್ಕೆ ಬರಲು ಆಗದವರು ಅಂದು (ಜನವರಿ 14ರಂದು) ಬಸವ ಮಂಟಪಗಳಲ್ಲಿ ಸಮುದಾಯ ಕೇಂದ್ರಗಳಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡಿ, ವಚನ ಪಠಣವನ್ನು ಮಾಡಬೇಕು.

ಬಸವ ಪಂಚಮಿ

ಒಂದು ಧರ್ಮದ ಇತಿಹಾಸದಲ್ಲಿ ಆ ಧರ್ಮದ ಆದಿಗುರು ಹುಟ್ಟಿದ ದಿನದಷ್ಟೇ ಮಹತ್ವಪೂರ್ಣ ಅವರು ದೇವರಲ್ಲಿ ಒಂದಾದುದು. ಗುರು ಬಸವಣ್ಣನವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು (30-7-1196). ಅಂದು ಮನೆಯಲ್ಲಿ ಪೂಜಾವ್ರತವನ್ನು ಮಾಡುವುದೇ ಅಲ್ಲದೆ ಸಾಮೂಹಿಕವಾಗಿ ಬಸವ ಪಂಚಮಿಯನ್ನು ಆಚರಿಸ ಬೇಕು. ನಾಗ ಪಂಚಮಿಯ ನಿಮಿತ್ತ ಸ್ಥಳೀಯ ರಜೆಗಳನ್ನು, ಶಾಲೆಗಳಿಗೆ ಕೊಡುವರಾದರೂ ಅಂದು ಸಾರ್ವಜನಿಕ ರಜಾದಿನ ಇರದು. ಆದರೆ ಪ್ರತಿ ಲಿಂಗಾಯತನು, ಬಸವ ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿ ಧರ್ಮಗುರುವಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಬೇಕು. ಕ್ರೈಸ್ತ, ಇಸ್ಲಾಂ, ಬೌದ್ಧ, ಸಿಖ್ ಧರ್ಮಗಳಲ್ಲಿ ಅವರು ಧರ್ಮ ಸಂಸ್ಥಾಪಕರುಗಳಿಗೆ ಭಕ್ತಿಪೂರ್ಣವಾಗಿ ಶ್ರದ್ಧಾಂಜಲಿ ಸಲ್ಲಿಸುತ್ತಾರೆಂಬುದನ್ನು ನೋಡಿ ಕಲಿಯಬೇಕು.

ಹಿಂದೂ ಧರ್ಮ-ವಿಮರ್ಶೆ ಭಾಗ - ೨

[2008 ಫೆಬ್ರವರಿ ಕಲ್ಯಾಣ ಕಿರಣದಲ್ಲಿ ಶ್ರೀ ಎಲ್ಲಪ್ಪನವರ ಲೇಖನ "ಹಿಂದೂ ಧರ್ಮ" ಮುದ್ರಣಗೊಂಡಿದ್ದು ಇದರ ವಿಮರ್ಶೆಯನ್ನು ಏಪ್ರಿಲ್ -ಮೇ ಸಂಚಿಕೆಯಲ್ಲಿ ಆರಂಭಿಸಲಾಗಿದೆ ಅದರ ಮುಂದುವರಿದ ಭಾಗವಿದು-ಮಾತಾಜಿ]

ಸೃಷ್ಟಿಕರ್ತನು ನಿರಾಕಾರ, ನಿರವಯವ; ರೂಪವಿರುವುದು ಮಾನವರಿಗೆ, ಜೀವಗಳಿಗೆ. ಕೆಲವರು ಹೇಳುವುದುಂಟು; ಗಿಡಮರಬಳ್ಳಿ ನೀರು ಇತ್ಯಾದಿ ಎಲ್ಲವನ್ನೂ ಪೂಜಿಸುವವರು ಅವುಗಳಲ್ಲೂ ದೇವನನ್ನು ಕಾಣುವರು ಎಂದು. ಗಿಡಮರಗಳನ್ನು, ಕ್ಷುದ್ರ ದೇವತೆಗಳನ್ನು, ದೇವರು ಎಂದು ಆರಾಧಿಸುವವರು ಬೌದ್ಧಿಕವಾಗಿ ಅತ್ಯಂತ ಕೆಳಗಿನ ಸ್ತರದಲಿ ಇರುವವರು ಎಂಬುದನ್ನು ನಾವು ಗಮನಿಸಬಹುದು. ಜಗತ್ತಿನಲ್ಲಿ ಹಲವಾರು ಧರ್ಮಗಳಿವೆ. ಹಿಂದೂ ಧರ್ಮ ಬಿಟ್ಟರೆ ಬೇರೆ ಯಾವುದೂ ದೇವರಿಗೆ ಆಕಾರವಿದೆ ಎಂದು ನಂಬುವುದಿಲ್ಲ, ಆಕಾರಗಳನ್ನು ಕಲ್ಪಿಸಿಲ್ಲ; ಹಿಂದುಗಳು ಉಪಾಸಿಸುವ ವಸ್ತುಗಳನ್ನು 7 ಭಾಗವಾಗಿ ವರ್ಗೀಕರಿಸಬಹುದು. ಭೂತ ಪ್ರೇತಗಳು, ಪೌರಾಣಿಕ ದೇವತೆಗಳು, ಪಂಚಭೂತಗಳು, ಪ್ರಾಣಿಗಳು, ಮೃತಾತ್ಮರು, ವಿಭೂತಿ ಪುರುಷರು, ದೇವರು. ಅರ್ಥರಹಿತವಾದ ಮೊದಲ ಐದು ಪೂಜೆಗಿಂತಲೂ ದಿವ್ಯ ಸಂದೇಶವನ್ನು ನೀಡಿದ ವಿಭೂತಿ ಪುರುಷರ ಆರಾಧನೆ ಶ್ರೇಷ್ಠ. ಎಲ್ಲಕ್ಕೂ ಶ್ರೇಷ್ಠ ದೇವಪೂಜೆ. ಹಿಂದು ಧರ್ಮದಲ್ಲಿ ಎಲ್ಲವೂ ಕಲಸು ಮೇಲೋಗರವಾಗಿ ಮೂಢ ಆಚರಣೆಗಳು ಸಮಾಜದಲ್ಲಿ ಹಾಸು ಹೊಕ್ಕಾಗಿವೆ. ಹಿಂದೂಯೇತರ ಧರ್ಮಗಳು ಬಹುದೇವತೋಪಾಸನೆ, ಮೂರ್ತಾರಾಧನೆ -ಯನ್ನು ಖಂಡಿಸಿ ಉನ್ನತವಾದ ದೇವಪೂಜೆಯತ್ತ ಜನರನ್ನು ಕೊಂಡೊಯ್ಯಲು ಪ್ರಯತ್ನಿಸುತವೆ.

ಅಜ್ಞಾನದ ಕೂಪದಲ್ಲಿರುವ ಜನರಿಗೆ ತಾವು ಮಾಡುವ ಆಚರಣೆ ಸರಿ ಎಂದೇ ಅನ್ನಿಸುತ್ತದೆ. ದಾವಣಗೆರೆಯ ದುರ್ಗಾದೇವಿ ಜಾತ್ರೆಯಲ್ಲಿ ಕೋಣಕುರಿಗಳನ್ನು ಕಡಿಯಲು ಸಿದ್ಧರಾದ ರಕ್ಕಸ ಪೂಜಾರಿಗಳು ಇದನ್ನು ಕಾನೂನಿನ ಬಲದಿಂದ ತಡೆಗಟ್ಟಲು ಹೋಗುವವರ ತಲೆ ಕಡಿಯಲೂ ಸಿದ್ಧರಾಗಿರುತ್ತಾರೆ. ಇಂದಿಗೂ ಸವದತ್ತಿ ಯಲ್ಲಮ್ಮನ ಹೆಸರಲ್ಲಿ ಬೆತ್ತಲೆ ಸೇವೆ ನಡೆಯುತ್ತದೆ. ಸಿಡಿ ಎಂದು ಬೆನ್ನು ಹುರಿಗೆ ಕೊಕ್ಕೆ ಸಿಕ್ಕಿಸಿಕೊಂಡು ಎತ್ತರದಲ್ಲಿ ತೂಗಾಡುವ ಮೂಢ ಭಕ್ತರಿಗೆ, ರಸ್ತೆಯಲ್ಲಿ ದೀರ್ಘ ದಂಡ ನಮಸ್ಕಾರ ಹಾಕಿ, ಉರುಳು ಸೇವೆ ಸಲ್ಲಿಸುವ ಅಜ್ಞಾನಿಗಳನ್ನೆ ಕಂಡು ಅದು ಅವರ ಭಕ್ತಿ, ಅವರ ಸಂಪ್ರದಾಯ ಎಂದು ಹೇಳುವುದು ಔದಾರ್ಯ ಅಥವಾ ಪರಮತ ಸಹಿಷ್ಣುತೆಯಲ್ಲ. ತಾತ್ಕಾಲಿಕವಾಗಿ ಅವರಿಗೆ ನೋವಾದರೂ ಚಿಂತೆಯಿಲ್ಲ ಅವರ ಮೂಢಾಚರಣೆಗಳನ್ನು ಖಂಡಿಸಿ ಸುಸಂಸ್ಕೃತ (Cultured) ಭಕ್ತಿಯನ್ನು ಕಲಿಸುವುದೇ ಸೂಕ್ತ.

ಯಲ್ಲಪ್ಪನವರ ಉಲ್ಲೇಖ :

ಸ್ವಾಮಿ ವಿವೇಕಾನಂದರು ತಾವು ಎಲ್ಲರಲ್ಲೂ ಇರುವ, ಎಲ್ಲರಿಗೂ ಅನ್ವಯಿಸುವ ಆತ್ಮವೊಂದನ್ನೇ ಬೋಧಿಸುವುದು. ಇದನ್ನು ಬಿಟ್ಟು ಬೇರೆ ಏನನ್ನೂ ಅಲ್ಲ ಎಂಬುದಾಗಿ ಹೇಳಿರುವರು. ಇವರ ಈ ನುಡಿಯು ಈಶಾವಾಸ್ಯೋಪನಿಷತ್ತಿನಲ್ಲಿನ ಒಂದು ಶ್ಲೋಕದಲ್ಲಿ ಹೇಳಿರುವ ಜಗತ್ತಿನಲ್ಲಿ ಸೃಷ್ಟಿಯಾಗಿರುವ ಎಲ್ಲಾ ಜೀವಿಗಳೂ ನಿಯಂತ್ರಿಸಲ್ಪಟ್ಟಿವೆ. ಆದುದರಿಂದ ಹೇ ಮಾನವ ಮತ್ತೊಬ್ಬರಿಗೆ ಕೊಟ್ಟು ಅನುಭವಿಸು, ಅಂದರೆ, ಸೇವಾ ಮನೋಭಾವದಿಂದ ಬದುಕು. ಅನ್ಯರ ಸಂಪತ್ತಿಗೆ ಆಸೆ ಪಡಬೇಡ ಎಂಬ ವಿಶ್ವ ಮಾನವ ಸಂದೇಶವನ್ನು ಪ್ರತಿಧ್ವನಿಸುವುದು. ಈ ಸಂದೇಶವನ್ನು ನಮ್ಮ ಋಷಿಮುನಿಗಳು ಸಹಸ್ರಾರು ವರ್ಷಗಳ ಹಿಂದೆಯೇ ನೀಡಿರುವರು.

ಸತ್ಯದ ಹಂಬಲವು ಸಾಹಿತ್ಯವಾಗಿ, ಸತ್ಯಾನ್ವೇಷಣೆಯು ಸಿದ್ಧಾಂತವಾಗಿ, ಸತ್ಯ ಸಾಕ್ಷಾತ್ಕಾರವೇ ದರ್ಶನವಾಗಿ ಪರಿಣಮಿಸುವದಷ್ಟೆ! ಶರಣರು ಸತ್ಯದ ಹಂಬಲದಿಂದ ವಚನ ಸಾಹಿತ್ಯ ವಾಹಿನಿಯನ್ನು ಹರಿಸಿದರು. ಸತ್ಯಾನ್ವೇಷಿಗಳಾಗಿ ಶಕ್ತಿ ವಿಶಿಷ್ಟಾದ್ವೈತ ರೂಪಿಸಿದರು. ಸತ್ಯ ಸಾಕ್ಷಾತ್ಕಾರಿಗಳಾಗಿ ಷಟ್‌ಸ್ಥಲ ಸಾಮರಸ್ಯ ದರ್ಶನವನ್ನು ನೀಡಿದರು. ಸಿದ್ಧಾಂತ,ಸಾಧನೆ, ಸಂಪಾದನೆ, ಸಾಹಿತ್ಯ, ಸಂಸ್ಕೃತಿ, ಸಮಾಜ, ನೀತಿ ಶಾಸ್ತ್ರಗಳನ್ನು ಅನುಭವ ಮಂಟಪದಲ್ಲಿ ಸಮನ್ವಯಗೊಳಿಸಿ ಸುವ್ಯವಸ್ಥಿತ ಲಿಂಗಾಯತ ಧರ್ಮವನ್ನು ರೂಪಿಸಿದವರು ಬಸವಾದಿ ಪ್ರಮಥರು.

ಈ ಮಾನವೀಯ ಮೌಲ್ಯವುಳ್ಳ ಸಂದೇಶವನ್ನು ಋಷಿಮುನಿಗಳು ಹೇಳಿರುವುದು ಸತ್ಯ, ಜಗತ್ತಿನ ಎಲ್ಲ ಧರ್ಮಗಳೂ ಹೇಳುತ್ತವೆ. ಹಿಂದೂ ಧರ್ಮದ ಶಾಸ್ತ್ರಗಳು ಕೆಲವು

Digitalized by e-Sahithya Documentation Forum
Sponsored by Sarayu Foundation Trust

ಸರ್ವೇಜನಃ ಸುಖಿನೋಭವಂತು, ವಸುದೈವ ಕುಟುಂಬಕಂ, ಸಹನಾವವತು ಸಹನೌಭುನಕ್ತು ಮುಂತಾಗಿ ವಿಶ್ವಕುಟುಂಬತ್ವವನ್ನು ಬೋಧಿಸಿದ್ದು ನಿಜ. ಆದರೆ ಹಿಂದು ಸಮಾಜದ ಬಹುದೊಡ್ಡ ವರ್ಗವನ್ನು ಶೂದ್ರತ್ವ ಮತ್ತು ಅಸ್ಪೃಶ್ಯ ವಲಯದಲ್ಲಿಟ್ಟು ಅವರಿಗೆ ಧರ್ಮಸಂಸ್ಕಾರ ಮಾತ್ರವಲ್ಲ ಕನಿಷ್ಠ ಸಾಮಾಜಿಕ ಹಕ್ಕುಗಳನ್ನು ಸಹ ಕೊಡದೆ ಇರುವುದೆ ಬಹುದೊಡ್ಡ ಲೋಪ. ಇದರಿಂದಾಗಿ ಆದರ್ಶಗಳು ಹಿರಿದಾಗಿದ್ದರೂ ಆಚರಣೆ ಕಿರಿದು ಎಂಬುದು ಎಲ್ಲರ ಅನುಭವ.

ವಿದ್ಯಾವಿನಯ ಸಂಪನ್ನೇ ಬ್ರಾಹ್ಮಣೇ ಗವಿಹಸ್ತಿನಿ ಶುನಿಚೈವ
ಶ್ವಪಾಕೇಚ ಪಂಡಿತಾ ಸಮದರ್ಶಿನಃ

" ವಿದ್ಯಾವಿನಯ ಸಂಪನ್ನನಾದ ಬ್ರಾಹ್ಮಣ, ಗೋವು, ನಾಯಿ, ಚಂಡಾಲ ಎಲ್ಲರನ್ನು ಜ್ಞಾನಿಯು ಸಮವಾಗಿ ಕಾಣುವನು" ಎಂಬ ಈ ಉಕ್ತಿಯ ಆಚರಣೆಯಲ್ಲಿದೆಯೆ? ಯಲ್ಲಪ್ಪನವರ ಹೇಳಿಕೆ." ಸಿದ್ಧಾಂತಗಳನ್ನು ಲೆಕ್ಕಿಸಬೇಡಿ ಮೂಢನಂಬಿಕೆಗಳನ್ನು ಲೆಕ್ಕಿಸಬೇಡಿ, ಕೋಮು, ಚರ್ಚು, ದೇವಸ್ಥಾನಗಳನ್ನು ಲೆಕ್ಕಿಸಬೇಡಿ. ಪ್ರತಿಯೊಬ್ಬ ಮಾನವ ಜೀವನದ ಸಾರವಾದ ಅಧ್ಯಾತ್ಮದೊಂದಿಗೆ ಹೋಲಿಸಿದರೆ ಅದಕ್ಕೆ ಬೆಲೆಯಿಲ್ಲ. ಯಾರನ್ನು ದೂರಬೇಡಿ, ಎಲ್ಲಾ ಮತದಲ್ಲಿಯೂ, ಕೋಮಿನಲ್ಲಿಯೂ ಸತ್ಯಾಂಶಗಳಿವೆ. ನಿಮ್ಮ ಜೀವನದಲ್ಲಿ ಧರ್ಮವೆಂದರೆ ಬರೀ ಮಾತಲ್ಲ, ಹೆಸರಲ್ಲ, ಪಂಗಡವಲ್ಲ, ಅದು ಅಧ್ಯಾತ್ಮಿಕ ಸಾಕ್ಷಾತ್ಕಾರ ಎಂಬುದನ್ನು ತೋರಿ. ಯಾರು ಇದನ್ನು ಅನುಭವಿಸಿರುವರೋ ಅವರು ಮಾತ್ರ ಇದನ್ನು ತಿಳಿದುಕೊಳ್ಳಬಲ್ಲರು. ಯಾರಲ್ಲಿ ಈ ಅಧ್ಯಾತ್ಮಿಕತೆ ಇದೆಯೋ ಅವರು ಮಾತ್ರ ಮತ್ತೊಬ್ಬರಿಗೆ ಇದನ್ನು ಕೊಡಬಲ್ಲರು. ಮಾನವ ಕೋಟಿಯ ಮಹಾ ಗುರುಗಳಾಗಬಲ್ಲರು. ಅವರೇ ಜ್ಞಾನಶಕ್ತಿಯ ಗಣಿ. ಇತರೆ ಗುರುಗಳು ತಮ್ಮ ಹೆಸರಿನಲ್ಲಿ ಬೇರೆ ಬೇರೆ ಧರ್ಮವನ್ನು ಬೋಧಿಸಿದರು, ಆದರೆ ಪರಮಹಂಸರು ಯಾವುದನ್ನು ತನ್ನದೆಂದು ಸಮರ್ಥಿಸಲಿಲ್ಲ. ಯಾವ ಧರ್ಮದ ಗೋಜಿಗೂ ಹೋಗಲಿಲ್ಲ. ಏಕೆಂದರೆ, ಧರ್ಮಗಳೆಲ್ಲ ಪಾರಮಾರ್ಥಿಕ ದೃಷ್ಟಿಯಿಂದ ಒಂದೆ ಸನಾತನ ತತ್ವದ ಹಲವು ದೃಶ್ಯಗಳು.

ಹಿಂದು ಧರ್ಮವು ಸೃಷ್ಟಿಸಿಕೊಂಡಿರುವ ಆಂತರಿಕ, ಸಾಮಾಜಿಕ ಸಮಸ್ಯೆಗಳಿಂದಾಗಿ ಅದು ಎಂದೋ ಮುಳುಗಿದ ಹಡಗು ಆಗಿರುತಿತ್ತು. ಅದನ್ನು ಮುಳುಗದಂತೆ ಎತ್ತಿಹಿಡಿದಿರುವ ಆಶಾಜ್ಯೋತಿಗಳು ಎಂದರೆ ಭಾರತದೊಳಗಿನ ಅಧ್ಯಾತ್ಮಿಕ ಪಂಥಗಳು (Spiritual cults). ಬಿಗಿಯಾದ ಸಂಪ್ರದಾಯ, ಮತಾಂಧ ವೈದಿಕ ಮತ ಪರಂಪರೆ, ಕೆಲವು ದೇವಾಲಯಗಳ ವಿಲಕ್ಷಣ ನಂಬಿಕೆ (ಉದಾ: ಜೇಸುದಾಸ ಬಂದು ಹೋದರು ಎಂದು ಹಾಲು, ನೀರಿನಲ್ಲಿ ದೇವಾಲಯ ಶುದ್ಧಿಕರಿಸಿದ ಗುರುವಾಯೂರಪ್ಪನ್ ದೇವಾಲಯ, ಇಂದಿರಾಜಿಗೆ ಪ್ರವೇಶ ನಿರಾಕರಿಸಿದ ಪುರಿ ಜಗನ್ನಾಥ ದೇವಾಲಯ, ಜಯಮಾಲ ಸ್ಪರ್ಶಿಸಿದರೆಂದು ಹುಯಿಲೆಬ್ಬಿಸಿದ ಶಬರಿ ಮಲೈ ಅಯ್ಯಪ್ಪನ್ ದೇವಾಲಯ) ಇವು ಹುಟ್ಟಿಸುವ ಹಾಲಾಹಲವನ್ನು ಕುಡಿದು ಹಿಂದು ಧರ್ಮವನ್ನು ರಕ್ಷಿಸುವ ಶಿವ ಎಂದರೆ ಅಧ್ಯಾತ್ಮಿಕ ಪಂಥಗಳು. ರಾಮಕೃಷ್ಣ ಮಿಷನ್, ಆರ್ಯ ಸಮಾಜ, ಬ್ರಹ್ಮ ಸಮಾಜ ಇನ್ನಿತರ ಅಧ್ಯಾತ್ಮಿಕ ಗುರುಗಳ ಆಶ್ರಮಗಳು ಜಾತೀಯತೆ, ಅಸ್ಪೃಶ್ಯತೆ, ಅಸಮಾನತೆಯಿಂದ ನೊಂದು ಬೆಂದು, ಬಸವಳಿದ ಮನಸುಗಳಿಗೆ ಸಾಂತ್ವನ ನೀಡುತ್ತವೆ. ನೊಂದು, ತಪ್ತವಾದ ಮನಸ್ಸುಗಳು ಹಿಂದು ವಿರೋಧಿ ಮನೋಭಾವ ತಳೆಯುವುದನ್ನು ತಪ್ಪಿಸುತ್ತವೆ.

ಅಧ್ಯಾತ್ಮಿಕತೆಯೊಂದೇ ಪರಿಹಾರವಾಗದು. ಏಕೆಂದರೆ ಅದರ ಚಿಕಿತ್ಸೆ ಕೇವಲ ತೋರಿಕೆಯದು. ಸಾಮಾಜಿಕ ಸಮಸ್ಯೆಗಳಾದ ಜಾತೀಯತೆ, ಅಸ್ಪೃಶ್ಯತೆ, ಭೇದಭಾವಕ್ಕೆ ಕೇವಲ ಅಧ್ಯಾತ್ಮದಲ್ಲಿ ಪರಿಹಾರ ಸಿಗದು. ಇದು ಕೇವಲ ಲಾಕ್ಷಣಿಕ ಚಿಕಿತ್ಸೆ (Symptomatic treatment) ನೀಡುತ್ತದೆ. ಅಧ್ಯಾತ್ಮಿಕ ಆಶ್ರಮಗಳಿಗೆ ಹೋಗುವ ಭಕ್ತರ ಪೂರ್ವದ ಜಾತಿ ಅಳಿಯುವುದಿಲ್ಲ : ಬದಲಾದ ಪರಿಸರದಿಂದಾಗಿ ಪರಸ್ಪರ ಊಟೋಪಚಾರ ನಡೆಯುವುದಾದರೂ ವೈವಾಹಿಕ ಸಂಬಂಧ ನಡೆಯುವುದಿಲ್ಲ. ಕ್ರಾಂತಿಪುರುಷ ಬಸವಣ್ಣನವರು ಕೊಟ್ಟದ್ದು ಮೂಲಭೂತ (Causitive treatment) ಚಿಕಿತ್ಸೆ, ರೋಗದ ಮೂಲವನ್ನರಸಿ ವಾಸಿ ಮಾಡುವದು.

ದಿ 28-4-2008 ರಂದು ಗುಲಬರ್ಗಾ ಮಾರ್ಗವಾಗಿ ಬೀದರಿಗೆ ಹೊರಟು ಕರ್ನಾಟಕ ಎಕ್ಸ್‌ಪ್ರೆಸ್‌ದಲ್ಲಿ ಕುಳಿತುಕೊಂಡಿದ್ದೆವು. ಇಸ್ಕಾನ್‌ದವರು ಅದೂ ವಿದೇಶಿ ಮುಖದ ಸನ್ಯಾಸಿಗಳು ಭಗವದ್ಗೀತೆ, ಭಾಗವತ ಮುಂತಾದ ಪುಸ್ತಕ ಮಾರುತ್ತ ಬಂದರು ನನ್ನನ್ನು ನೋಡಿ ಚಕಿತರಾಗಿ ನಿಂತರು, "ಸನ್ಯಾಸಿನಿಯೆ?" ಎಂದರು. ನಮ್ಮ ಶಿಷ್ಯರು ಅಹುದು ಎಂದಾಗ " ಹೆಣ್ಣುಮಕ್ಕಳು ಸನ್ಯಾಸಿನಿಯಾಗಲು ಸಾಧ್ಯವಿಲ್ಲವಲ್ಲ. ಇದು ಹೇಗೆ ಸಾಧ್ಯ?

ಎಂದರು. ನಾನು ಹೇಳಿದೆ "ವೈದಿಕ ಹಿಂದು ಧರ್ಮದ ಪ್ರಕಾರ ಸಾಧ್ಯವಿರಲಿಕ್ಕಿಲ್ಲ ಲಿಂಗಾಯತ ಧರ್ಮದ ಪ್ರಕಾರ ಸಾಧ್ಯ!" ಅಹುದೇ ಎಂದು ಉದ್ಗಾರ ತೆಗೆದರು. ಟ್ರೇನ್ ಚಲಿಸುವ ಸೂಚನೆ ಕಂಡು ಹೊರಟು ಹೋದರು.

ಹಿಂದು ವಿಚಾರವನ್ನು ತುಂಬಿಕೊಂಡ ವಿದೇಶೀಯರು ಸಹ ಹೆಣ್ಣುಮಕ್ಕಳಿಗೆ ಸನ್ಯಾಸ ನಿಷಿದ್ಧ ಎಂದು ತಿಳಿದಿರುವುದು ಸೋಜಿಗ ತಂದಿತು. ಸೋದರಿ ನಿವೇದಿತಾಗೆ ಅಧಿಕೃತವಾಗಿ ಸನ್ಯಾಸ ದೀಕ್ಷೆ ಕೊಡಲು ಸ್ವಾಮಿ ವಿವೇಕಾನಂದರು ಹಿಂಜರಿದುದಾಗಿ ಓದಿದ ನೆನಪು. ಉಮಾ ಭಾರತಿ (ರಾಜಕೀಯ ವ್ಯಕ್ತಿಯಲ್ಲ) ಎಂಬ ಒಬ್ಬರು ನನ್ನಿಂದ ಸನ್ಯಾಸ ದೀಕ್ಷೆ ಪಡೆದರು. ನಮ್ಮ ಪರಿಚಯವಾದಾಗ ಕಾವಿ ತೊಟ್ಟಿದ್ದರು. ದೀಕ್ಷೆ ಆಗಿದೆ ಮತ್ತೇಕೆ ಎಂದಾಗ ತಾನಾಗಿ ಬಟ್ಟೆಗೆ ಬಣ್ಣಹಾಕಿ, ಯಾರೋ ಒಬ್ಬರು ಗುರುಗಳ ಕೈಗೆ ಕೊಟ್ಟು ಪಡೆದಿರುವುದಾಗಿಯೂ, ಅಧಿಕೃತವಾಗಿ ಅವರು ಕೊಡಲಿಲ್ಲವಾಗಿಯೂ ಹೇಳಿದರು. ಹಿಂದು ಸಮಾಜದಲ್ಲಿ ಯಾರಿಗೆ ಯಾರೂ ಹೇಳುವ ಕೇಳುವ ಪ್ರಶ್ನೆ ಇಲ್ಲದಿರುವುದರಿಂದ ಅವರು ಕಾವಿ ಬಣ್ಣದ ಬಟ್ಟೆ ತೊಟ್ಟರೂ ಪ್ರಶ್ನಿಸುವುದಿಲ್ಲ ಅಷ್ಟೆ. ಈ ಹಿನ್ನೆಲೆಯಲ್ಲಿ ಲಿಂಗಾಯತ ಧರ್ಮದ ಸ್ಥಾಪಕ ಗುರುಬಸವಣ್ಣನವರು ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವಾಗಿ ಈ ಎಲ್ಲ ಸುಧಾರಣೆ ತಂದರು ಎಂಬುದು ಗಮನಾರ್ಹ. ಅಧ್ಯಾತ್ಮಿಕ ಚಿಂತನೆ ಮನಃ ಶಾಂತಿಯನ್ನು ದಯಪಾಲಿಸುವಂಥದೇ ವಿನಾ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವಂಥದಲ್ಲ. ಧರ್ಮವು ಸಾಮಾಜಿಕ ಸಮಸ್ಯೆಗಳಿಗೂ ಪರಿಹಾರವನ್ನು ನೀಡುವ ಬಹುಮುಖಿ ಸಾಧನೆ. ಒಂದು ವಿಶಾಲವಾದ ವೃಕ್ಷವಿದೆ ಎಂದುಕೊಳ್ಳೋಣ; ಹತ್ತಾರು ಕೊಂಬೆಗಳು ಅದಕ್ಕೆ ಇರುತವೆ. ಅದೇ ರೀತಿ ಧರ್ಮವು ಒಂದು ವೃಕ್ಷ; ಅದಕ್ಕೆ ಸಮಾಜ ಶಾಸ್ತ್ರ, ನೀತಿಶಾಸ್ತ್ರ ಇತ್ಯಾದಿಗಳು ಕೊಂಬೆಗಳಿದ್ದಂತೆ ಅದರಲ್ಲಿ ಒಂದು ಅಧ್ಯಾತ್ಮಶಾಸ್ತ್ರ (Spiritualism) ಹಿಂದೂಯೇತರ ವಿದೇಶಿ ಧರ್ಮಗಳು ಸಮಾಜ ಶಾಸ್ತ್ರದ ಗಟ್ಟಿ ಆಯುಧವಿಡಿದು ಹೋರಾಡುತವೆ. ಹಿಂದು ಧರ್ಮ ಅವುಗಳೊಡನೆ ಅಧ್ಯಾತ್ಮಶಾಸ್ತ್ರದ (ಗುರಾಣಿ ಆತ್ಮ ರಕ್ಷಣೆಗೆ ಬಳಸುವ ಸಾಧನ) ಹಿಡಿದು ರಕ್ಷಣೆ ಮಾಡಿಕೊಳ್ಳಲು ಬಯಸುತ್ತದೆ. ಸವರ್ಣೀಯರ ವಿಷಯದಲ್ಲಿ ಅಧ್ಯಾತ್ಮಶಾಸ್ತ್ರ ಪರಿಣಾಮಕಾರಿಯಾಗಿ ಕೆಲಸ ಮಾಡುವುದಾದರೂ ಅವರ್ಣೀಯರ ವಿಷಯದಲ್ಲಿ ಅಷ್ಟೊಂದು ಯಶಸ್ವಿಯಾಗದು.

ಯಲ್ಲಪ್ಪ : ಸನಾತನ ಧರ್ಮದ ತತ್ವಗಳು ಸರ್ವಕಾಲಿಕವೆ ಸರ್ವ ವ್ಯಾಪಕವಾದ ಶಾಶ್ವತವಾದ ತತ್ವಗಳು. ಎಲ್ಲಾ ಜೀವಿಗಳು ಸೃಷ್ಟಿಕರ್ತನಾದ ಭಗವಂತನಿಂದ ನಿಯಂತ್ರಿಸಲ್ಪಟ್ಟಿವೆ, ಎಂದು ಸಾರುವುದು. ಒಬ್ಬನೇ ಸೃಷ್ಟಿಕರ್ತ. ಈ ಸೃಷ್ಟಿಕರ್ತನು ಎಲ್ಲಾ ಜೀವಿಗಳಲ್ಲಿಯೂ ಇದ್ದು ಮಾನವ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. ಜ್ಞಾನಿಗಳು, ದೈವೀಗುಣಗಳನ್ನು ಹೊಂದಿದ ಮಾನವ ರೂಪದಲ್ಲಿನ ಚೈತನ್ಯಗಳನ್ನು ದೇವರೆಂದು ಪೂಜಿಸುತಾರೆ. ಅಜ್ಞಾನಿಗಳು ಇವರನ್ನು ತಿರಸ್ಕರಿಸುತಾರೆ. ಹಿಂದೂ ಧರ್ಮಕ್ಕೆ ವೇದ, ಉಪನಿಷತ್ತು, ಭಗವದ್ಗೀತೆಗಳೇ ಆಧಾರ ಗ್ರಂಥಗಳು. ಈ ಗ್ರಂಥಗಳಲ್ಲಿ ಹೇಳಿರುವ ತತ್ವಗಳನ್ನೇ ಅಪ್ಪ ಬಸವಣ್ಣನವರು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದವರಲ್ಲವೆ ?

ಮಾತಾಜಿ : ವಿಶ್ಲೇಷಣಾತ್ಮಕ (Analytic outlook) ದೃಷ್ಟಿಯಿಲ್ಲದೆ ಸ್ವಾವಲೋಕನ (self-introspection) ವಿಲ್ಲದೆ ಯಲ್ಲಪ್ಪನವರು ಪುಂಖಾನುಪುಂಖವಾಗಿ ಪದಗಳನ್ನು ಬಳಸುತ್ತಾರೆ.

1. ಸೃಷ್ಟಿಕರ್ತ ಒಬ್ಬನೇ ಎಂದು ಹಿಂದು ಧರ್ಮ ಸಾರುವುದೇ ಆದರೆ ದಶಾವತಾರದ ಕಲ್ಪನೆ ಏಕೆ? ದೇವರು ಸರ್ವಶಕ್ತನಾಗಿ ಏನು ಬೇಕಾದರೂ ಮಾಡಬಲ್ಲವನಾಗಿರುವಾಗ ಮುನಿಗಳಿಂದ ಶಾಪಕ್ಕೆ ಒಳಗಾಗುವುದೇಕೆ? ಹಂದಿ ಆಮೆ ಮುಂತಾದ ಕ್ಷುದ್ರ ಜಂತುಗಳ, ಸಿಂಹ ಮುಂತಾದ ಉಗ್ರ ಪ್ರಾಣಿಗಳ ರೂಪವನ್ನೇಕೆ ಧರಿಸಬೇಕು? ಕಾಳಿಯ ರೂಪ, ಕಲ್ಪನೆ ಎಷ್ಟು ಭಯಂಕರ! ಚಾಚಿದ ನಾಲಿಗೆ, ರುಂಡ ಮಾಲೆಗಳ ಹಾರ, ಕತ್ತರಿಸಿದ ಕೈಗಳ ಸೊಂಟಪಟ್ಟಿ; ಒಂದೊಂದೂ ಅಸಹ್ಯ ಮತ್ತು ಭಯಂಕರ.

ಇದಕ್ಕೆ ಸವಾಲಾಗಿಯೇ ಗುರು ಬಸವಣ್ಣನವರು ಹೇಳಿದ್ದು,

1.ಇಬ್ಬರು ಮೂವರು ದೇವರೆಂದು ಉಬ್ಬುಬ್ಬಿ ಮಾತನಾಡಬೇಡ
ದೇವನು ಒಬ್ಬನೇ ಕಾಣಿರೋ, ಇಬ್ಬರೆಂಬುದು ಹುಸಿ ನೋಡಾ!
ಲಿಂಗದೇವನಲ್ಲದೆ ಇಲ್ಲವೆಂದಿತ್ತು ವೇದ.

Digitalized by e-Sahithya Documentation Forum
Sponsored by Sarayu Foundation Trust

2.ಅಮೃತಮತಿ ಸೋಮಶಂಭುವಿಗೆ ಹುಟ್ಟಿದಾತ ಇಂದ್ರ,
ಸೆತ್ಯಋಷಿ ಜೇಷ್ಠಾದೇವಿಗೆ ಹುಟ್ಟಿದಾತ ಬ್ರಹ್ಮ,
ವಸುದೇವ ದೇವಕಿಗೆ ಹುಟ್ಟಿದಾತ ವಿಷ್ಣು,
ನಾಭಿರಾಜ ಮರುತಾದೇವಿಗೆ ಹುಟ್ಟಿದಾತ ನರುಹ
ಇವರೆಲ್ಲರೂ ಯೋನಿಜರೆಂಬುದ ತ್ರೈಜಗ ಬಲ್ಲುದು.
ಉತ್ಪತ್ತಿ ಸ್ಥಿತಿ ಪ್ರಳಯಕ್ಕೆ ಹೊರಗಾದ ಲಿಂಗದೇವಂಗೆ
ಮಾತಾಪಿತರುಳ್ಳಡೆ ಹೇಳಿರೋ !

3.ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗೆ ನಾನೊಲಿದೆ ಎಲೆ ಅವ್ವ !
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ
ನಾನು,ಕುಲ ಸೀಮೆಯಿಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆ
ಇದು ಕಾರಣ ಚೆನ್ನಮಲ್ಲಿಕಾರ್ಜುನ ಮಹಾದೇವಿ ಅಕ್ಕ ಪ್ರಿಯ
ಲಿಂಗದೇವನೆನಗೆ ಚೆಲುವಗಂಡ
ಈ ಸಾವಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು

ಯಲ್ಲಪ್ಪ : ಹಿಂದೂ ಧರ್ಮಕ್ಕೆ ವೇದ, ಉಪನಿಷತ್ತು, ಭಗವದ್ಗೀತೆಗಳೆ ಆಧಾರ ಗ್ರಂಥಗಳು. ಈ ಗ್ರಂಥಗಳಲ್ಲಿ ಹೇಳಿರುವ ತತ್ವಗಳನ್ನೆ ಅಪ್ಪ ಬಸವಣ್ಣನವರು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದರಲ್ಲವೆ ?

ಮಾತಾಜಿ : ಹಿಂದೂ ಧರ್ಮಕ್ಕೆ ವೇದ, ಆಗಮ, ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರ ಶೃತಿ, ಸ್ಮೃತಿ, ಪುರಾಣಗಳೇ ಆಧಾರ ಗ್ರಂಥಗಳು ಇವುಗಳಲ್ಲೆ ಬರುವ ಜ್ಞಾನಕಾಂಡ ಮತ್ತು ನೈತಿಕ ಮೌಲ್ಯಗಳ ಬಗ್ಗೆ ಯಾವುದೇ ಆಕ್ಷೇಪಣೆ ಇಲ್ಲ. ಆದರೆ ಬಂದಿರುವ ಸಮಸ್ಯೆ, ಚತುರ್ವರ್ಣ ಮತ್ತು ಆಶ್ರಮ ವ್ಯವಸ್ಥೆಯನ್ನು ಪ್ರತಿಪಾದಿಸುವ ಸಮಾಜ ಶಾಸ್ತ್ರ; ಬಹುದೇವತೆಗಳ ಸ್ತುತಿ ಮತ್ತು ಬಹುದೇವತಾ ಉಪಾಸನೆ ಹೇಳುವ ದೇವಶಾಸ್ತ್ರ (Theology). ಹೀಗಾಗಿಯೇ ಬಸವಣ್ಣನವರು ವೇದ, ಶಾಸ್ತ್ರ, ಆಗಮಗಳ ಪ್ರಾಮಾಣ್ಯೆ ಒಪ್ಪಿಕೊಳ್ಳಲಿಲ್ಲ.

ವೇದಕ್ಕೆ ಒರೆಯಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ.
ತರ್ಕದ ಬೆನ್ನ ಬಾರನೆತ್ತುವೆ,
ಆಗಮದ ಮೂಗ ಕೊಯಿವೆ ನೋಡಯ್ಯಾ,
ಮಹಾದಾನಿ ಲಿಂಗದೇವಾ,
ಮಾದಾರ ಚನ್ನಯ್ಯನ ಮನೆಯ ಮಗ ನೋಡಯ್ಯಾ

ಆದಿ ಪುರಾಣ ಅಸುರರಿಗೆ ಮಾರಿ; ವೇದ ಪುರಾಣ ಹೋತಿಂಗೆ ಮಾರಿ
ರಾಮ ಪುರಾಣ ರಕ್ಕಸರಿಗೆ ಮಾರಿ; ಭಾರತ ಪುರಾಣ ಗೋತ್ರಕ್ಕೆ ಮಾರಿ
ಎಲ್ಲ ಪುರಾಣ ಕರ್ಮಕ್ಕೆ ಮೊದಲು; ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲ,
ಲಿಂಗದೇವಾ ?

" ಇಬ್ಬರು ಮೂವರು ದೇವರೆಂದು" ಎಂಬ ವಚನದಲ್ಲಿ "ಲಿಂಗದೇವನಲ್ಲದೆ ಇಲ್ಲವೆಂದಿತು ವೇದ" ಎಂದು ಬಹುದೇವತೋಪಾಸಕರಿಗೆ ತಿವಿದು ಹೇಳುವರು.

ಓಂ ಭೂರ್ಭುವಃ ಸ್ವಃ ತತಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ
ಧೀಯೋಯೋನಃ ಪ್ರಚೋದಯಾತ್

ಎಂಬ ಗಾಯತ್ರಿ ಮಂತ್ರವು, ಸತ್ಯಕ್ಕೆ ಸತ್ಯನು ಜ್ಯೋತಿಗಳಿಗೆಲ್ಲ ಪರಂ ಜ್ಯೋತಿ ಸ್ವರೂಪನೂ ಆದ ಬ್ರಹ್ಮವೆಂಬ ವಸುವನ್ನು ಸಾಕ್ಷಾತ್ಕರಿಸಿಕೊಳ್ಳಲು ನನ್ನ ಮತಿಯು ಪ್ರಚೋದಿತವಾಗಲಿ ಎಂಬುವುದರಲ್ಲಿ ದೇವನು ಒಬ್ಬ ಎಂಬ ಪರಮ ಸತ್ಯವಿದೆ.

ಏಕಂ ಸತ್ ವಿಪ್ರಾ ಬಹುಧಾ ವದಂತಿ.

ಪರಮಾತ್ಮನು ಒಬ್ಬನೇ, ಪಂಡಿತರು ಹಲವು ಹೆಸರಿನಿಂದ ಕರೆಯುತಾರೆ. ನಿಜ ವೇದವು ದೇವನೊಬ್ಬ ಬಹಳ ಹೆಸರಿನಿಂದ ವಿದ್ವಾಂಸರು ಕರೆಯುತ್ತಾರೆ. ಎಂದು

ಹೇಳಿದೆಯೇ ವಿನಾ ನಾನಾ ರೂಪಗಳಿವೆ ಎಂದು ಹೇಳಿಲ್ಲ. ಅನೇಕ ವಿದ್ವಾಂಸರ ಪ್ರಕಾರ ಸತ್ಯಾರ್ಥ ಪ್ರಕಾಶಿಕೆಯ ಕರ್ತೃವಾದ ಶ್ರೀ ದಯಾನಂದ ಸರಸ್ವತಿಯವರ ಪ್ರಕಾರ ವೇದಗಳು ಹೇಳಿರುವದು ಏಕದೇವೋಪಾಸನೆಯನ್ನೇ. ಈ ದೇವತೆಗಳ ಕಲ್ಪನೆ ಕಾಲಾನಂತರ ಪುರಾಣ ಯುಗದಲ್ಲಿ ಬೆಳೆದು ಬಂದುದು ಎನ್ನುತಾರೆ. ಅದಕ್ಕಾಗಿಯೇ ಗುರು ಬಸವಣ್ಣನವರು, 'ಇಬ್ಬರು ಮೂವರು ದೇವರು ಇರುವುದಿಲ್ಲ. ಸೃಷ್ಟಿಕರ್ತನೊಬ್ಬನೆ. ವೇದಗಳು ಇದನ್ನೆ ಹೇಳಿವೆ.' ಎನ್ನುತಾರೆ. ಇನ್ನೊಂದು ವಚನದಲ್ಲಿ "ವೇದವೆಂಬುದು ನಿಮಗೆ ತಿಳಿಯದು." ಎಂದು ವಿದ್ವಾಂಸರನ್ನು ಟೀಕಿಸುತಾರೆ.

ವೇದಗಳನ್ನು, ಭಗವದ್ಗೀತೆಯನ್ನು ಗುರು ಬಸವಣ್ಣನವರು ಸ್ಪಷ್ಟವಾಗಿ ಪ್ರಮಾಣ ಗ್ರಂಥಗಳೆಂದು ನಿರಾಕರಿಸುತ್ತಾರೆ. ಕಾರಣಗಳು ಕೆಳಗಿನಂತಿವೆ.

ಓಂ ಸಹಸ್ರ ಶೀರ್ಷಃ
ಸಹಸ್ರಾಕ್ಷಃ ಸಹಸ್ರಪಾತ್
ಸ ಭೂಮಿಂ ವಿಶ್ವತೋ ವೃತ್ವಾ
ಅತ್ಯತಿಷ್ಟತ್ ದಶಾಂಗುಲಂ
ಬ್ರಾಹ್ಮಣೋಸ್ಯ ಮುಖ ಮಾಸೀತ್
ಬಾಹೂ ರಾಜನ್ಯಃ ಕೃತ
ಊರೂತದಸ್ಯ ಯದ್ವೈಶ್ಯಃ
ಪದ್ಭ್ಯಾಂ ಸೂದ್ರೋ ಅಜಾಯತ

ದೇವನು ಸಾಸಿರ ತಲೆ, ಸಾಸಿರ ಕಣ್ಣು ಸಾಸಿರ ಬಾಹು, ಸಾಸಿರ ಪಾದಗಳಿಂದ ಕೂಡಿದ ಸರ್ವಜ್ಞ, ಸರ್ವದ್ರಷ್ಠಾರ, ಸರ್ವಶಕ, ಸರ್ವವ್ಯಾಪಿ. ಇಂತಹ ದೇವನ ತಲೆಯಿಂದ ಬ್ರಾಹ್ಮಣನ ಉತ್ಪತ್ತಿ, ಬಾಹುವಿನಿಂದ ಕ್ಷತ್ರಿಯನ ಉತ್ಪತ್ತಿ ತೊಡೆಯಿಂದ ವೈಶ್ಯನ ಉತ್ಪತ್ತಿ, ಪಾದದಿಂದ ಶೂದ್ರನ ಉತ್ಪತ್ತಿ : ದೇವರಿಗೆ ಒಂದು ಆಕಾರ ಕಲಿಸಿ ವಿವಿಧ ಅಂಗಗಳಿಂದ ವಿವಿಧ ವರ್ಣ (ಜಾತಿ)ಗಳವರನ್ನು ಹುಟ್ಟಿಸಿದ್ದು ಸರಿಯೇ ? ಮೊಟ್ಟ ಮೊದಲನೆಯದಾಗಿ ವಿರಾಟ ಪುರುಷನು ನಿರವಯನು; ಅವನು ಸಾವಯವನಾಗಿದ್ದರೆ ಸರ್ವವ್ಯಾಪಿ, ಸರ್ವಶಕ ಆಗಲಿಕ್ಕೆ ಅಸಾಧ್ಯ. ನಿರವಯವನಾದ ಪರಮಾತ್ಮನಲ್ಲಿ ವಿವಿಧ ಅಂಗಾಂಗಗಳನ್ನು, ತಲೆ, ಭುಜ, ತೊಡೆ, ಪಾದಗಳನ್ನು ಕಲ್ಪಿಸುವುದಾದರೂ ಹೇಗೆ ? ಅಲ್ಲದೆ ಶಿರದಿಂದ, ಬಾಹುವಿನಿಂದ, ಊರುವಿನಿಂದ, ಪಾದದಿಂದ ಮಾನವರು ಹುಟ್ಟಲಿಕ್ಕಾದರೂ ಸಾಧ್ಯವಿದೆಯೇ? ಹಾಗಿದ್ದರೆ ಮುಖದಿಂದ ಹುಟ್ಟಿದ ಬ್ರಾಹ್ಮಣರು ಮುಖದ ಆಕೃತಿಯಲ್ಲಿಯೂ, ಬಾಹುವಿನಿಂದಾವಿರ್ಭವಿಸಿದ ಕ್ಷತ್ರಿಯನು ನೀಳವಾಗಿ ಬಾಹುವಿನಾಕೃತಿಯಲ್ಲಿಯೂ, ತೊಡೆಯಿಂದ ಹುಟ್ಟಿದ ವೈಶ್ಯ ತೊಡೆಯಂತೆಯೂ, ಪಾದದಿಂದ ಹುಟ್ಟಿದ ಶೂದ್ರ ಪಾದದಂತೆಯೂ ಇರಬೇಕಾಗಿತ್ತು. ಆದರೆ ಇವರೆಲ್ಲರೂ ಒಂದೇ ಆಕಾರದಲ್ಲೆ ಇರುವುದರಿಂದ, ಮತ್ತು ಯೋನಿಜರಾಗಿಯೇ ಹುಟ್ಟಿರುವುದರಿಂದ ಅವರವರ ಜನನದಲ್ಲಿ – ವೈಶಿಷ್ಟವೇನು? ಮತ್ತು ವೈವಿಧ್ಯತೆ ಏನು?

ಚಾತುರ್ವಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗೇಶಃ
ತಸ್ಯ ಕರ್ತಾರಮಪಿ ಮಾಂ ವಿದ್ಧ್ಯ ಕರ್ತಾರ ಮವ್ಯಯಮ್

ಚತುರ್ವರ್ಣಗಳು ಗುಣ ಕರ್ಮಗಳ ಆಧಾರದ ಮೇಲೆ ನನ್ನಿಂದ ಸೃಷ್ಟಿಯಾಗಿವೆ ಎಂಬುದು ಶ್ರೀ ಕೃಷ್ಣನ ಮಾತು. ಗುಣದ ಮೇಲೆ ವಿಭಜನೆಯಾಗಿದ್ದಿದ್ದರೆ ಆಗ ಸತ್ವ, ರಜ, ತಮ ಎಂಬ ತ್ರಿಗುಣವಿಡಿದು 3 ವರ್ಣಗಳು ಇರಬೇಕಿತ್ತು. ಕರ್ಮ ಅರ್ಥಾತ್ ಉದ್ಯೋಗಗಳ ಮೇಲಿನ ವಿಭಜನೆ ಎಂದು ಒಪ್ಪೋಣ. ಕರ್ಮ ಅರ್ಥಾತ್ ಉದ್ಯೋಗಗಳ ಮೇಲೆ ವರ್ಗೀಕರಣವಾಗಬೇಕಿತ್ತೇ ವಿನಾ. ಕರ್ಮಗಳನ್ನು ಮಾಡುವ ಕಾರ್ಮಿಕರನ್ನು ವಿಭಜಿಸಬಾರದಿತ್ತು. ಈ ವಿಶಿಷ್ಟ ಜಾತಿ ಪದ್ಧತಿಯು ಸರಿಪಡಿಸಲಾಗದ ಹಾನಿಯನ್ನು ಈ ದೇಶಕ್ಕೆ ಮಾಡಿದೆ.

ಅಧ್ಯಾತ್ಮಿಕ ಗುರುಗಳಾದ, ದಾರ್ಶನಿಕರಾದ ಸ್ವಾಮಿ ವಿವೇಕಾನಂದರು ಅರವಿಂದರು. ಸ್ವಾಮಿ ರಾಮತೀರ್ಥ ಮುಂತಾದವರ ಬೋಧನೆಗಳು, ಅವರುಗಳು ಕಟ್ಟಿದ ಅಧ್ಯಾತ್ಮಿಕ ಸಂಸ್ಥೆಗಳು ವಿದೇಶೀ ಧರ್ಮಗಳ ಅಲೆಗಳ ಹೊಡೆತದಿಂದ ಹಿಂದು ಧರ್ಮವನ್ನು ರಕ್ಷಿಸುವ ತಡೆಗೋಡೆಗಳಾಗಿ ಕೆಲಸ ಮಾಡಿವೆ, ಮಾಡುತ್ತಿವೆ. ಹೇಗೆಂದರೆ ಇಂಥ ಆಶ್ರಮಗಳಲ್ಲಿ ಜಾತಿಭೇದವಿಲ್ಲದೆ ಮುಕ್ತ ಪ್ರವೇಶವಿರುವುದರಿಂದ ವಿದ್ಯಾವಂತರಾದ ಸುಧಾರಿಸಿದ ದಲಿತರು,

Digitalized by e-Sahithya Documentation Forum
Sponsored by Sarayu Foundation Trust

ಕೆಳವರ್ಗದವರು ಹಿಂದು ಕಕ್ಷೆಯಲ್ಲಿ ಉಳಿದಿದ್ದಾರೆ. ಇದೇ ಅಧ್ಯಾತ್ಮಿಕ ಚಿಂತನೆ ಗ್ರಾಮೀಣ ದಲಿತರು, ಅಶಿಕ್ಷಿತರಾದ ಕೆಳಜಾತಿಯವರನ್ನು ಮುಟ್ಟದಿರುವುದರಿಂದ ಅವರು ಸವರ್ಣೀಯರ ಹಿಂಸೆ ಅಥವಾ ತಿರಸ್ಕಾರ ತಾಳದೆ ಮತಾಂತರಗೊಳ್ಳುತ್ತಾರೆ. ಈ ಕಟು ಸತ್ಯವನ್ನು ಯಲ್ಲಪ್ಪನಂಥವರು ಅರಿಯಲೇ ಬೇಕಾಗಿದೆ. ಇನ್ನಿತರ ಕೆಲವೊಂದು ಅಧ್ಯಾತ್ಮಿಕ ಭಕ್ತಿಪಂಥಗಳೂ ಸಹ ಮತಾಂತರವನ್ನು ತಡೆಗಟ್ಟಿವೆ ಎಂಬುದು ಗಮನಾರ್ಹ.

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಪಿ ಸ್ಯುಃ ಪಾಪಯೋನಯಃ ।
ಸ್ತ್ರೀಯೋ ವೈಶ್ಯಾಸ್ತಥಾ ಶೂದ್ರಾಸ್ತೇಪಿ ಯಾಂತಿ ಪರಾಂ ಗತಿಮ್ ॥
ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ
ಅನಿತ್ಯಮಸುಖಂ ಲೋಕ ಮಿವಂ ಪ್ರಾಪ್ಯ ಭಜಸ್ವ ಮಾಮ್ ॥

ಭಗವದ್ಗೀತೆ ಅ.9, ಶ್ಲೋ. 32 –33

ಈ ಭಗವದ್ಗೀತೆಯ ಶ್ಲೋಕದಲ್ಲಿ ಶ್ರೀಕೃಷ್ಣನು ಹೇಳುತ್ತಾನೆ, "ಎಲೈ ಅರ್ಜುನನೇ ಪಾಪಯೋನಿಜರಾದ ಸ್ತ್ರೀಯರೂ, ವೈಶ್ಯರು, ಶೂದ್ರರೂ ಕೂಡ ನನ್ನನ್ನು ಆಶ್ರಯಿಸಿ ಪರಮಗತಿಯನ್ನು ಹೊಂದುತ್ತಾರೆ. ಹೀಗಿರುವಾಗ ಪುಣ್ಯಯೋನಿಜರೂ ಭಕ್ತರೂ ಆದ ಬ್ರಾಹ್ಮಣರು ಮತ್ತು ರಾಜರ್ಷಿಗಳೂ ಪರಮಗತಿಯನ್ನು ಹೊಂದುವರೆಂದು ಹೇಳಬೇಕಾದುದೇನಿದೆ? ಅನಿತ್ಯವೂ ಅಸುಖವೂ ಆದ ಈ ಲೋಕವನ್ನು ಪಡೆದಿರುವ ನೀನು ನನ್ನನ್ನು ಭಜಿಸು."

ಮನುಸ್ಮೃತಿ :

ಶೂದ್ರಂತು ಕಾರಯೇತ್ ದಾಸಂ ಕ್ರೀತಮಕ್ರೀತ ಏವವಾ
ದಾಸ್ಯಾ ಯೈವಹಿ ಸೃಷ್ಟೋಸೌ ಬ್ರಾಹ್ಮಣಸ್ಯ ಸ್ವಯಂಭುವಾ ॥

ಮನು. 7–413

ಧನವಿತ್ತು ವಿಕ್ರಯಿಸಿರಲಿ ಇಲ್ಲದಿರಲಿ ಶೂದ್ರನನ್ನು ದಾಸನಂತೆ ನಡೆಯಿಸಿಕೊಳ್ಳಬೇಕು. ಸಮಾಜದ ಸರ್ವಶ್ರೇಷ್ಠ ಪುರುಷನಾದ ಬ್ರಾಹ್ಮಣನನ್ನು ತನುವಿನ ಮೂಲಕ ಸೇವಿಸುವುದಕ್ಕಾಗಿಯೇ ಬ್ರಹ್ಮದೇವನು ಶೂದ್ರನನ್ನು ಸೃಷ್ಟಿಸಿದ್ದಾನೆ.

ಅಥಹಾಸ್ಯ ವೇದ ಮುಪಶೃಣ್ವತಃಸ್ತಪು
ಜತುಭ್ಯಾಂ ಶ್ರೋತ್ರ ಪೂರಣಂ ಉದಾಹರಣೇ
ಜಿಹ್ವಾಶ್ಛೇದಃ ಧಾರಣೇ ಶರೀರ ಭೇದಃ ॥ ಗೌತಮ, 12–14

ಅದಾವ ಶೂದ್ರನು ವೇದ ಪಠಣವನ್ನು ಕೇಳುವನೋ ಅವನ ಕಿವಿಗಳಲ್ಲಿ ಅರಗು ಸೀಸಗಳನ್ನು ಕಾಯಿಸಿ ಸುರಿಯತಕ್ಕದ್ದು. ಉದಾಹರಿಸಿದರೆ ನಾಲಿಗೆಯನ್ನು ಕೊಯ್ಯುವುದು, ಅಧ್ಯಯನ ಮಾಡಿದರೆ ವಧಿಸುವುದೆಂದು ಗೌತಮ ಸ್ಮೃತಿ ಹೇಳುತ್ತದೆ. ಶೂದ್ರನ ಅಸ್ತಿತ್ವಕ್ಕೆ, ಅವನ ಶಕ್ತಿಗೆ ಬೆಲೆ ಎಂಬುದು ಕಿಂಚಿತ್ತೂ ಇಲ್ಲ.

ನ ಶೂದ್ರರಾಜ್ಯೇ ನಿವಸೇತ್ ನಾಧಾರ್ಮಿಕ ಜನಾವೃತೇ
ನ ಪಾಷಂಡಿ ಗಣಾಕ್ರಾಂತೇ ನೋಪ ಸೃಷ್ಟೇ ತ್ಯಜ್ಯೈ: ನೃಭಿಃ ॥

ಶೂದ್ರರಾಜನು ಅದಾವ ದೇಶದಲ್ಲಿ ವಾಸವಾಗಿರುತ್ತಾನೋ ಆ ದೇಶದಲ್ಲಿ ವಾಸವನ್ನು ಮಾಡತಕ್ಕದಲ್ಲ. ಅಧಾರ್ಮಿಕ ಜನರಿದ್ದಲ್ಲಿಯೂ ವಾಸ ಮಾಡತಕ್ಕದಲ್ಲ. ಪಾಷಂಡರಿಂದ ಕೂಡಿದ ದೇಶದಲ್ಲಿರಲಾಗದು. ಅಂತ್ಯಜರು ರಾಜರಾಗಿದ್ದ ದೇಶದಲ್ಲಿಯೂ ವಾಸ ಮಾಡಲಾಗದು. ಇಂತೀ ಉಕ್ತಿಗಳಿಂದ ಸ್ಮೃತಿಕಾರರ ದೃಷ್ಟಿಯ ಮಾಪನದಲ್ಲಿ ಶೂದ್ರನ ಅಸ್ತಿತ್ವ, ಶಕ್ತಿ, ಮಾನ ಧನ ಪ್ರಾಣಗಳಿಗೆ ಯಾವ ಬೆಲೆಯೂ ಇಲ್ಲ.

ಶೂದ್ರೋ ಮನುಷ್ಯಾಣಾಂ ಅಶ್ವಃ ಪಶೂನಾಂ
ತಸಮಾತ್ ತೌ ಭೂತ ಸಂಕ್ರಾಮಿತೌ ಅಶ್ವಶ್ಚ ಶೂದ್ರಶ್ಚ ॥

ಮಾನವರಲ್ಲಿ ಶೂದ್ರನು, ಪಶುಗಳಲ್ಲಿ ಕುದುರೆಯು ಸಮಾನರು. ಆದ್ದರಿಂದ ಕುದುರೆಯೂ ಶೂದ್ರರೂ ಬೇರೆ ವರ್ಣದವರನ್ನು ಹೊತ್ತು ನಡೆಯಬೇಕೆಂದು ತೈತ್ತರೀಯ ಸಂಹಿತೆ ಶೂದ್ರರನ್ನು ಪ್ರಾಣಿಗಳ ಮಟ್ಟಕ್ಕೆ ಇಳಿಸಿದೆ". ಇಂಥಾ ವಾಕ್ಯಗಳಿಂದ ಶೂದ್ರನನ್ನು ಮನಬಂದಂತೆ ನಡೆಸಿಕೊಳ್ಳುವ ಹಕ್ಕು ಉಚ್ಚ ವರ್ಣದವರಿಗೆ ಲಭ್ಯವಾಯಿತು. ಇಷ್ಟಪಟ್ಟರೆ ಅವನನ್ನು ಓಡಿಸಬಹುದು ಅಥವಾ ಕೊಂದು ಹಾಕಬಹುದು. ಈ ದೌರ್ಜನ್ಯ ಇನ್ನೂ

ಸ್ಪಷ್ಟವಾಗಿ ವಿಸ್ತಾರವಾಗಿ ಅತ್ರಿಸ್ಮೃತಿಯಲ್ಲಿ ಮುಂದುವರಿಯುತ್ತದೆ.

ವೆಧ್ಯೋರಾಜ್ಞಃ ಸ ವೈಸ್ಯೂದ್ರೋ ಜಪಹೋಮೆ ಪರಶ್ಚಯಃ
ತತೋರಾಜಸ್ಯ ಹಂತಾಸೌ ಯಥಾ ವಹ್ನೇ ಸವ್ವೈ ಜಲಂ ॥

ಬೆಂಕಿಗೆ ನೀರು ವಿನಾಶಕಾರಿಯಾದಂತೆ ಜಪತಪ ಹೋಮಗಳನ್ನು ಮಾಡುವ ಶೂದ್ರನು ರಾಜ್ಯಕ್ಕೆ ವಿನಾಶಕಾರಿಯಾಗುತ್ತಾನೆ. ಅಂಥಾ ಶೂದ್ರನು ವಧೆಗೆ ಸಲ್ಲತಕ್ಕವನು (ಬಹುಶಃ ಈ ಉಕ್ತಿಯನ್ನು ಅನುಸರಿಸಿಯೇ ರಾಮನು ಶಂಭುಕನು ತಪಸ್ಸು ಮಾಡಿದಕ್ಕೆ ಕೊಂದುಹಾಕಿರಬೇಕು) ವರ್ಣಾಶ್ರಮ ಧರ್ಮವು ಹ್ರಾಸವಾಗಿ ಜಾತಿ ರೂಪವನ್ನು ತಳೆದು ಅನ್ಯಾಯ ಮಾಡತೊಡಗಿತು. ಇಂತೀ ಉಕ್ತಿಗಳ ಪ್ರಸಾರವು ದಾನವೀಯ ಪ್ರಭಾವವನ್ನು ಸಮಾಜದ ಮೇಲೆ ಹರಡಿ ಕೃತಕವಾದ ಸ್ವಾರ್ಥವನ್ನು ಉಚ್ಚತೆಯನ್ನು ಬ್ರಾಹ್ಮಣರು ಕಲ್ಪಿಸಿಕೊಂಡು ದಬ್ಬಾಳಿಕೆ ಮಾಡುವದಕ್ಕೆ ಆಸ್ಪದವಿತ್ತಿತು. ಇಂಥಾ ಪ್ರಚಾರದಿಂದ ಅಸ್ಪೃಶ್ಯತೆಯ ಕಹಿ ಫಲ ಬೆಳೆಯಿತು. ಡಾ. ಶ್ರೀ ಅಂಬೇಡಕರರಂಥಾ ಪ್ರತಿಭಾವಂತ ವ್ಯಕ್ತಿ, ಅವರು ರಚಿಸಿದ ಭಾರತೀಯ ಕಾನ್ಸಿಟ್ಯೂಷನ್ ಸರ್ವಮಾನ್ಯವಾಗಿದೆಯೋ ಅವರಿಗೆ ತಕ್ಕ ಮನ್ನಣೆಯನ್ನು ಸಮಾಜವೀಯಲಿಲ್ಲ. ಅವರು ಅಸ್ಪೃಶ್ಯರಾಗಿ ಹುಟ್ಟಿ ಪಡಬಾರದ ಕಷ್ಟಪಟ್ಟು ಅವಹೇಳನ ತಿರಸ್ಕಾರಕ್ಕೆ ಗುರಿಯಾಗಿ ಜನಾಂಗದ ಲೇಸಿಗೆ ಹೋರಾಡಿದರು. ಆದರೆ ವರ್ಣಾಶ್ರಮ ಧರ್ಮದಲ್ಲಿ ಇವರ ಉದ್ಧಾರ ಸಾಧ್ಯವೇ ಇಲ್ಲವೆಂದು ಮನಕ್ಕೆ ಸ್ಪಷ್ಟವಾದ ನಂತರ ಅವರು ಲಕ್ಷೋಪಲಕ್ಷ ಅನುಯಾಯಿಗಳೊಡನೆ ಬೌದ್ಧ ಧರ್ಮ ಸ್ವೀಕಾರ ಮಾಡಿದರು. ಅಷ್ಟೇ ಅಲ್ಲದೆ ಇವತ್ತು ಹತ್ತು ಕೋಟಿಯಷ್ಟು ದಲಿತರು, ರಾಷ್ಟ್ರದ ಬೆನ್ನೆಲುಬಾದ ಒಕ್ಕಲಿಗರು ಶೂದ್ರರೆಂದು ಪರಿಗಣಿಸಲ್ಪಟ್ಟು ಇನ್ನೂ ಯಾವುದೊಂದು ಧರ್ಮ ಸಂಸ್ಕಾರವಿಲ್ಲದಂತಿದ್ದಾರೆ.

ಮಹಾಭಾರತವು ಜಾತೀಯತೆಯನ್ನು ಎತ್ತಿ ಹಿಡಿಯುವದರ ಸಲುವಾಗಿಯೇ ರಚಿತವಾಯಿತು. ಕರ್ಣನಂಥಾ ತ್ಯಾಗಿ, ವೀರ, ಉದಾರಿ, ಶಕ್ತಿಶಾಲಿ, ಮೇಧಾವಿ, ಸದ್ಗುಣಿ, ತತ್ವನಿಷ್ಠ ಇಡೀ ಮಹಾಭಾರತದಲ್ಲೇ ಸಿಕ್ಕಲಾರನು. ಅಂತಹ ಕರ್ಣನು ಶಾಸ, ಶಸ್ತ್ರಾಭ್ಯಾಸ ಮಾಡುವೆನೆಂದರೆ ಗುರುವಾದವನು ಒಪ್ಪಿಗೆ ಕೊಡಲಿಲ್ಲ. ಅವನು ವೇಷ ಬದಲಿಸಿಕೊಂಡು ಉತ್ಕಟ ಅಭೀಪ್ಸೆಯಿಂದ ಹೋಗಿ ವಿದ್ಯೆ ಕಲಿಯುವಾಗ ಪ್ರಸಂಗವಶಾತ್ ಶೂದ್ರನೆಂದು ತಿಳಿದು ತಾನು ಕಲಿಸಿದ ವಿದ್ಯೆ ಎಲ್ಲಾ ಮರೆತು ಹೋಗುವಂತೆ ಗುರುವಾದವನು ಶಾಪ ಕೊಡುವದರ ಅರ್ಥವೇನು?

ಬೇಡರವನಾದ ಏಕಲವ್ಯನು ಬಿಲ್ಲುವಿದ್ಯೆ ಕಲಿಯಬೇಕೆಂದು ಅನನ್ಯ ಆಶೆ ಮತ್ತು ಅತ್ಯುತ್ಕಟ ಭಕ್ತಿಯಿಂದ ದ್ರೋಣನಿಗೆ ಶರಣಾಗಿ, ಅವನ ಮಾರ್ಗದರ್ಶನ ಸಹಾಯವಿಲ್ಲದೇ ಅಸಾಮಾನ್ಯ ಬಿಲ್ಲುಗಾರನಾದ್ದರಿಂದ ದ್ರೋಣನು ತನ್ನ ಕ್ಷತ್ರಿಯ ಶಿಷ್ಯರು ಮುನಿದುದಕ್ಕೆ ಹೆದರಿ, ಅವನ ಗುರುಭಕ್ತಿಯ ಪ್ರತೀಕವಾಗಿ ಗುರು ಕಾಣಿಕೆಯ ಸೋಗು ಹಾಕಿ ಅವನ ಹೆಬ್ಬೆರಳನ್ನು ಪಡೆದುಕೊಂಡು ನಿಸ್ಸಹಾಯಕನ ಮಾಡಿದ್ದು ಎಂಥಾ ಅಮಾನುಷ ! ಅಸುರೀ ಕೃತ್ಯ? ಇದೆಲ್ಲಾ ಜಾತಿ ಸ್ಥಾಪನೆಗೆ ಉಚ್ಚ ನೀಚ ಭಾವನೆಯ ಕಪಟ ನಾಟಕ. ಮಹರ್ಷಿ ದಯಾನಂದ ಸರಸ್ವತಿಯವರು ವಿಶ್ವಾಮಿತ್ರನ, ಮತಂಗ ಮಹರ್ಷಿಯ, ಜಾಬಾಲಿಯ ಹೆಸರನ್ನು ತೋರಿ, ಅವರು ಹೀನಜರಾದರೂ ಬ್ರಾಹ್ಮಣರೆನಿಸಿಕೊಂಡರೆಂದು ಸಮರ್ಥಿಸುತ್ತಾರೆ. ಇಲ್ಲಿ ಒಂದು ವಿಶೇಷವಿದೆ; ವರ್ಣಾಶ್ರಮ ಧರ್ಮವು ಸಾರ್ವತ್ರಿಕವಾಗಿ ಅಂತರ್ ಬದಲಾವಣೆಗೆ ಅವಕಾಶವಿತ್ತಲ್ಲ. ಗುಣೈಕ ದೃಷ್ಟಿಯಿಂದ ಕಂಡೂ ಇಲ್ಲ; ಆದರೆ ವಿಶ್ವಾಮಿತ್ರ, ಏಕಲವ್ಯ ಇಂಥವರು ತಮ್ಮ ಅದ್ವಿತೀಯ ಆಂತರಂಗಿಕ ಶಕ್ತಿಯಿಂದ ಸಮಾಜವು ಎಷ್ಟೇ ಮಟ್ಟಿಹಾಕಿದರೂ ಸೋಲದೆ ತಾವಾಗಿ ಮುಂದೆ ಬಂದರು. ಸಮಾಜವನ್ನು ಎದುರಿಸಿ ಅಮರ ಮಹರ್ಷಿಗಳಾದರು. ಇದಕ್ಕೆಲ್ಲಾ ಅವರ ಆತ್ಮಬಲ. ಆಂತರ್ಯ ಶಕ್ತಿಯೇ ಕಾರಣ. ಆದರೆ ಇವರ ಅಭಿವೃದ್ಧಿಗಾಗಿ ಸಮಾಜವು ಏನೂ ಪಾತ್ರವಹಿಸಿಲ್ಲ.

ಅರ್ಹತೆ ಎಂಬುದು ಒಂದು ಜಾತಿಗೆ ಸೀಮಿತವಾಗಿಲ್ಲ, ಆನುವಂಶಿಕವಾಗಿ ಬರುವದೂ ಇಲ್ಲ. ಅದು ಅಂತರಂಗ ಶಕ್ತಿಯನ್ನು ಅನುಸರಿಸಿದೆ. ಸಮಾಜದ ವಿರುದ್ಧ ಹೋರಾಟದಲ್ಲಿ ಸತ್ಯತೆಯ ಕರವಾಲವನ್ನು ಹಿಡಿದು ಹೋರಾಡಿ ಉನ್ನತ ಮಟ್ಟಕ್ಕೇರಿರುವ ಸುಧಾರಕರು ಜಾತಿಯ ಪರಂಪರೆಗಿಂತ ಅರ್ಹತೆಯ ಪರಂಪರೆಗೆ ಮಹತ್ವವೀಯುತ್ತಾರೆ.

ಈ ಎಲ್ಲ ವೈದಿಕ ಉಕ್ತಿಗಳ ಹಿನ್ನೆಲೆಯಲ್ಲಿ ಶ್ರೀ ಯಲ್ಲಪ್ಪನವರು ಪುನರ್

Digitalized by e-Sahithya Documentation Forum
Sponsored by Sarayu Foundation Trust

ವಿಮರ್ಶೆ ಮಾಡಿ" ಹಿಂದೂ ಧರ್ಮಕ್ಕೆ ವೇದ, ಉಪನಿಷತ್ತು, ಭಗವದ್ಗೀತೆಗಳೇ ಆಧಾರ ಗ್ರಂಥಗಳು; ಈ ಗ್ರಂಥಗಳಲ್ಲಿ ಹೇಳಿರುವ ತತ್ತ್ವಗಳನ್ನೇ ಅಪ್ಪ ಬಸವಣ್ಣನವರು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದವರಲ್ಲವೆ? ಎಂಬ ಮಾತುಗಳನ್ನು ವಾಪಸು ಪಡೆಯಬೇಕು. ಅವನ್ನೇ ಆಚರಿಸುವುದಾದರೆ ಅವರು ತಮ್ಮ ಕುಲಬಾಂಧವರನ್ನು, ಹೆತ್ತವರನ್ನು ತೊರೆಯುವ ಅಗತ್ಯವಿರಲಿಲ್ಲ. ಹೊಸ ಧರ್ಮ ಲಿಂಗಾಯತವನ್ನು ಹುಟ್ಟು ಹಾಕುವ ಪ್ರಸಂಗ ಬರುತ್ತಿರಲಿಲ್ಲ.

ಈವರೆಗೂ ಉಲ್ಲೇಖಿಸಿದ ವೈದಿಕ ಶಾಸ್ತ್ರಗಳ ಮಾತುಗಳಿಗೆ ಏಕೈಕ ಉತ್ತರ ಹೀಗಿದೆ.

ಹೊಲೆಗಂಡಲ್ಲದೆ ಪಿಂಡದ ನೆಲೆಗೆ ಆಶ್ರಯವಿಲ್ಲ.
ಜಲಬಿಂದುವಿನ ವ್ಯವಹಾರವೊಂದೆ;
ಆಸೆಯಾಮಿಷರೋಷಹರುಷ ವಿಷಯಾದಿಗಳೆಲ್ಲಾ ಒಂದೆ.
ಏನನೋದಿ, ಏನಕೇಳಿ ಏನು ಫಲ?
ಕುಲಜನೆಂಬುದಕ್ಕೆ ಆವುದು ದೃಷ್ಟ?
ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ
ಆತ್ಮಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ"?
ಎಂದುದಾಗಿ,
ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ; ವೇದವನೋದಿ ಹಾರುವನಾದ
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?
ಇದು ಕಾರಣ ಲಿಂಗದೇವಾ,
ಲಿಂಗಸ್ಥಲವನರಿದವನೆ ಕುಲಜನು!

ಯಲ್ಲಪ್ಪ : ಲಿಂಗಾಯತರು ಸಂಪ್ರದಾಯ, ಆಚಾರ ನಿಯಮಗಳು, ಪೂಜಾ ಪದ್ಧತಿಗಳು ಸನಾತನ(ಹಿಂದೂ) ಧರ್ಮಕ್ಕೆ ಪೂರಕವಾಗಿವೆಯೆ? ಅಥವಾ ಮಾರಕವಾಗಿವೆಯೇ? ಮೇಲಿನ ಗ್ರಂಥಗಳ ತತ್ತ್ವಗಳಲ್ಲಿ ಎಲ್ಲಿಯಾದರೂ ವಿಗ್ರಹಾರಾಧನೆಯನ್ನು, ಹೋಮ, ಯಜ್ಞಗಳನ್ನು ಮಾಡಬೇಕು, ಕೇವಲ ಮಂದಿರಗಳಲ್ಲಿ ಮಾತ್ರ ಭಗವಂತನಿದ್ದಾನೆ ಎಂದು ಹೇಳಲಾಗಿದೆಯೇ?

ಮಾತಾಜಿ: ಲಿಂಗಾಯತರು ಆಚರಿಸುತ್ತಿರುವ ಎನ್ನುವ ಬದಲು "ಲಿಂಗಾಯತ ಧರ್ಮವು ಆಚರಿಸಲು ಹೇಳುವ" ಎಂದು ಯಲ್ಲಪ್ಪನವರು ಹೇಳಬೇಕಿತ್ತು. ಲಿಂಗಾಯತ ಧರ್ಮವು ಬೋಧಿಸುವ ಸಂಪ್ರದಾಯ, ಆಚಾರ-ನಿಯಮಗಳು, ಪೂಜಾ ಪದ್ಧತಿಗಳು ಸನಾತನ ಹಿಂದೂ ಧರ್ಮದ ಆಚರಣೆಗಳಿಂದ ಪೂರ್ತಿ ಬೇರೆಯಾಗಿವೆ; ಮತ್ತು ಹಿಂದೂ ಧರ್ಮದ ಆಚರಣೆಗಳು ಪೂರ್ತಿ ಖಂಡಿಸಲ್ಪಟ್ಟಿವೆ.

1. ಗಣಪತಿ, ಲಕ್ಷ್ಮಿ ಇತ್ಯಾದಿ ಪೂಜೆ, ಗಿಡಮರಗಳ ಪೂಜೆ, ನವಗ್ರಹಗಳಲ್ಲಿ ನಂಬಿಕೆ-ಆರಾಧನೆ, ತೀರ್ಥ- ಕ್ಷೇತ್ರ ಯಾತ್ರೆಯು ಪುಣ್ಯಪ್ರದ ಎಂಬ ನಂಬಿಕೆ ಈ ಯಾವುವನ್ನೂ ಲಿಂಗಾಯತ ಧರ್ಮವು ಪುರಸ್ಕರಿಸಿಲ್ಲ.

2. ವಿಗ್ರಹಾರಾಧನೆ ಹಿಂದು ಧರ್ಮದ ಜೀವಾಳ; ನೂರಕ್ಕೆ 99 ರಷ್ಟು ಜನರಲ್ಲಿ ಇದೇ ಆಚರಣೆಯಲ್ಲಿರುವುದು. ಇದಕ್ಕೆ ಶಾಸ್ತ್ರ ಪ್ರಮಾಣವನ್ನೇಕೆ ಹುಡುಕಬೇಕು.

3. ಮೇಲಿನ ಗ್ರಂಥಗಳಲ್ಲಿ ಹೋಮ-ಯಜ್ಞಗಳನ್ನು ಮಾಡಬೇಕು. ಕೇವಲ ಮಂದಿರಗಳಲ್ಲಿ ಮಾತ್ರ ಭಗವಂತನಿದ್ದಾನೆ ಎಂದು ಹೇಳಲಾಗಿದೆಯೆ? ಎಂದು ಯಲ್ಲಪ್ಪ ಪ್ರಶ್ನಿಸಿದ್ದಾರೆ. ಇದರಿಂದ ಅವರಿಗೆ ಹಿಂದು ಧರ್ಮದ ಅ ಆ ಇ ಈ ಸಹ ತಿಳಿದಿಲ್ಲ ಎನ್ನಿಸುತ್ತದೆ. ವೈದಿಕ ಹಿಂದು ಧರ್ಮದ ಪ್ರಮುಖ ಆಚರಣೆ ಹೋಮ. ಇದರ ಮೂಲಕವೇ ದೇವತೆಗಳಿಗೆ ಹವಿಸ್ಸು ಅರ್ಪಿಸುವುದು ಎಂಬ ನಂಬಿಕೆ ಇದೆ. ಸೀತೆಯ ಪಾವಿತ್ರ್ಯವನ್ನು ಪರೀಕ್ಷಿಸುವಾಗ ಅಗ್ನಿಯ ಮೂಲಕ ಪರೀಕ್ಷಿಸಲಾಯಿತು. ಅಜಯಾಗದಲ್ಲಿ ಆಡನ್ನು, ಗಜಯಾಗದಲ್ಲಿ ಆನೆಯನ್ನು, ಅಶ್ವಮೇಧಯಾಗದಲ್ಲಿ ಕುದುರೆಯನ್ನು ಬಲಿ ಕೊಡಲಾಗುವುದು. ನೈಮಿತ್ತಿಕ ಕರ್ಮಗಳಲ್ಲಿ ಹೋಮವು ಕಡ್ಡಾಯವಿಧಿ. ಆರ್ಯ ಸಮಾಜದ ಅನುಯಾಯಿಗಳು ಹೋಮವನ್ನು ನಿತ್ಯವಿಧಿಯನ್ನಾಗಿ ಮಾಡಿಕೊಂಡಿದ್ದಾರೆ. ಇದಕ್ಕೆ ಪ್ರಮಾಣ ವೈದಿಕ ಶಾಸ್ತ್ರ ಗ್ರಂಥಗಳೇ !

ದೇವರು ಮಂದಿರಗಳಲ್ಲಿ ಮಾತ್ರ ಸೀಮಿತನಾಗಿದ್ದಾನೆ ಎಂದು ಶಾಸ್ತ್ರಗಳಲ್ಲಿ

ಹೇಳಲಾಗಿದೆಯೇ ಎಂದು ಯಲ್ಲಪ್ಪನವರು ಪ್ರಶ್ನಿಸುತ್ತಾರೆ, ಮಂದಿರ ಮಾತ್ರವಲ್ಲ ಗರ್ಭಗುಡಿಗೇ ಸೀಮಿತನಾಗಿದ್ದಾನೆ ಎಂಬ ನಂಬಿಕೆ ತುಂಬಿದೆ. ಅದಕ್ಕಾಗಿಯೇ ಎಲ್ಲರಿಗೂ ಪ್ರವೇಶವಿರುವುದಿಲ್ಲ. ನಿಷೇಧಿಸಲ್ಪಟ್ಟವರು ಗುಡಿಯೊಳಕ್ಕೆ ಬಂದು ಹೋದರೆ ದೇವರು ಅಪವಿತ್ರನಾದ ಎಂದು ಶಾಸ್ತ್ರೋಕ್ತವಾಗಿ ಶುದ್ಧೀಕರಣ ಕಾರ್ಯವನ್ನು ಗುರುವಾಯೂರಪ್ಪನ್ ಮತ್ತು ಅಯ್ಯಪ್ಪ ದೇವಾಲಯಗಳಲ್ಲಿ ಹಮ್ಮಿಕೊಳ್ಳಲಾಯಿತಲ್ಲವೆ? ದ್ವಿಜನಲ್ಲದವನು ಹಣ ಖರ್ಚು ಮಾಡಿ ಗುಡಿ ಕಟ್ಟಿದರು ಅವನು ಗರ್ಭಗುಡಿಯೊಳಕ್ಕೆ ಪ್ರವೇಶಿಸುವ ಹಕ್ಕು ಪಡೆದಿರುವುದಿಲ್ಲ. ರಾಣಿ ರಾಸಮಣಿ ಕಾಳಿ ದೇವಾಲಯ ಕಟ್ಟಿಸಿದಳು. ಆದರೆ ಆಕೆಗೆ ಗರ್ಭಗುಡಿಯೊಳಕ್ಕೆ ಪ್ರವೇಶವಿರಲಿಲ್ಲ. ಗುರು ಬಸವಣ್ಣನವರು ಈ ಗರ್ಭಗುಡಿ ಸಂಸ್ಕೃತಿಯನ್ನು ನಿಷೇಧಿಸಿ ಅನುಭವ ಮಂಟಪ ಸಂಸ್ಕೃತಿ ಅಳವಡಿಸಿದರು. ಎಲ್ಲರಿಗೂ ಇಷ್ಟಲಿಂಗ ನೀಡಿ ಪೂಜೆಯ ಹಕ್ಕು ಕೊಟ್ಟರು. ಪೂಜಾರಿಯ ಮಧ್ಯಸ್ಥಿಕೆ ಅಗತ್ಯವಿಲ್ಲ ಎಂದರು.

ಯಲ್ಲಪ್ಪ : ಭಗವಂತನ ಆರಾಧನೆಗೆ, ಅವನ ಸಾಕ್ಷಾತ್ಕಾರಕ್ಕೆ ಎಲ್ಲಾ ಜೀವಿಗಳಿಗೂ ಹಕ್ಕು ಇದೆ. ವರ್ಣ, ಜಾತಿ, ಮತ ಪಂಥವಲ್ಲ, ಭಗವಂತನ ಆರಾಧನೆಯನ್ನು ಮಾಡಲು ಸ್ತ್ರೀ-ಪುರುಷಾದಿಗಳೆಲ್ಲರಿಗೂ ಸ್ವಾತಂತ್ರ್ಯವಿದೆ. ಮೈತ್ರೇಯಿ, ಗಾರ್ಗೇಯಿ, ಮೀರಾಬಾಯಿ, ಅಹಲ್ಯೆ, ಶ್ರೀ ಮಾತೆ ಶಾರದಾದೇವಿ, ಮಾತಾ ಅಮೃತಾನಂದಮಯಿ ಇವರೆಲ್ಲರೂ ಭಗವಂತನ ದರ್ಶನ ಪಡೆದವರಲ್ಲವೆ ? ಇದರಿಂದ ಹಿಂದೂ ಧರ್ಮದಲ್ಲಿ ಭಗವಂತನ ಆರಾಧನೆಗೆ ಎಲ್ಲರಿಗೂ ಸಮಾನವಾದ ಅವಕಾಶವಿದೆಯೆಂದು ತಿಳಿಯುವುದಿಲ್ಲವೆ ?

ಮಾತಾಜಿ: ಈ ಎಲ್ಲ ಮಾತುಗಳು ಅನ್ಯ ಧರ್ಮಗಳ ಪ್ರಭಾವದಿಂದ, ವಚನ ವಾಙ್ಮಯದಂತಹ ಪ್ರಗತಿಪರ ಶಾಸ್ತ್ರ ಚಿಂತನೆಯಿಂದ ಮೂಡಿದವು. ವೈದಿಕ ಹಿಂದು (ಸನಾತನ) ಧರ್ಮವು ಪೂಜೆಯ ಹಕ್ಕನ್ನು ಎಲ್ಲರಿಗೂ ಕೊಟ್ಟಿಲ್ಲ. ಬ್ರಾಹ್ಮಣ ವರ್ಣದವರಿಗೆ ಪೂಜೆ ಮಾಡುವ ಮತ್ತು ಮಾಡಿಸುವ ಎರಡೂ ಹಕ್ಕು ಇದೆ. ಕ್ಷತ್ರಿಯ, ವೈಶ್ಯರಿಗೆ ಪೂಜೆ ಮಾಡುವ ಹಕ್ಕಿದೆಯೇ ವಿನಾ ಮಾಡಿಸುವ ಹಕ್ಕು ಇಲ್ಲ. ಶೂದ್ರರಿಗೆ ದಲಿತರಿಗೆ ಎರಡೂ ಹಕ್ಕು ಇಲ್ಲ. ಮಹಿಳೆಯರಿಗೂ ಎರಡು ಹಕ್ಕುಗಳಿಲ್ಲ.

ಹಿಂದು ಸಮಾಜದಲ್ಲಿ ಯಾರು ಯಾವ ಭಾವಚಿತ್ರ ಬೇಕಾದರೂ ಕೊಂಡು ಮನೆಯಲ್ಲಿ ಇಟ್ಟುಕೊಂಡು ಜನರು ಪೂಜಿಸುತ್ತಿದ್ದರೆ ಅದು ಧಾರ್ಮಿಕ ಹಕ್ಕನ್ನು ಕೊಟ್ಟಂತೆ ಅಲ್ಲ. ಹಿಂದು ಸಮಾಜದಲ್ಲಿ ಮೊದಲನೆ ದರ್ಜೆಯ ಪ್ರಜೆಯಾದ ಬ್ರಾಹ್ಮಣನಿಗೆ ಗಾಯತ್ರಿ ಮಂತ್ರೋಪದೇಶವಿದೆ. ಯಜ್ಞೋಪವೀತಧಾರಣೆ ಇದೆ ಉಪನಯನ ಸಂಸ್ಕಾರವಿದೆ. ಇದನ್ನು ವರ್ಣಭೇದವಿಲ್ಲದೆ ಎಲ್ಲರಿಗೂ ಕೊಟ್ಟರೆ. ಅದು ಸಮಾನತೆ; ಸ್ತ್ರೀ ಪುರುಷ ಎಂಬ ಲಿಂಗಭೇದವಿಲ್ಲದೆ ಕೊಟ್ಟರೆ ಅದು ಸಮಾನತೆ. ಇನ್ನು ಆಶ್ರಮ ವ್ಯವಸ್ಥೆ. ಬ್ರಹ್ಮಚರ್ಯ, ಗ್ರಾಹಸ್ಥ್ಯ, ವಾನಪ್ರಸ್ಥ, ಸನ್ಯಾಸ ಇವುಗಳ ನೀಡಿಕೆ ಹೀಗಿದೆ.

ಬ್ರಾಹ್ಮಣನಿಗೆ	4	ಆಶ್ರಮಗಳುಂಟು
ಕ್ಷತ್ರಿಯನಿಗೆ	3	ಆಶ್ರಮಗಳುಂಟು, ಸನ್ಯಾಸಕ್ಕೆ ಅವಕಾಶವಿಲ್ಲ
ವೈಶ್ಯನಿಗೆ	2	ಆಶ್ರಮಗಳುಂಟು ವಾನಪ್ರಸ್ಥ ಸನ್ಯಾಸಕ್ಕೆ ಅವಕಾಶವಿಲ್ಲ
ಶೂದ್ರನಿಗೆ	1	ಗ್ರಾಹಸ್ತ್ಯ ಮಾತ್ರ ಹಾಗೆ ಸ್ತ್ರೀಗೂ ಗ್ರಾಹಸ್ತ್ಯ ಮಾತ್ರ

ವೈದಿಕ ಶಾಸ್ತ್ರಗಳ ವಿಧಿ ಹೀಗಿದೆ. ಶೈವ ಶಾಸ್ತ್ರಗಳಲ್ಲಿ ಔದಾರ್ಯವಿದೆ. ಈಗ ಯಾರು ಯಾರನ್ನೂ ಕೇಳುವ, ನಿರ್ಬಂಧಿಸುವ, ಶಿಕ್ಷಿಸುವ ಅಧಿಕಾರವಿಲ್ಲದ್ದರಿಂದ ಯಾರು ಬೇಕಾದರೂ ಕಾವಿ ತೊಡುತ್ತಾರೆ, ಸಾಧು ಸಂತರಾಗುತ್ತಾರೆ. ಅನ್ಯ ಧರ್ಮಗಳ ಪ್ರಭಾವ, ಆಧುನಿಕ ಶಿಕ್ಷಣದ ಪ್ರಭಾವದಿಂದ ಮತ್ತು ಸಮಾಜವೂ ಅನಿಯಂತ್ರಿತವಾಗಿ ಬೆಳೆದಿರುವುದರಿಂದ ಶಾಸ್ತ್ರ-ಸಂಪ್ರದಾಯಗಳು ಮೊದಲಿನಷ್ಟು ಬಿಗಿಯಾಗಿಲ್ಲ. ಹಿಂದೆ ಅಂಥ ಸಂಪ್ರದಾಯವನ್ನು ವಿರೋಧಿಸಿಯೇ ಗುರು ಬಸವಣ್ಣನವರು ಹೊಸ ಧರ್ಮ ಕೊಟ್ಟದ್ದು.

ಮೈತ್ರೇಯಿ, ಗಾರ್ಗೇಯಿ, ಮೀರಾಬಾಯಿ, ಅಹಲ್ಯ, ಶ್ರೀಮಾತೆ ಶಾರದಾದೇವಿ ಮಾತಾ ಅಮೃತಾನಂದಮಯಿ ಇವರೆಲ್ಲರೂ ಭಗವಂತನ ದರ್ಶನ ಪಡೆದವರಲ್ಲವೆ? ಇದರಿಂದ ಹಿಂದೂ ಧರ್ಮದಲ್ಲಿ ಭಗವಂತನ ಆರಾಧನೆಗೆ ಎಲ್ಲರಿಗೂ ಸಮಾನವಾದ ಅವಕಾಶವಿದೆಯೆಂದು ತಿಳಿಯುವುದಿಲ್ಲವೆ? ಎಂದಿದ್ದಾರೆ ಯಲ್ಲಪ್ಪನವರು.

Digitalized by e-Sahithya Documentation Forum
Sponsored by Sarayu Foundation Trust

ಮಾತಾಜಿ : ಯಲ್ಲಪ್ಪನವರು ಪುನಃ ಪುನಃ ಹೇಳಿದ್ದೇ ಹೇಳುತ್ತಾರೆ. ಅವರಿಗೆ ಸಾಮಾಜಿಕ ಕಟ್ಟುಪಾಡುಗಳ ಅರಿವಿಲ್ಲ. ಉದಾ: ವೈದಿಕ ಶಾಸ್ತ್ರಗಳ ಪ್ರಕಾರ ಸ್ತ್ರೀಯು ಶೂದ್ರಳು ಏಕೆಂದರೆ ಆಕೆ ಮಾಸಿಕವಾಗಿ ಮುಟ್ಟಾಗುವಳು. ಋತುಸ್ರಾವವಿರುವವರೆಗೂ ಹೊರಗೆ ಕುಳಿತುಕೊಳ್ಳಬೇಕು. ಏಕೆಂದರೆ ಆಕೆ ರಜಸೂತಕದಿಂದ ಬಾಧಿತಳಾಗಿರುವಳು. ಬಸವಾದಿ ಪ್ರಮಥರು ಈ ರಜಸೂತಕದ ಕಲ್ಪನೆಯನ್ನೇ ತೊಡೆದು ಹಾಕಿದರು. ಪಿಂಡೋತ್ಪತ್ತಿಗೆ ಕಾರಣವಾಗುವ ರಜಸ್ಸು ಶರೀರದ ಒಳಗಿನಿಂದ ಹೊರಗೆ ಸ್ರವಿಸಿದ ಮಾತ್ರಕ್ಕೆ ಸೂತಕ ಹೇಗೆ ಆಗುತ್ತದೆ? ಈ ಕಾರಣಕ್ಕಾಗಿ ಸ್ತ್ರೀಯನ್ನು ಧಾರ್ಮಿಕ ಸಂಸ್ಕಾರದಿಂದ ವಂಚಿತಳನ್ನಾಗಿ ಮಾಡಬಾರದು ಎಂದು ದೀಕ್ಷೆಯನ್ನು ಪಡೆಯುವ ಅವಕಾಶ ನೀಡಿದರು. ಕಾಲೇಜಿಗೆ ಹೋಗುವ ಹಿಂದು ಹುಡುಗಿಯರು ಎಲ್ಲಿ ಹೊರಗೆ ಕೂರುತ್ತಾರೆ, ರಜಸೂತಕ ಆಚರಿಸುತ್ತಾರೆ? ಎಂದು ಯಲ್ಲಪ್ಪನವರು ಕೇಳಬಹುದು. ಹಿಂದು ಶಾಸ್ತ್ರವಿಧಿ ಆಚರಿಸಲು ಅವರಿಗೆ ಸಾಧ್ಯವಿಲ್ಲದ್ದರಿಂದ ಅವರು ಬದಲಾವಣೆಗೊಂಡಿದ್ದಾರೆ ಅಷ್ಟೆ. ಲಿಂಗಾಯತ ಧರ್ಮದಲ್ಲಿ ಹಾಗಲ್ಲ, ಮೂಲ ನಂಬಿಕೆಯಲ್ಲೇ ಬದಲಾವಣೆ ಬಂದಿದೆ.

ಮೈತ್ರೇಯಿ, ಗಾರ್ಗೇಯಿ ಅಸಾಮಾನ್ಯ ಬುದ್ಧಿವಂತರಾಗಿದ್ದರು. ಮನೆಯಲ್ಲಿ ನಡೆಯುತ್ತಿದ್ದ ಚರ್ಚೆಗಳಿಂದ ವಿದ್ವತ್ ಪೂರ್ಣರಾಗಿ ಚರ್ಚೆಯಲ್ಲಿ ಭಾಗವಹಿಸಿದರು ಅಮೃತಾನಂದಮಯಿಯಂಥವರು ಒಬ್ಬ ಸಂತರಾಗಿ ಕೀರ್ತಿಶಾಲಿಯಾಗಿರಬಹುದು. ಹಿಂದು ಸಂಪ್ರದಾಯದ ಶಂಕರ ಮಠ, ಮಾಧ್ವಮಠದಂತಹವುಗಳ ಅಧಿಕಾರದ ಸಾಮಾಜಿಕ, ಧಾರ್ಮಿಕ ಹಕ್ಕು ಕೇಳಲಿ ಆಗ ಹಿಂದು ಧರ್ಮದ ಪ್ರಗತಿಪರ ಚಿಂತನೆ ತಿಳಿಯುತ್ತದೆ. ನಾವು ಮಹಿಳಾ ಜಗದ್ಗುರು ಪೀಠ-ಬೇರೆಯವರದ್ದು ಕೇಳದೆ ಹಕ್ಕು ಸ್ಥಾಪಿಸಲು, ಸ್ವತಂತ್ರವಾಗಿ ಮಾಡಲು ಹೊರಟಾಗ ಸಂಪ್ರದಾಯ ಮಠಗಳವರು ಹೇಳಿದರು. "ಮಾತೆ ಮಹಾದೇವಿಯವರು ಶರಣಮ್ಮನಾಗಿ ಇರಲಿ, ಬೇಡವೆನ್ನುವವರಾರು? ಆದರೆ ಮಹಿಳೆಯರ ಗುರುಪೀಠ ಸ್ಥಾಪಿಸುತ್ತೇನೆ ಎನ್ನುವುದು. ತಪ್ಪು" ವೈಯಕ್ತಿಕ ಪ್ರತಿಭೆ, ಸಾಧನೆಯಿಂದ ಏಕಲವ್ಯ ಬಿಲ್ಲು ವಿದ್ಯಾಪಾರಂಗತನಾಗಿರಬಹುದು; ಆದರೆ ಅವನಿಗೆ ಕ್ಷಾತ್ರ ವಿದ್ಯೆಗೆ ಅವಕಾಶ ಸಿಕ್ಕಿತೆ? ಕನಕದಾಸರಿಗೆ ಗುರುಪೀಠ ಸಿಕ್ಕಿತೆ? ಅದೇ ಅಲ್ಲಮ ಪ್ರಭುದೇವರು ಶೂದ್ರಾತಿಶೂದ್ರ ಕುಲದಲ್ಲಿ ಹುಟ್ಟಿದರೂ ಬಸವ ಧರ್ಮದ ಸಂವಿಧಾನದಿಂದಾಗಿ ಜಗದ್ಗುರುವಾದರು; ಶೂನ್ಯ ಪೀಠದ ಪ್ರಥಮ ಗುರುವಾದರು.

ಅಧ್ಯಾತ್ಮಿಕ ಪಂಥವಾದ ರಾಮಕೃಷ್ಣ ಮಿಷನ್ ಎಲ್ಲರಿಗೂ ಸನ್ಯಾಸದ ಕುರುಹಾದ ಕಾವಿ ವಸ್ತ್ರ ಕೊಡುತ್ತಿರಬಹುದು, ಆದರೆ ಸಾಂಪ್ರದಾಯಿಕ ಹಿಂದು ಧರ್ಮ ಬ್ರಾಹ್ಮಣೇತರರಿಗೆ, ಸ್ತ್ರೀಯರಿಗೆ ಸನ್ಯಾಸವನ್ನು ನಿರಾಕರಿಸುತ್ತದೆ. ಪ್ರಥಮ ಬಾರಿಗೆ ಗೌತಮ ಬುದ್ಧನು ಎಲ್ಲ ವರ್ಣದವರಿಗೆ ಸನ್ಯಾಸವನ್ನು, ಕಾವಿ ವಸ್ತ್ರವನ್ನು ಕೊಟ್ಟಾಗ ಸಾಂಪ್ರದಾಯಿಕ ವೈದಿಕರಿಂದ ತೀವ್ರ ಪ್ರತಿರೋಧ ಬೊಂದಿತು. ಬೌದ್ಧ ಧರ್ಮ ಸ್ವತಂತ್ರ ಧರ್ಮ ಎನ್ನಿಸಿಕೊಂಡುದು. ಕೆಳಗಿನ ಕಾರಣಗಳಿಂದ ;

1. ವೇದ ಪ್ರಾಮಾಣ್ಯ ನಿರಾಕರಿಸಿ
2. ಎಲ್ಲರಿಗೂ ಧರ್ಮ ಸಂಸ್ಕಾರ ನೀಡಿ.
3. ಎಲ್ಲರಿಗೂ ಸನ್ಯಾಸದ ಹಕ್ಕು ನೀಡಿ
4. ಯಜ್ಞಯಾಗಾದಿ ಕರ್ಮಕಾಂಡ, ಪ್ರಾಣಿ ಬಲಿ ನಿಷೇಧಿಸಿ.

(ಮುಂದುವರಿಯುವುದು.....)

ಅಕ್ಕನ ಅಮರವಾಣಿ

ದಯವಿಲ್ಲದ ಧರ್ಮ, ಉಭಯವಿಲ್ಲದ ಭಕ್ತಿ
ನಯನವಿಲ್ಲದ ಶಬ್ದವದೇತಕ್ಕೆ ಪ್ರಯೋಜನ
ಎನ್ನ ದೇವ ಚನ್ನಮಲ್ಲಿಕಾರ್ಜುನ
ಮಹಾದೇವಿಯಕ್ಕ ಪ್ರಿಯ ಲಿಂಗದೇವ ?




ಕಲ್ಯಾಣ ಕ್ರಾಂತಿ ನೃತ್ಯರೂಪಕ ಮಾಡಿದ ಕೊಪ್ಪಳ ರಾ.ಬ.ದಳ (ಬಸವಾಂಕುರದ) ಮಕ್ಕಳು










ಮೆರವಣಿಗೆಯಲ್ಲಿ ಬಸವಣ್ಣನವರ ಆಡುತ್ತ, ಹಾಡುತ್ತ ಕೊಂಡಾಡುತ್ತಿರುವ ಶರಣ ಸಮೂಹ.

Digitalized by e-Sahithya Documentation Forum
Sponsored by Sarayu Foundation...

CPMG/KA/BGW-50/2006-2008 WPP(W)-17 R.No.19980/



ಕಾನೂನು ಮತ್ತು ಪೌರಾಡಳಿತ ಸಚಿವರಾದ ಎಸ್.ಸುರೇಶ್‌ಕುಮಾರ್,ಸಾವಿತ್ರಿದೇವಿ ಅವರಿಗೆ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ ,ಪೂಜ್ಯ ಬಸವಕುಮಾರ ಸ್ವಾಮಿಜಿ ಮತ್ತು ರಾಷ್ಟ್ರೀಯ ಬಸವ ದಳದವತಿಯಿಂದ ಪುಷ್ಪವೃಷ್ಟಿ ಮತ್ತು ಆರತಿ.



ಹಿಮಾಲಯ(Everest) ಪರ್ವತಾರೋಹಣ ಮಾಡಿದ ಶರಣೆ ಅನ್ನಪೂರ್ಣ ವಿ. ಕರವಿನಕೊಪ್ಪ, ರಾ.ಬ.ದಳ. ಮೈಸೂರು

Digitalized by e-Sahithya Documentation Forum
Sponsored by Sarayu Foundation Trust